ಭಾನುವಾರ, ಫೆಬ್ರುವರಿ 18, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಮ್ಮಿಲನ

ಕಲಬುರಗಿಯ ಶರಣಬಸವೇಶ್ವರ ಜಾತ್ರೆ ಮೈದಾನದಲ್ಲಿ ಶನಿವಾರ ನಡೆದ ವಿಶ್ವಕನ್ನಡಿಗರ ಸಮ್ಮಿಲನ ಕಾರ್ಯಕ್ರಮದಲ್ಲಿ ನಟ ಮುರಳಿ ಪಾಲ್ಗೊಂಡರು



ತ್ಯಾಜ್ಯ ಸಂಸ್ಕರಣೆ, ಭೂಭರ್ತಿ ಸ್ಥಳ ಸುತ್ತಮುತ್ತಲಿನ ಪ್ರದೇಶಗಳಿಗೆ ಮೂಲಸೌಕರ್ಯ

ಹಳ್ಳಿಗಳ ಅಭಿವೃದ್ಧಿಗೆ ₹225 ಕೋಟಿ ನಿಗದಿ

• ಆರ್. ಮಂಜುನಾಥ್


ಕೆಸಿಡಿಸಿ ಘಟಕದಲ್ಲಿ ಶೇಖರಣೆಯಾಗಿರುವ ಕಸದ ರಾಶಿ

ಬೆಂಗಳೂರು: ತ್ಯಾಜ್ಯ ಸಂಸ್ಕರಣೆ ಘಟಕ ಹಾಗೂ ಭೂಭರ್ತಿ ಸ್ಥಳಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಮೂಲಸೌಕರ್ಯ ಹಾಗೂ ಅಭಿವೃದ್ಧಿ ಕೆಲಸಗಳನ್ನು ನಡೆಸಲು ಬಿಬಿಎಂಪಿ ₹225 ಕೋಟಿ ವೆಚ್ಚ ಮಾಡಲು ಮುಂದಾಗಿದೆ.

'ಕಸ ಹಾಕಲು ಮಾತ್ರ ನಮ್ಮ ಜಾಗ ಬೇಕು, ಅಭಿವೃದ್ಧಿ ಮಾಡಲು ಬರುವುದಿಲ್ಲ' ಎಂದು ಸ್ಥಳೀಯರು ಆರೋಪಿಸುತ್ತಲೇ ಇದ್ದಾರೆ. ಇದಕ್ಕೆಲ್ಲ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್ (ಬಿಎಸ್‌ಡಬ್ಲ್ಯುಎಂಎಲ್) ತುರ್ತು, ಮಧ್ಯಮ ಹಾಗೂ ದೀರ್ಘಕಾಲದ ಯೋಜನೆ ರೂಪಿಸಿದೆ. ಅದರಂತೆ ಮೂರು, ಆರು, ಒಂಬತ್ತು ಮತ್ತು 12 ತಿಂಗಳಲ್ಲಿ ಕಾಮಗಾರಿಗಳನ್ನು ಮುಗಿಸಲು ನಿರ್ಧರಿಸಿದೆ.

ಎರಡು ಹಂತಗಳಲ್ಲಿ ₹181.56 ಕೋಟಿ ಹಾಗೂ ₹43.84 ಕೋಟಿಯ ತಲಾ ಎಂಟು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

'ತ್ಯಾಜ್ಯ ಸಂಸ್ಕರಣೆ ಹಾಗೂ ಭೂ ಭರ್ತಿ ಸ್ಥಳಗಳ ಸುತ್ತಮುತ್ತಲಿನ ಪ್ರದೇಶ ಹಾಗೂ ಹಳ್ಳಿಗಳ ನಿವಾಸಿಗಳು ಅಭಿವೃದ್ಧಿಗಾಗಿ ಒತ್ತಾಯ ಮಾಡುತ್ತಿದ್ದರು. ಬಿಬಿಎಂಪಿ ವತಿಯಿಂದ ಒಂದಷ್ಟು ಅಭಿವೃದ್ಧಿ ಕಾರ್ಯಗಳಾಗಿದ್ದರೂ, ಅದು ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಇದನ್ನೆಲ್ಲ ಪರಿಗಣಿಸಿ, ಮುಖ್ಯ ಆಯುಕ್ತರ ಸೂಚನೆ ಮೇರೆಗೆ ಘನತ್ಯಾಜ್ಯ ನಿರ್ವಹಣೆಯ ವಿಶೇಷ ಆಯುಕ್ತರ ಮಾರ್ಗದರ್ಶನದಲ್ಲಿ ಸಮಗ್ರ ಯೋಜನೆಯನ್ನು ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ರೂಪಿಸಲಾಗಿದೆ' ಎಂದು ಎಂಜಿನಿಯರ್‌ಗಳು ತಿಳಿಸಿದರು.

'ಹಳ್ಳಿಗಳಲ್ಲಿ ಮೂಲಸೌಕರ್ಯದ ಕೊರತೆ ಇದ್ದು ಅವುಗಳನ್ನು ಒದಗಿಸಲು ನಿರ್ಧರಿಸಲಾಗಿದೆ. ರಸ್ತೆ, ಚರಂಡಿ ಸೇರಿದಂತೆ ಅಗತ್ಯವಾದ ಸೌಲಭ್ಯಗಳನ್ನು ನೀಡಲು ಯೋಜನೆ ರೂಪಿಸಲಾಗಿದ್ದು, ಇದಕ್ಕಾಗಿ ಟೆಂಡರ್‌ಗಳನ್ನೂ ಕರೆಯಲಾಗಿದೆ. ಫೆಬ್ರುವರಿ ಅಂತ್ಯಕ್ಕೆ ಟೆಂಡರ್ ಅಂತಿಮವಾಗಲಿದ್ದು, ನಂತರ ಸರ್ಕಾರದಿಂದ ಅನುಮೋದನೆ ಪಡೆದು ಗುತ್ತಿಗೆಯ ಕಾರ್ಯಾದೇಶ ನೀಡಲಾಗುವುದು' ಎಂದು ಮಾಹಿತಿ ನೀಡಿದರು.

'ತುರ್ತಾಗಿ ಅಗತ್ಯವಿರುವ ಕಾಮಗಾರಿಗಳನ್ನು ಮೂರು ತಿಂಗಳಲ್ಲಿ ಮುಗಿಸಲು ಯೋಜಿಸಲಾಗಿದೆ. ಇದಕ್ಕಾಗಿಯೇ ಪ್ರತಿಯೊಂದು ಸಂಸ್ಕರಣೆ ಘಟಕ ಹಾಗೂ ಭೂಭರ್ತಿ ಸ್ಥಳಗಳಿಗೆ ಪ್ರತ್ಯೇಕವಾಗಿ ಯೋಜನೆ ರೂಪಿಸಲಾಗಿದೆ. ಇನ್ನೊಂದು ವರ್ಷದೊಳಗೆ ಈ ಎಲ್ಲ ಸ್ಥಳಗಳ ಸುತ್ತಮುತ್ತಲಿನ ಪ್ರದೇಶದ ಹಳ್ಳಿಗಳಲ್ಲಿ ಅಗತ್ಯ ಮೂಲಸೌಕರ್ಯವನ್ನು ಒದಗಿಸುವ ಕಾರ್ಯ ಪೂರ್ಣಗೊಳ್ಳಲಿದೆ' ಎಂದು ಹೇಳಿದರು.

ಎಲ್ಲಿ ಎಷ್ಟು ವೆಚ್ಚ?

ಸ್ಥಳ–ಅಭಿವೃದ್ಧಿ ಕಾಮಗಾರಿ	ವೆಚ್ಚ (₹ ಕೋಟಿಗಳಲ್ಲಿ)	ನಿಗದಿತ ಅವಧಿ (ತಿಂಗಳು ಗಳಲ್ಲಿ)
ಎಲ್ಲ ಭೂಭರ್ತಿ ಸ್ಥಳಗಳು, ಒಣತ್ಯಾಜ್ಯ ಸಂಗ್ರಹ, ವರ್ಗಾವಣೆ ಕೇಂದ್ರಗಳ ಸುತ್ತಲೂ ಗೋಡೆ ನಿರ್ಮಾಣ	7.98	6
ಸಂಸ್ಕರಣೆ ಘಟಕಗಳಿಂದ ರಾಸಾಯನಿಕ ಸಾಗಣೆ	9.4	12
ಬೆಲ್ಲಹಳ್ಳಿ ಭೂಭರ್ತಿ ಸ್ಥಳದ ಸುತ್ತಮುತ್ತ	39.77	12
ಬಾಗಲೂರು ಭೂಭರ್ತಿ ಸ್ಥಳದ ಸುತ್ತಮುತ್ತ	39.95	12
ಕಾಡಅಗ್ರಹಾರ, ಮಿಟ್ಟಗಾನಹಳ್ಳಿ, ಕಣ್ಣೂರು ಭೂಭರ್ತಿ ಸ್ಥಳ ಹಾಗೂ ಮಂಡೂರು ಬಯೊಮೈನಿಂಗ್ ಸ್ಥಳದ ಸುತ್ತಮುತ್ತ	23.94	9
ಸುಬ್ರಹ್ಮಣ್ಯಪಾಳ್ಯ, ಸೀಗೇಹಳ್ಳಿ, ದೊಡ್ಡಬಿದರಕಲ್ಲು, ಕನ್ನಹಳ್ಳಿ, ಲಿಂಗಧೀರನಹಳ್ಳಿ ಸಂಸ್ಕರಣೆ ಘಟಕಗಳ ಸುತ್ತಮುತ್ತ	39.95	12
ಚಿಕ್ಕನಾಗಮಂಗಲ ಸಂಸ್ಕರಣೆ ಘಟಕದ ಸುತ್ತಮುತ್ತ	9.97	9
ಹುಲ್ಲಹಳ್ಳಿ ಭೂಭರ್ತಿ ಸ್ಥಳದ ಸುತ್ತಮುತ್ತ	12.60	9
ಎಂಎಸ್‌ಜಿಪಿ ಸಂಸ್ಕರಣ ಘಟಕದ ಸುತ್ತಮುತ್ತ	1.59	3
ಕೆಸಿಡಿಸಿ ಸಂಸ್ಕರಣೆ ಘಟಕದ ಸುತ್ತಮುತ್ತ	1.59	3
ಬಿಂಗಿಪುರ ಮತ್ತು ಲಕ್ಷ್ಮಿಪುರದ ಸುತ್ತಮುತ್ತ	8.06	6
ಹುಲ್ಲಹಳ್ಳಿ ಮತ್ತು ಲಕ್ಷ್ಮಿಪುರ ಭೂಭರ್ತಿ ಸ್ಥಳದ ಸುತ್ತಮುತ್ತ	8.06	6
ಕೋಗಿಲು ಸುತ್ತಮುತ್ತಲಿನ ಪ್ರದೇಶ	6.39	6
ಬ್ಯಾಟರಾಯನಪುರ, ಕೊಡಿಗೆಹಳ್ಳಿ, ವಿದ್ಯಾರಣ್ಯಪುರದಲ್ಲಿ ಅಭಿವೃದ್ಧಿ	6.39	6
ಕಣ್ಣೂರು ಭೂಭರ್ತಿ ಸ್ಥಳದ ಸುತ್ತಮುತ್ತ	6.16	6
ಮಿಟ್ಟಗಾನಹಳ್ಳಿ ವೈಜ್ಞಾನಿಕ ಭೂಭರ್ತಿ ಪ್ರದೇಶದ ಅಭಿವೃದ್ಧಿ	5.57	6

ಸುದ್ದಿ 2 ನಿಮಿಷ

'ಸ್ವೀಪ್' ಚಟುವಟಿಕೆಗೆ ಸಿದ್ಧತೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ 'ಸ್ವೀಪ್ ಚಟುವಟಿಕೆ'ಗಳನ್ನು ನಡೆಸುವ ಸಿದ್ಧತೆ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅಂಗವಿಕಲರು, ಹಿರಿಯ ನಾಗರಿಕರು, ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ವಲಸೆ ಕಾರ್ಮಿಕರು ಮತದಾರರ ಪಟ್ಟಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸೇರ್ಪಡೆಗೊಳ್ಳಬೇಕು. ಈ ಸಲುವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉತ್ತಮ ಯೋಜನೆಗಳನ್ನು ರೂಪಿಸಿಕೊಳ್ಳಬೇಕು ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿ ಮತದಾರರನ್ನು ಜಾಗೃತಿಗೊಳಿಸಲು 'ಸ್ವೀಪ್' ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಎಲ್ಲ 28 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸರಾಸರಿ ಮತದಾನಕ್ಕಿಂತ ಕಡಿಮೆ ಮತದಾನವಾಗಿರುವ ಮತಗಟ್ಟೆಗಳನ್ನು ಗುರುತಿಸಬೇಕು. ಆ ಭಾಗದಲ್ಲಿ ಸೂಕ್ತ ಯೋಜನೆಗಳನ್ನು ರೂಪಿಸಿಕೊಂಡು 'ಸ್ವೀಪ್' ಚಟುವಟಿಕೆ ಗಳನ್ನು ನಡೆಸುವ ಮೂಲಕ ಮತದಾನದ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮಕೈಗೊಳ್ಳಲು ಸೂಚನೆ ನೀಡಿದರು.

ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ವಿಧಾನಸಭೆ ಕ್ಷೇತ್ರಗಳ ನಿಗದಿತ ಸಹಾಯಕ ಮತದಾರರ ನೋಂದಣಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಬೇಕು. ಮತದಾನದ ಪ್ರಮಾಣ ಹೆಚ್ಚಿಸಲು ಅಗತ್ಯ ನಿರ್ದೇಶನಗಳನ್ನು ನೀಡಲು ಸೂಚಿಸಿದರು.

ಚುನಾವಣಾ ವಿಶೇಷ ಆಯುಕ್ತೆ ಸೆಲ್ವಮಣಿ, ಸ್ವೀಪ್ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷ ಕಾಂತರಾಜು, ಪಾಲಿಕೆಯ ಕೇಂದ್ರ, ಉತ್ತರ, ದಕ್ಷಿಣ ವ್ಯಾಪ್ತಿಯ ಚುನಾವಣಾಧಿಕಾರಿಗಳು, ಸ್ವೀಪ್ ನೋಡಲ್ ಅಧಿಕಾರಿಗಳು ಹಾಜರಿದ್ದರು.

ಪ್ರಬಂಧ, ಕವನ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: 'ಬಸವ ಜಯಂತಿ ಅಂಗವಾಗಿ ಬಸವ ಸಮಿತಿ ವತಿಯಿಂದ ರಾಜ್ಯಮಟ್ಟದ ಪ್ರಬಂಧ ಹಾಗೂ ಕವನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ' ಎಂದು ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅರಿವು–ಆಚಾರ–ಅನುಭಾವ, ಭಾರತೀಯ ದಾರ್ಶನಿಕ ಪರಂಪರೆ ಮತ್ತು ಬಸವ ದರ್ಶನ, ವಚನ ಚಳವಳಿ–ಸಾಂಸ್ಕೃತಿಕ ಮುಖಾಮುಖಿ, ರಾಜಪ್ರಭುತ್ವ, ಪ್ರಜಾಪ್ರಭುತ್ವ ಮತ್ತು ಶರಣರ ಪ್ರಜಾಪ್ರಭುತ್ವ ಹಾಗೂ ಭಾರತೀಯ ಭಕ್ತಿ ಪರಂಪರೆಯಲ್ಲಿ ಭಕ್ತಿಭಂಡಾರಿ ಬಸವಣ್ಣ ಎಂಬ ವಿಷಯಗಳ ಕುರಿತು ಪ್ರಬಂಧವನ್ನು ಬರೆಯಬಹುದು. ಬಸವಾದಿ ಶರಣರ ತತ್ವಗಳಿಗೆ ಸೀಮಿತವಾಗಿರತಕ್ಕದ್ದು ಎಂಬ ವಿಷಯದ ಮೇಲೆ ಕವನಗಳನ್ನು ರಚಿಸಬಹುದು' ಎಂದು ತಿಳಿಸಿದರು.

'ಪ್ರಬಂಧವು 2 ಸಾವಿರ ಪದಗಳ ಮಿತಿಯಲ್ಲಿರಬೇಕು. ಕವನವು ಒಂದು ಪುಟ ಮೀರಬಾರದು. ಪ್ರಬಂಧ ಮತ್ತು ಕವನಗಳನ್ನು ಮಾರ್ಚ್ 31ರೊಳಗೆ competition@basavasamithi.org ಇ–ಮೇಲ್‌ಗೆ ಕಳಿಸಿಬೇಕು. ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆಯುವವರಿಗೆ ₹25 ಸಾವಿರ, ಎರಡನೇ ಸ್ಥಾನ– ₹10 ಸಾವಿರ, ಮೂರನೇ ಸ್ಥಾನ ಪಡೆದವರಿಗೆ ₹5 ಸಾವಿರ ಹಾಗೂ ಕವನ ಸ್ಪರ್ಧೆಯಲ್ಲಿ ಅಗ್ರ ಮೂರು ಸ್ಥಾನ ಪಡೆದವರಿಗೆ ಕ್ರಮವಾಗಿ ₹10 ಸಾವಿರ, ₹5 ಸಾವಿರ ಹಾಗೂ ₹3 ಸಾವಿರ ನಗದು ಬಹುಮಾನ ನೀಡಲಾಗುವುದು. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು' ಎಂದು ಹೇಳಿದರು. ಮಾಹಿತಿಗೆ: 94489 20888, 94814 22734

ಕಾವೇರಿ 5 ಹಂತ: ಕಾಮಗಾರಿ ಪರಿಶೀಲನೆ

ದಾಸರಹಳ್ಳಿ: ಬಡಾವಣೆ ನಿವಾಸಿಗಳಿಂದ ದೂರು; ನೀರಿನ ಸಮಸ್ಯೆ ಆಲಿಸಿದ ಜಲಮಂಡಳಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ನೆಲಗದರನಹಳ್ಳಿ ಮುಖ್ಯ ರಸ್ತೆಯ ಕಾವೇರಿ ಐದನೇ ಹಂತದ ಯೋಜನೆ ಕಾಮಗಾರಿಯನ್ನು ಶಾಸಕ ಎಸ್‌. ಮುನಿರಾಜು, ಎಂಜಿನಿಯರ್‌ಗಳು, ಅಧಿಕಾರಿಗಳು ಪರಿಶೀಲಿಸಿದರು

ಪೀಣ್ಯ ದಾಸರಹಳ್ಳಿ: ಎತ್ತರದ ಪ್ರದೇಶಗಳಲ್ಲಿರುವ ಮನೆಗಳಿಗೆ ನೀರು ಪೂರೈಕೆ ಸಮಸ್ಯೆ, ಕೊಳವೆ ಬಾವಿಯಲ್ಲಿ ನೀರು ಕಡಿಮೆಯಾಗುತ್ತಿರುವುದು, ವಾಟರ್‌ಮ್ಯಾನ್ ಮಾಡುವ ತಾರತಮ್ಯ, ಸಮಯಕ್ಕೆ ಸರಿಯಾಗಿ ನೀರು ಬಿಡದೇ ಇರುವುದೂ ಸೇರಿದಂತೆ ಅನೇಕ ಸಮಸ್ಯೆಗಳು ಇಲ್ಲಿ ಅನಾವರಣಗೊಂಡವು.

ಬಾಗಲಗುಂಟೆಯ ಜಲ ಮಂಡಳಿ ಕಚೇರಿಯಲ್ಲಿ ನೀರಿನ ಸಮಸ್ಯೆ ಆಲಿಸಲು, ಕುಂದು ಕೊರತೆ ಬಗೆಹರಿಸಲು ಶಾಸಕ ಎಸ್. ಮುನಿರಾಜು ನೇತೃತ್ವದಲ್ಲಿ ನಡೆದ ಸಾರ್ವಜನಿಕ ಸಭೆ ಇದಕ್ಕೆ ವೇದಿಕೆಯಾಯಿತು.

ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಾತನಾಡಿ, 'ಕಾವೇರಿ ನೀರು ಪೂರೈಕೆ ಕಡಿಮೆಯಾಗಿಲ್ಲ. ಖಾಸಗಿ ಮತ್ತು ಬಿಬಿಎಂಪಿಯ ಕೊಳವೆಬಾವಿಗಳಿಂದ 600 ಎಂಎಲ್‌ಡಿ ನೀರನ್ನು ಪೂರೈಸಲಾಗುತ್ತಿತ್ತು. ಮಳೆ ಕೊರತೆಯಿಂದ ಜಲಮಟ್ಟ ಕುಸಿದ ಪರಿಣಾಮ ಹಲವು ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ನೀರಿನ ಅಭಾವ ಉಂಟಾಗಿದೆ' ಎಂದು ವಿವರಿಸಿದರು.

ಕೆಆರ್‌ಎಸ್ ಮತ್ತು ಕಬಿನಿಯಲ್ಲಿ ನೀರು ಕಾಯ್ದಿರಿಸಲು ಪತ್ರ ಬರೆದಿದ್ದೇವೆ. ಉಪಮುಖ್ಯಮಂತ್ರಿ ಸಹ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆ ನೀಡಿದ್ದಾರೆ ಎಂದರು.

ಕಾವೇರಿ ನೀರನ್ನು ಕುಡಿಯಲು ಮಾತ್ರ ಬಳಸಬೇಕು. ಕಾರು ತೊಳೆಯಲು, ಉದ್ಯಾನಕ್ಕೆ ಹಾಯಿಸಲು ಬಳಸಬಾರದು ಎಂದು ಸಲಹೆ ನೀಡಿದರು.

ಎಲ್ಲಿ ಕೊಳವೆ ಬಾವಿ ತೋಡಿದರೆ ನೀರು ಬರಬಹುದು ಎಂದು ತಾಂತ್ರಿಕ ಸಿಬ್ಬಂದಿಯಿಂದ ಮಾಹಿತಿ ಪಡೆದು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಸರಿಯಾಗಿ ಇಂಗುಗುಂಡಿಗಳನ್ನು ಮಾಡಿಕೊಂಡು ಮಳೆ ನೀರನ್ನು ಅದಕ್ಕೆ ಬಿಡಬೇಕು. ಆ ಮೂಲಕ ಅಂತರ್ಜಲ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಮಳೆ ನೀರು ಚರಂಡಿಗಳಿಗೆ ಹರಿದು ಹೋಗಬಾರದು ಎಂದು ಹೇಳಿದರು.

ಕಾವೇರಿ ಯೋಜನೆ ಮುಖ್ಯ ಎಂಜಿನಿಯರ್ ಮಹೇಶ್, ಎಂಜಿನಿಯರ್ ರಾಜೀವ್, ಬೆಂಗಳೂರು ಜಲ ಮಂಡಳಿ ಮುಖ್ಯ ಎಂಜಿನಿಯರ್ ಪರಮೇಶ್ವರಪ್ಪ, ಬಿಬಿಎಂಪಿ ಜಂಟಿ ಆಯುಕ್ತ ಬಾಲಶೇಖರ್, ಎಂಜಿನಿಯರ್ ನಾಗರಾಜು ಭಾಗವಹಿಸಿದ್ದರು.

ಜನರು ಹೇಳಿದ್ದೇನು?



ಎಂಟು ದಿನಕ್ಕೆ ಒಮ್ಮೆ ನೀರು ಬಿಡುತ್ತಿದ್ದಾರೆ. ಅದು ಕೂಡ ಎರಡರಿಂದ ಮೂರು ಗಂಟೆಗಳು ಮಾತ್ರ. ಇದರಿಂದ ಸಂಪು ತುಂಬುವುದಿಲ್ಲ. ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಿದರೂ ಸಾಕಾಗುತ್ತಿಲ್ಲ.
ಬಿ. ಕೃಷ್ಣಮೂರ್ತಿ, ಅಧ್ಯಕ್ಷ, ಡಿಫೆನ್ಸ್ ಕಾಲೊನಿ ಕ್ಷೇಮಾಭಿವೃದ್ಧಿ ಸಂಘ


ಎರಡು ತಿಂಗಳಿನಿಂದ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ. ವಾರಕ್ಕೆ 500 ಲೀಟರ್ ನೀರು ಕೂಡಾ ಬಿಡುತ್ತಿಲ್ಲ. ಕಾವೇರಿ ನೀರಿಗೂ ಹಣ ಕಟ್ಟಿಸಿಕೊಂಡಿದ್ದಾರೆ. ನಮ್ಮ ಕೊಳವೆಬಾವಿಯೂ ಬತ್ತಿದೆ. ಅನಿವಾರ್ಯವಾಗಿ ಟ್ಯಾಂಕರ್ ನೀರಿನ ಮೊರೆ ಹೋಗಿದ್ದೇವೆ.
ರಾಜು, ಸಿದ್ದೇಶ್ವರ ಬಡಾವಣೆ


ಮಂಜುನಾಥ ನಗರದಲ್ಲಿ ನೀರಿಗಾಗಿ ಪೈಪೋಟಿ ಇದೆ. ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರೇ ಇಲ್ಲಿನ ನಿವಾಸಿಗಳಾಗಿದ್ದಾರೆ. ಡ್ರಮ್‌ಗಳಲ್ಲಿ ನೀರು ಶೇಖರಿಸಲು ಆಗುತ್ತಿಲ್ಲ. ಅಲ್ಲಿ ತಮಿಳುನಾಡಿಗೆ ನೀರು ಬಿಡುತ್ತಾರೆ. ಇಲ್ಲಿ ನೀರಿಗಾಗಿ ಜಗಳವಾಗುತ್ತಿದೆ.
ವನಜಾಕ್ಷಿ, ಮಂಜುನಾಥ ನಗರ


ಸರಿಯಾದ ಸಮಯಕ್ಕೆ ನೀರು ಬರುತ್ತಿಲ್ಲ. ರಾತ್ರಿ ವೇಳೆ ಯಾವಾಗಲೂ ಬಿಡುತ್ತಾರೆ. ಅದು ನಮಗೆ ಗೊತ್ತೇ ಆಗುವುದಿಲ್ಲ. ಸಂಪು ತುಂಬುವುದಿಲ್ಲ, ಇದರಿಂದ ನಮಗೆ ನೀರಿಲ್ಲದಂತಾಗಿದೆ ನೀರಿನ ಸಮಸ್ಯೆ ಬಗೆಹರಿಸಲು ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕು.
ವೀರಯ್ಯ ವಸ್ತ್ರದ, ಕಿರ್ಲೋಸ್ಕರ್ ಕಾಲೊನಿ

ಡಿ.ಆರ್‌.ಪಾಟೀಲಗೆ ಕಸಾಪ ದತ್ತಿ ಪ್ರಶಸ್ತಿ


ಡಿ.ಆರ್‌. ಪಾಟೀಲ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2023ನೇ ಸಾಲಿನ 'ಲಿಂಗಮ್ಮ ಮತ್ತು ಡಾ.ಚಿಕ್ಕಕೊಮಾರಿ ಗೌಡ ದತ್ತಿ ಪ್ರಶಸ್ತಿ'ಗೆ ಮಾಜಿ ಶಾಸಕ ಡಿ.ಆರ್.ಪಾಟೀಲ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿಯು ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಚಿಕ್ಕಕೊಮಾರಿ ಗೌಡ ಅವರು ಈ ಪ್ರಶಸ್ತಿಯನ್ನು ಪರಿಷತ್ತಿ ನಲ್ಲಿ ಸ್ಥಾಪಿಸಿದ್ದಾರೆ. ಪ್ರಗತಿಪರ ರೈತರು, ಕರ್ನಾಟಕ ಪಂಚಾಯತ್ ರಾಜ್ ಪರಿಷತ್ ವ್ಯವಸ್ಥೆಯ ಬಗ್ಗೆ ಉತ್ತಮ ಕೆಲಸ ಮಾಡಿದ ಸಂಸ್ಥೆಗಳು, ಜನ ಪ್ರತಿನಿಧಿಗಳು ಮತ್ತು ತಜ್ಞರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ಪರಿಷತ್ತು ತಿಳಿಸಿದೆ.

'ಸರ್ಕಾರ ಅನುದಾನ ನೀಡಬೇಕಿಲ್ಲ'

ಪ್ರಜಾವಾಣಿ ವಾರ್ತೆ


'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಎಂಬ ಅಡಿಬರಹವಿರುವ ಭಾವಚಿತ್ರವನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಬಿಬಿಎಂಪಿ ಕೇಂದ್ರ ಕಚೇರಿಯ ಸಭಾಂಗಣದಲ್ಲಿ ಶನಿವಾರ ಅನಾವರಣಗೊಳಿಸಿದರು. ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಕಲ್ಕೆರೆ, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತೆ ಪ್ರತಿಭಾ, ಉಪ ಆಯುಕ್ತ ಮಂಜುನಾಥ ಸ್ವಾಮಿ, ಲಕ್ಷ್ಮಿದೇವಿ ಹಾಜರಿದ್ದರು

ಬೆಂಗಳೂರು: 'ನಗರದ ಮೂಲಸೌಕರ್ಯ ಯೋಜನೆಗಳಿಗೆ ಸರ್ಕಾರವೇ ಅನುದಾನ ನೀಡಬೇಕೆಂದೂ ಇಲ್ಲ. ನಾವು ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಸೌಲಭ್ಯ ಕಲ್ಪಿಸುತ್ತೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ನಗರದ ಮೂಲಸೌಕರ್ಯಕ್ಕೆ ಎಷ್ಟು ಹಣ ಬೇಕು ಎಂದು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುತ್ತೇವೆ. ಸರ್ಕಾರ ನಮಗೆ ಬೆಂಬಲವಾಗಿ ಹಣ ನೀಡುತ್ತದೆ. ಆದರೆ ಅದುವೇ ಹಣದ ಪ್ರಮುಖ ಮೂಲವಲ್ಲ. ಇಷ್ಟು ದೊಡ್ಡ ನಗರಕ್ಕೆ, ಸ್ಥಳೀಯ ಆಡಳಿತ ಸಂಸ್ಥೆ ಇದೆ. ಇಂತಹ ಸಂಸ್ಥೆಯ 225 ವಾರ್ಡ್‌ಗಳಲ್ಲಿ 1.40 ಕೋಟಿ ಜನಸಂಖ್ಯೆ ಇದೆ. ಇಷ್ಟೆಲ್ಲ ಇದ್ದಮೇಲೆ ಸಂಪನ್ಮೂಲವನ್ನು ನಾವು ಹೆಚ್ಚಿಸಿಕೊಳ್ಳದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ' ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಬಸ್ ಲೇನ್: 'ನಗರದಲ್ಲಿ ಬಸ್‌ಗಳಿಗೆ ಪ್ರತ್ಯೇಕ ಪಥ ಕಲ್ಪಿಸುವ ಬಗ್ಗೆ ಉನ್ನತ ಮಟ್ಟದ ಸಭೆಯಲ್ಲಿ ಸಮಗ್ರವಾಗಿ ಚಿಂತನೆ ನಡೆಯಬೇಕಿದೆ. ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್) ವತಿಯಿಂದ ಸಂಚಾರಕ್ಕೆ ಸಂಬಂಧಿಸಿದಂತೆ ಹಲವು ಸಲಹೆಗಳು ಬಂದಿವೆ. ಬಸ್ ಲೇನ್ ಒಂದು ಕಡೆ ಮಾಡಿದರೆ ಸಾಕಾಗುವುದಿಲ್ಲ. ಎಲ್ಲ ಭಾಗದಲ್ಲೂ ಆಗಬೇಕಿದೆ. ಈ ಬಗ್ಗೆ ಎಲ್ಲರೊಂದಿಗೂ ಸಮಾಲೋಚನೆ ನಡೆಸಿ, ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.


ಆದಿಶಕ್ತಿ ಅಮ್ಮನ ರಥೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು

ಅಮ್ಮನ ಗುಡ್ಡದಲ್ಲಿ ರಥೋತ್ಸವ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಇಲ್ಲಿಗೆ ಸಮೀಪದ ಕನ್ನಮಂಗಲ ಗೇಟ್ ಬಳಿಯ ಅಮ್ಮನಗುಡ್ಡದ ಆದಿಶಕ್ತಿ ಅಮ್ಮನವರ 24ನೇ ಪ್ರತಿಷ್ಠಾಪನಾ ಜಾತ್ರಾ ಮಹೋತ್ಸವ ಹಾಗೂ 14ನೇ ರಥೋತ್ಸವವು ಶುಕ್ರವಾರ ವಿವಿಧ ಕಲಾತಂಡಗಳ ಪ್ರದರ್ಶನ, ಸಕಲ ಕಲಾವಾದ್ಯ ವೈಭವಗಳೊಂದಿಗೆ ನೆರವೇರಿತು.

ಕಳೆದ ಶನಿವಾರ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿಯ ಧ್ವಜಾರೋಹಣದಿಂದ ಪ್ರಾರಂಭವಾದ ಮಹೋತ್ಸವದಲ್ಲಿ ಪರಿಪೂರ್ಣ ಟ್ರಸ್ಟ್‌ನ ಶ್ರೀನಿವಾಸ ಸ್ವಾಮೀಜಿ, ಶಿವಾನಂದ ಆಶ್ರಮದ ರಮಣಾನಂದ ಸ್ವಾಮೀಜಿ, ಗೋಂದಿ ಮಠದ ನಾಮದೇವಾನಂದ ಸ್ವಾಮೀಜಿ ಭಾಗಿಯಾಗಿದ್ದರು.


ಚಂಡಿಕಾಹೋಮ, ಗಿರಿಜಾಕಲ್ಯಾಣ, ನಿತ್ಯವೂ ವಿವಿಧ ಉತ್ಸವಗಳನ್ನು ನಡೆಸಲಾಯಿತು. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸತ್ಯನಾರಾಯಣ ಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಚುಂಚೇಗೌಡ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣಪ್ಪ ಪಾಲ್ಗೊಂಡಿದ್ದರು. ನಿತ್ಯವೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಸ್ಥಾಪಕ ನರಸಿಂಹಮೂರ್ತಿ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು. ಶ್ಯಾಕಲದೇವನಪುರದ ಜಾನಪದ ಕಲಾ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ನಗರದಲ್ಲಿ ಇಂದು

ರಥಸಪ್ತಮಿ 'ಸಾಮೂಹಿಕ ಯೋಗ ಹಾಗೂ ಸೂರ್ಯ ನಮಸ್ಕಾರ': ಉಪಸ್ಥಿತಿ: ದಿನೇಶ್ ಗುಂಡೂರಾವ್, ಆಯೋಜನೆ: ಆಯುಷ್ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 5ರಿಂದ
ತ್ಯಾಗರಾಜ- ಪುರಂದರದಾಸರ ಆರಾಧನೆ, ಕನಕದಾಸರ ಜಯಂತಿ: ಪೂಜಾ ಕಾರ್ಯಕ್ರಮ ಬೆಳಿಗ್ಗೆ 7.30, ಸಂಗೀತ ಕಾರ್ಯಕ್ರಮ ಬೆಳಿಗ್ಗೆ 10ಕ್ಕೆ, ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ ಬೆಳಿಗ್ಗೆ 11.30ಕ್ಕೆ, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ
'ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ'- ಮುಕ್ತ ಸಂವಾದ: ಉದ್ಘಾಟನೆ: ಅಕ್ಕೈ ಪದ್ಮಶಾಲಿ, ದಿನೇಶ್ ಅಮೀನ್ ಮಟ್ಟು, ಆಶಯ ನುಡಿ: ವಿವೇಕಾನಂದ ಎಚ್.ಕೆ., ಉಪಸ್ಥಿತಿ: ಅರುಣ್ ಲೂಯಿಸ್ ಎಸ್. ಜೆ., ಅಧ್ಯಕ್ಷತೆ: ಎಸ್. ಜಿ. ಸಿದ್ಧರಾಮಯ್ಯ, 'ಬಸವ ತತ್ವದ ಮೂಲ ಆಶಯವೇ ಸಂವಿಧಾನ' ಕುರಿತ ಸಂವಾದ: ಎಚ್.ಎನ್. ನಾಗಮೋಹನದಾಸ್, 'ಕುವೆಂಪು ಒಳಗಿನ ಬಸವಣ್ಣ' ಕುರಿತು ಸಂವಾದ: ಕೆ.ವೈ. ನಾರಾಯಣಸ್ವಾಮಿ, 'ಮಹಿಳಾ ಘನತೆ ಮತ್ತು ಸಮಾನತೆ ಸಾಧ್ಯವಾಗಿಸುವ ಬಸವ ತತ್ವ' ಕುರಿತ ಸಂವಾದ: ಎಂ.ಎಸ್. ಆಶಾದೇವಿ, ಆಯೋಜನೆ: ಪ್ರಬುದ್ಧ ಸಮಾಜ ನಿರ್ಮಾಣ ವೇದಿಕೆ, ಸ್ಥಳ: ಬಾಪೂ ಸಭಾಂಗಣ, ಗಾಂಧಿಭವನ, ಶಿವಾನಂದ ವೃತ್ತ, ಬೆಳಿಗ್ಗೆ 9ರಿಂದ


ನಾಗಮೋಹನ ದಾಸ್

ರಾಘವ ಸಂಗೀತೋತ್ಸವ, ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಸತೀಶ್ ಹಂಪಿಹೊಳಿ, ಅಭಿನಂದನಾ ನುಡಿ: ಕಡೂರು ಶ್ರೀಧರಾಚಾರ್ಯ, ಉಪಸ್ಥಿತಿ: ಹೇಮರಾಜು, ಸುಬ್ರಮಣ್ಯ ಮೋಹಿತ, ಮೌನೀಶ್ ಪತ್ತಾರ, ಪ್ರಶಸ್ತಿ ಪ್ರದಾನ: ತೇಜಸ್ವಿ ಸೂರ್ಯ, ಅತಿಥಿಗಳು: ಎಲ್.ಎ. ರವಿಸುಬ್ರಮಣ್ಯ, ಗುರುರಾಜ್, ಆಯೋಜನೆ: ರಾಘವ ಕಲಾ ಸಂಗಮ, ಸ್ಥಳ: ವಾಸವಿ ವಿದ್ಯಾನಿಕೇತನ ಸಮೂಹ ವಿದ್ಯಾ ಸಂಸ್ಥೆಗಳು, ವಿ.ವಿ.ಎನ್. ಕಾಲೇಜು, ವಾಣಿವಿಲಾಸ ರಸ್ತೆ, ವಿವಿ ಪುರ, ಬಸವನಗುಡಿ, ಬೆಳಿಗ್ಗೆ 9.30
ರಾಮಾಯಣ ದರ್ಶನ, ವಸ್ತು ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ವಲ್ಲಭ ಇಂಟರ್ ನ್ಯಾಷನಲ್ ಸ್ಕೂಲ್, ಆರ್.ಸಿ. ಬಡಾವಣೆ, ಸೋಮನಹಳ್ಳಿ, ಕನಕಪುರ ರಸ್ತೆ, ಬೆಳಿಗ್ಗೆ 10
ನರೇಂದ್ರಕುಮಾರ್ ಎಸ್.ಎಸ್., ಅವರು ಅನುವಾದಿಸಿದ 'ಸಾವರ್ಕರ್- ವಿಸ್ಮೃತಿಗೆ ಸರಿದ ಗತಕಾಲದ ಮಾರ್ದನಿಗಳು ಕ್ರಾಂತಿಸೂರ್ಯನ ಮೇಲೆ ಕ್ಷ-ಕಿರಣ' ಪುಸ್ತಕ ಬಿಡುಗಡೆ: ಎಸ್.ಎಲ್. ಭೈರಪ್ಪ, ಅತಿಥಿಗಳು: ಬಾಬು ಕೃಷ್ಣಮೂರ್ತಿ, ಉಪಸ್ಥಿತಿ: ವಿಕ್ರಮ್ ಸಂಪತ್, ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10


ಎಸ್‌.ಎಲ್‌.ಭೈರಪ್ಪ

ರಂಗ ಸಂಕ್ರಮಣ, ಟಿ.ಪಿ. ಕೈಲಾಸಂ ಸ್ಮಾರಕ ನಾಟಕೋತ್ಸವ: ಉದ್ಘಾಟನೆ: ಟಿ.ಎಸ್. ನಾಗಾಭರಣ, ರಂಗಗೀತೆಗಳು: ನಾಗರಾಜ್ ಕೃಷ್ಣಮೂರ್ತಿ ಮತ್ತು ತಂಡ, ವಿಚಾರಸಂಕಿರಣ: ವೈ.ವಿ. ಗುಂಡೂರಾವ್, ಕೃಷ್ಣ ಸುಬ್ಬರಾವ್, ಆಯೋಜನೆ: ಧ್ವನಿ, ಸ್ಥಳ: ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10ರಿಂದ

ಕೆ. ಮೋಹನ್ ದೇವ್ ಆಳ್ವ, ಎಂ.ಕೆ. ಶೈಲಜಾ ಆಳ್ವ ದತ್ತಿ ವೀಣಾವಾದನ ಸ್ಪರ್ಧೆ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಅತಿಥಿ: ಕೆ. ಮೋಹನ್‌ದೇವ್ ಆಳ್ವ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ. ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಕರ್ನಾಟಕ ರಾಜ್ಯ ನದಾಫ್-ಪಿಂಜಾರ ಸಂಘದ ಪದಾಧಿಕಾರಿಗಳ ಪದಗ್ರಹಣ: ಅತಿಥಿಗಳು: ಜಮೀರ್ ಅಹಮದ್ ಖಾನ್, ಅಧ್ಯಕ್ಷತೆ: ಎಚ್.ಎನ್. ರಫೀಕ್ ಅಹ್ಮದ್, ಎಚ್. ಜಲೀಲ್ ಸಾಬ್, ಎಚ್.ಇ. ದಾದಾಕಲಂದರ, ಉಪಸ್ಥಿತಿ: ಜಿ.ಡಿ. ನದಾಫ್, ರಿಯಾಜ್ ಸಲೀಮ್ ನಾಗ್ತೆ, ಆಯೋಜನೆ: ಕರ್ನಾಟಕ ರಾಜ್ಯ ನದಾಫ್–ಪಿಂಜಾರ ಸಂಘ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30
ಮಾ.ನ. ನಾಗರತ್ನ ಅವರ 'ನಿವ್ವಿಯ ಕಲರವ' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಎಸ್.ಜಿ. ಸುಶೀಲಮ್ಮ, ಉದ್ಘಾಟನೆ: ಎಚ್.ಎಲ್. ಪಷ್ಪ, ಅಧ್ಯಕ್ಷತೆ: ಇಂದಿರಾ ಕೃಷ್ಣಪ್ಪ, ಪುಸ್ತಕ ಬಿಡುಗಡೆ: ಕೆ.ವಿ. ರಾಜೇಶ್ವರಿ, ಪುಸ್ತಕದ ಕುರಿತು: ಎಂ. ಚಂದ್ರಮ್ಮ, ಅತಿಥಿಗಳು: ಅನುರಾಧ, ಪದ್ಮ ಬಸವಂತಪ್ಪ, ಕವಿತಾ, ಅನಿತಾ ಲಕ್ಷ್ಮಿ, ಮಂಜುಳ ರಂಗಸ್ವಾಮಿ, ಆಯೋಜನೆ: ಆದಿಜಾಂಬ ಜಾಗೃತಿ, ಸ್ಥಳ: ಸುಮಂಗಲಿ ಸೇವಾಶ್ರಮ, ಆಶ್ರಮ ರಸ್ತೆ, ಆರ್.ಟಿ. ನಗರ, ಬೆಳಿಗ್ಗೆ 10.30
ಬಾಗಿಲಿಗೆ ಬಂತು ಸರ್ಕಾರ–ಸೇವೆಗೆ ಇರಲಿ ಸಹಕಾರ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಬಿಬಿಎಂಪಿ, ಸ್ಥಳ: ಜ್ಞಾನಭಾರತಿ ಬಿಪಿ.ಇಡಿ ಮೈದಾನ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 10.30
ನೃತ್ಯಂ–2024: ಉದ್ಘಾಟನೆ: ಬನಶಂಕರಿ ಅಂಗಡಿ, ಅತಿಥಿಗಳು: ಕಿಶೋರ್ ರೆಡ್ಡಿ, ಪ್ರಶಾಂತ್ ಭಟ್, ಆಯೋಜನೆ: ಕಲ್ಪಶ್ರೀ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಟ್ರಸ್ಟ್, ಸ್ಥಳ: ನಯನ ರಂಗ ಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11
ತಡಗಳಲೆ ಸುರೇಂದ್ರ ರಾವ್ ಅನುವಾದಿಸಿದ 'ವಿ.ಡಿ. ಸಾವರ್ಕರ್–ಏಳು ಮಿಥ್ಯೆಗಳು' ಪುಸ್ತಕ ಬಿಡುಗಡೆ: ಮೀನಾಕ್ಷಿ ಬಾಳಿ, ಮಾತನಾಡುವವರು: ಶಂಸುಲ್ ಇಸ್ಲಾಂ, ಬಿ.ಕೆ. ಹರಿಪ್ರಸಾದ್, ಕೆ. ಪ್ರಕಾಶ್, ಆಯೋಜನೆ: ಕ್ರಿಯಾ ಮಾಧ್ಯಮ, ಸ್ಥಳ: ಸೌಹಾರ್ದ, ನಂ.1, ಮೊದಲನೇ ಅಡ್ಡ ರಸ್ತೆ, ಸಿಎಸ್‌ಐ ಕಾಂಪೌಂಡ್, ಸುಬ್ಬಯ್ಯ ಸರ್ಕಲ್ ಬಳಿ, ಮಿಷನ್ ರಸ್ತೆ, ಬೆಳಿಗ್ಗೆ 11
ಕಮಲಮ್ಮ ದಾಸಪ್ಪ, ನಂಜಮ್ಮ ನಾರಾಯಣ ರಾವ್, ಜಿ.ಎಸ್. ದೀಕ್ಷಿತ್ ಸ್ಮಾರಕ ದತ್ತಿ ಉಪನ್ಯಾಸ: ಸಿನು ಜೋಸೆಫ್, ವಾರೀಜ ಅಡಿಗ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11
ಸಂಗೀತಧಾಮ ಸಂಭ್ರಮ, 'ಕಾವ್ಯ ಕೌಸ್ತುಭ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎ. ಬಾಲಕೃಷ್ಣ, ಪ್ರಶಸ್ತಿ ಪ್ರದಾನ: ದೊಡ್ಡರಂಗೇಗೌಡ, ಪ್ರಶಸ್ತಿ ಪುರಸ್ಕೃತರು: ಸಿದ್ಧರಾಜ್ ಪೂಜಾರಿ, ಅತಿಥಿ: ಯಶೋಮತಿ ಬೆಳೆಗೆರೆ, ಆಯೋಜನೆ: ಸಂಗೀತ ಧಾಮ, ಸ್ಥಳ: ನೆಹರೂ ಗಾಂಧಿ ಸಭಾಂಗಣ, ನ್ಯಾಷನಲ್ ಕಾಲೇಜು ಆವರಣ, ಬಸವನಗುಡಿ, ಸಂಜೆ 4

ರಾಜ್ಯಮಟ್ಟದ ಸಮ್ಮೇಳನ, ಡಾ.ಬಿ.ಆರ್. ಅಂಬೇಡ್ಕರ್ ಸ್ಪರ್ಧಾತ್ಮಕ ಪರೀಕ್ಷೆ ವಿಜೇತರಿಗೆ ಬಹುಮಾನ ವಿತರಣೆ: ಸಾನ್ನಿಧ್ಯ: ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಪ್ರಿಯಾಂಕ್ ಖರ್ಗೆ, ಅಧ್ಯಕ್ಷತೆ: ಶ್ರೀನಾಥ ಪೂಜಾರಿ, ಅತಿಥಿಗಳು: ಬಿ. ಗೋಪಾಲ್, ನೂರ್ ಶ್ರೀಧರ್, ಡಿ. ಶಿವಶಂಕರ್, ಬಾಲಾಜಿ ಕಾಂಬಳೆ, ಆಯೋಜನೆ: ದಲಿತ ವಿದ್ಯಾರ್ಥಿ ಪರಿಷತ್, ಸ್ಥಳ: ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ದತ್ತಿ ಉಪನ್ಯಾಸ: 'ಹೃದಯ ರೋಗವನ್ನು ತಡೆಗಟ್ಟಲು ಜೀವನ ಶೈಲಿ ಮಾರ್ಪಡುಗಳು' ಕುರಿತ ಉಪನ್ಯಾಸ: ಡಾ. ಮಧುಲಿಕಾ, 'ಥೈರಾಯ್ಡ್ ಗ್ರಂಥಿ ಮತ್ತು ಅದರ ಅಸ್ವಸ್ಥತೆಗಳು' ಕುರಿತು ಉಪನ್ಯಾಸ: ಡಾ.ಆರ್.ಕೆ. ಸರೋಜ, ಅಧ್ಯಕ್ಷತೆ: ಡಾ. ಮಧುಶಂಕರ್ ಎಲ್., ಸ್ಥಳ: ಐಎಂಎ ಸಭಾಂಗಣ, ಚಾಮರಾಜಪೇಟೆ, ಸಂಜೆ 4
ಗಂಗಾಧರ ಚಿತ್ತಾಲ–ನೂರರ ನೆನಪು: ಉಪನ್ಯಾಸಕರು: ಆರ್. ಲಕ್ಷ್ಮೀನಾರಾಯಣ, ಅತಿಥಿ: ಎಸ್. ಆರ್. ವಿಜಯಶಂಕರ್, ಆಯೋಜನೆ: ಶಿವಾರಾಮ ಕಾರಂತ ವೇದಿಕೆ, ಸ್ಥಳ: ಪಾಂಚಜನ್ಯ ಸಭಾಂಗಣ, ವಿನಾಯಕ ದೇವಸ್ಥಾನ ಆರ್.ಟಿ. ನಗರ, ಸಂಜೆ 4
ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ: ಟಿ.ವಿ. ವೆಂಕಟಾಚಲಶಾಸ್ತ್ರಿ, ಪ್ರಶಸ್ತಿ ಪುರಸ್ಕೃತರು: ಎಸ್.ಆರ್. ರಾಮಸ್ವಾಮಿ, ಪ್ರಾಸ್ತಾವಿಕ ನುಡಿ: ಶತಾವಧಾನಿ ಆರ್. ಗಣೇಶ್, ಉಪಸ್ಥಿತಿ: ಎಸ್.ಎಲ್. ಭೈರಪ್ಪ, ಆಯೋಜನೆ: ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ ರಸ್ತೆ, ಎನ್. ಆರ್. ಕಾಲೊನಿ, ಸಂಜೆ 4.30

ಪಿ.ಎಂ. ಚಿಕ್ಕವೆಂಕಟಸ್ವಾಮಿ ಮೇಲಗಾಣಿ ಅವರ 'ಆದಿ ಜಾಂಬವ–ಮತಂಗ–ಮಾತಂಗೀ ಅತ್ರಿ ಅನಸೂಯ–ವಸಿಷ್ಠ ಅರುಂದತಿಯರ ಇತಿಹಾಸ' ಪುಸ್ತಕದ ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಕೆ.ಎಚ್. ಮುನಿಯಪ್ಪ, ಸಂಘದ ಕುರಿತು: ಡಿ. ತಿಮ್ಮಯ್ಯ, ಜನಾಂಗದ ಕುರಿತು: ಆರ್.ಬಿ. ತಿಮ್ಮಾಪುರ, ಪಸ್ತಕದ ಕುರಿತು: ಎಲ್. ಹನುಮಂತಯ್ಯ, ಅತಿಥಿಗಳು: ಎ. ನಾರಾಯಣಸ್ವಾಮಿ, ಬಿ.ಎನ್. ಚಂದ್ರಪ್ಪ, ಎಚ್. ಆಂಜನೇಯ, ಸುಧಾಮದಾಸ್, ರೂಪಕಲಾ ಶಶಿಧರ್, ಕೆ.ಎಸ್. ಬಸಂತಪ್ಪ, ಗೋನಾಳ್ ಭೀಮಪ್ಪ, ಆಯೋಜನೆ: ಅಖಿಲ ಕರ್ನಾಟಕ ಆದಿ ಜಾಂಬವ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.05

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಶರತ್ ರಾವ್, ಪಿಟೀಲು: ವಿಶ್ವಜಿತ್ ಮತ್ತೂರು, ಮೃದಂಗ: ವಿನೋದ್ ಶ್ಯಾಮ್ ಆನೂರ್, ಘಟ: ಶ್ರೀನಿಧಿ ಆರ್. ಕೌಂಡಿನ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30
ನಾದಜ್ಯೋತಿ ಸಂಗೀತ ಸಂಭ್ರಮ, ವಜ್ರ ಮಹೋತ್ಸವ ಸಂಭ್ರಮ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಉದ್ಘಾಟನೆ: ಆರ್.ಕೆ. ಪದ್ಮಾನಾಭ, ಅತಿಥಿ: ಸಿ. ಚಂದ್ರಶೇಖರ್, ಗಾಯನ: ಆರ್.ಕೆ. ಪದ್ಮಾನಾಭ, ಪಿಟೀಲು: ನಿಶಾಂತ್ ಚಂದ್ರನ್, ಮೃದಂಗ: ಸಿ. ಚೆಲವರಾಜು, ಖಂಜೀರಾ: ಲತಾ ರಾಮಚಾರ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6
ಹರಿದಾಸ ವಾಣಿ: ಗಾಯನ: ರಾಯಚೂರು ಶೇಷಗಿರಿದಾಸ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಬೆಮೆಲ್ ಬಡಾವಣೆ, ರಾಜರಾಜೇಶ್ವರಿನಗರ, ಸಂಜೆ 6
'ಮಜಾ ಮಜಾ ದೋ' ನಾಟಕ ಪ್ರದರ್ಶನ: ನಿರ್ದೇಶನ: ಸುಷ್ಮಾ ಎಸ್.ವಿ., ತಂಡ: ಥೇಮಾ, ಆಯೋಜನೆ ಮತ್ತು ಸ್ಥಳ: ರಾಷ್ಟ್ರೀಯ ನಾಟಕ ಶಾಲೆ, ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7
'ವಾಲ್ಮೀಕಿಯ ಭಾಗ್ಯ' ನಾಟಕ ಪ್ರದರ್ಶನ: ನಿರ್ದೇಶನ: ಸವಿತ ಬೈರಪ್ಪ, ಆಯೋಜನೆ: ಆಯಾಮ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7
'ನಮ್ಗೇನ್ ಬೆಲೆನೇ ಇಲ್ವಾ' ನಾಟಕ ಪ್ರದರ್ಶನ: ನಿರ್ದೇಶನ: ಅರುಣ್ ಸೂರ್ಯ, ಆಯೋಜನೆ: ಪಯಣ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in


ವರ್ತೂರು ಗ್ರಾಮದಲ್ಲಿ ಭೂನೀಳಾಸಮೇತ ಚನ್ನರಾಯ ಸ್ವಾಮಿಯ ಬ್ರಹ್ಮ ರಥೋತ್ಸವ ನೆರವೇರಿತು

ಚನ್ನರಾಯಸ್ವಾಮಿ ಬ್ರಹ್ಮ ರಥೋತ್ಸವ

ಕೆ.ಆರ್.ಪುರ: ರಥಸಪ್ತಮಿ ಪ್ರಯುಕ್ತ ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಗ್ರಾಮದಲ್ಲಿ ಭೂನೀಳಾಸಮೇತ ಚನ್ನರಾಯಸ್ವಾಮಿಯ ಬ್ರಹ್ಮ ರಥೋತ್ಸವ ನೆರವೇರಿತು.

ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಗ್ರಾಮದ ಮುಖಂಡರು, ಸಾವಿರಾರು ಭಕ್ತರು ಪೂಜೆ ನೆರವೇರಿಸಿ, ಬ್ರಹ್ಮರಥ ಎಳೆದರು.

ವರ್ತೂರು ಗ್ರಾಮದ ಪ್ರಮುಖ ಬೀದಿಗಳಲ್ಲಿ ತಮಟೆ, ಪೂಜಾಕುಣಿತ, ನಾದಸ್ವರ, ಸೇರಿದಂತೆ ಚಿಂಗಾರಿ ಮೇಳ, ಚಂಡಿ ಮೇಳ, ಚಟ್ಟಿಮೇಳ, ವೀರಗಾಸೆ, ಗಾರುಡಿಗೊಂಬೆ, ಡೊಳ್ಳು ಕುಣಿತದೊಂದಿಗೆ ಬ್ರಹ್ಮರಥೋತ್ಸವ ಸಾಗಿತು. ಭಾನುವಾರ ರಾತ್ರಿ 12.30ಕ್ಕೆ ದ್ರೌಪದಮ್ಮ ಮತ್ತು ಸ್ವಾಮಿ ಹೂವಿನ ಕರಗ ಮಹೋತ್ಸವ ನಡೆಯಿತು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಭಾನುವಾರದ ಪುರವಣಿ

ಬಾದಾಮಿಯ ಬನಶಂಕರಿ ಜಾತ್ರೆಯಲ್ಲಿ ನಾಟಕಗಳದ್ದೇ ವಿಶೇಷ ಆಕರ್ಷಣೆ. ಹಳ್ಳಿಗರ ಬಾಯಲ್ಲಿ 'ನಾಟಕದ ಜಾತ್ರೆ' ಎಂದೇ ಖ್ಯಾತಿ ಪಡೆದಿರುವ ಇದರ ವೈಶಿಷ್ಟ್ಯ ಇಲ್ಲಿದೆ..



ದುಬಾರಿಯಾದ 'ರಾಜಕೀಯ' • ದುಂದು ವೆಚ್ಚಕ್ಕೆ ಇಲ್ಲ ಕಡಿವಾಣ • ಪಾರದರ್ಶಕ ವ್ಯವಸ್ಥೆ ಕೊರತೆ

ಇದು ಬರೀ ಹಾಲಲ್ಲ!



• ಸಚ್ಚಿದಾನಂದ ಕುರಗುಂದ

ಒಳನೋಟ

ಬೆಂಗಳೂರು: 'ಖಾಸಗಿ ಡೇರಿಯವರು ಪ್ರತಿ ಲೀಟರ್‌ಗೆ ಕನಿಷ್ಠ ₹40 ನೀಡಿದರೆ ಹಾಲು ಒಕ್ಕೂಟಗಳು ₹30 ನೀಡಲು ಪರದಾಡುತ್ತಿವೆ. ಇದೇ ಸ್ಥಿತಿ ಮುಂದುವರಿದರೆ ಕರ್ನಾಟಕ ಹಾಲು ಒಕ್ಕೂಟಗಳಿಂದಲೇ ರೈತರು ವಿಮುಖರಾಗಬಹುದು. ದೊಡ್ಡಬಳ್ಳಾಪುರದಲ್ಲೇ ಪ್ರತಿ ದಿನ ಪೂರೈಕೆಯಾಗುತ್ತಿದ್ದ 1.5 ಲಕ್ಷ ಲೀಟರ್ ಹಾಲು ಈಗ 1 ಲಕ್ಷ ಲೀಟರ್‌ಗೆ ತಲುಪಿದೆ. ಹಾಲು ಉತ್ಪಾದಕರ ಸಂಖ್ಯೆಯೂ 11 ಸಾವಿರದಿಂದ ಈಗ 9.5 ಸಾವಿರಕ್ಕೆ ಇಳಿಕೆಯಾಗಿದೆ'

'ಹಾಲು ಉತ್ಪಾದಕರ ದುಡಿಮೆಗೆ ತಕ್ಕಂತೆ ಪ್ರತಿಫಲ ಸಿಗುತ್ತಿಲ್ಲ. ಒಟ್ಟಾರೆ ಹೈನುಗಾರಿಕೆಗೂ ಕುತ್ತು ತರುವ ಪ್ರಯತ್ನಗಳು ನಡೆಯುತ್ತಿವೆ'. ಇದು ದೊಡ್ಡಬಳ್ಳಾಪುರದ ರೈತ ಮುಖಂಡ ಆರ್. ಸತೀಶ್ ಅವರ ನೋವಿನ ನುಡಿಗಳಿವು.

'ಪ್ರತಿ ಲೀಟರ್ ಹಾಲು ಉತ್ಪಾದನೆಗೆ ಸರಾಸರಿ ₹40ರಿಂದ ₹50 ವೆಚ್ಚವಾಗುತ್ತದೆ. ಕೊಬ್ಬಿನ ಅಂಶ (ಎಸ್‌ಎನ್‌ಎಫ್) 8.5 ಇದ್ದರೆ ಮಾತ್ರ ಉತ್ತಮ ದರ ನೀಡಲಾಗುತ್ತದೆ. ಖಾಸಗಿ ಡೇರಿಗಳಲ್ಲಿ ದರ ನಿಗದಿಗೆ ಇರುವ ಮಾನದಂಡಗಳು ಕಡಿಮೆ. ಹೀಗಾಗಿಯೇ ರೈತರು ಖಾಸಗಿಯವರತ್ತ ಒಲವು ತೋರುತ್ತಿದ್ದಾರೆ' ಎಂದು ಸತೀಶ್ ವಿವರಿಸುತ್ತಾರೆ.

ಹಾಲಿಗೆ ವೈಜ್ಞಾನಿಕ ದರ ನಿಗದಿಪಡಿಸುವಂತೆ ರೈತರ ಬೇಡಿಕೆಯಿದೆ. ತಮಿಳುನಾಡಿನಲ್ಲಿ ಹಾಲು ಶೇಖರಣೆ ದರವನ್ನು ₹35ರಿಂದ ₹38ಕ್ಕೆ ಹೆಚ್ಚಿಸಲಾಗಿದೆ. ಕೇರಳದಲ್ಲಿ 8.5 ಎಸ್‌ಎನ್‌ಎಫ್‌ಗೆ ₹43.98 ದರ ನಿಗದಿಪಡಿಸಲಾಗಿದೆ. ಆದರೆ, ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಒಕ್ಕೂಟಗಳು ಪ್ರತಿ ಲೀಟರ್‌ಗೆ ಸರಾಸರಿ ₹ 25ರಿಂದ ₹ 32 ಮಾತ್ರ ನೀಡುತ್ತಿವೆ.

ಬಮುಲ್ ವ್ಯಾಪ್ತಿಯಲ್ಲಿ 8 ಎಸ್‌ಎನ್‌ಎಫ್ ಇದ್ದರೆ ₹32.15 ನೀಡಲಾಗುತ್ತಿದೆ. ಬೆಳಗಾವಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲೂ ಕಳೆದ ಅಕ್ಟೋಬರ್ 11ರಿಂದ ಪ್ರತಿ ಲೀಟರ್‌ಗೆ ₹ 2 ಕಡಿಮೆ ಮಾಡಲಾಗಿದೆ. 8.5 ಎಸ್‌ಎನ್‌ಎಫ್ ಇದ್ದರೆ ಮಾತ್ರ ರೈತರಿಗೆ ₹31.10 ದೊರೆಯುತ್ತದೆ. ಮಂಡ್ಯ, ತುಮಕೂರು ಸೇರಿದಂತೆ ಬಹುತೇಕ ಯೂನಿಯನ್‌ಗಳು ₹32 ನೀಡುತ್ತಿವೆ.

ಹಾಲು ಒಕ್ಕೂಟಗಳು ಕಡಿಮೆ ದರ ನಿಗದಿಪಡಿಸಿರುವುದರಿಂದ ಮಾರುಕಟ್ಟೆಯಲ್ಲಿ ಹೆಚ್ಚಿನ ದರ ನೀಡುವ ಖಾಸಗಿ ಡೇರಿಗಳ ಪ್ರಾಬಲ್ಯ ದಿನೇ ದಿನೇ ಹೆಚ್ಚುತ್ತಿದೆ. ಪ್ರಮುಖವಾಗಿ ಚಾಮರಾಜನಗರ, ಕೋಲಾರ, ತುಮಕೂರು, ಬೆಳಗಾವಿ ಒಕ್ಕೂಟಗಳ ವ್ಯಾಪ್ತಿಯಲ್ಲಿ ಹಾಲು ಶೇಖರಣೆ ನಕಾರಾತ್ಮಕ ಬೆಳವಣಿಗೆ ಇದೆ.

ಉತ್ಪಾದನೆ ಮತ್ತು ಮಾರಾಟ ವೆಚ್ಚ				
ಉತ್ಪಾದನೆ ನಂತರ ರೈತರಿಂದ ಗ್ರಾಹಕರಿಗೆ ತಲುಪಿಸಲು ಒಂದು ಲೀಟರ್‌ಗೆ ₹8	ಪ್ರತಿ ದಿನ ಒಂದು ಹಸುವಿಗೆ 5 ಕೆ.ಜಿ. ಪಶು ಆಹಾರ (50 ಕೆಜಿಗೆ ₹1150 ದರ)	ಪ್ರತಿ ಹಸುವಿಗೆ ಪ್ರತಿ ದಿನ 25 ಕೆಜಿಯಿಂದ 50 ಕೆ.ಜಿ. ಮೇವು	ಏಜೆಂಟ್‌ರಿಗೆ ಮಾರಾಟದ ಕಮಿಷನ್ ₹2.5	ಮಾನವ ಸಂಪನ್ಮೂಲ ಸೇರಿ ಒಟ್ಟಾರೆ ಉತ್ಪಾದನಾ ವೆಚ್ಚ ಲೀಟರ್‌ಗೆ ₹40ರಿಂದ ₹50



ಕೊಪ್ಪಳ ತಾಲ್ಲೂಕಿನ ಕೋಳೂರು ಗ್ರಾಮದಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಾಲು ಸಂಗ್ರಹಿಸುತ್ತಿರುವುದು ಪ್ರಜಾವಾಣಿ ಚಿತ್ರ: ಭರತ್ ಕಂದಕೂರು

ಬೆಂಗಳೂರಿನಲ್ಲೇ ಪ್ರತಿ ದಿನ 45 ಲಕ್ಷ ಲೀಟರ್‌ಗೆ ಬೇಡಿಕೆ ಇದ್ದರೂ, ಬಮುಲ್ 35 ಲಕ್ಷ ಲೀಟರ್ ಹಾಲು ಮಾತ್ರ ಪೂರೈಸುತ್ತಿದ್ದು, ಖಾಸಗಿ ಡೇರಿಗಳು 10 ಲಕ್ಷ ಲೀಟರ್ ವಹಿವಾಟು ನಡೆಸುತ್ತಿವೆ.

ರಾಜ್ಯದಲ್ಲಿ ಯಾವುದೇ ಪಕ್ಷ ಆಡಳಿತ ನಡೆಸಿದರೂ ಪ್ರೋತ್ಸಾಹ ಧನ ಮತ್ತು ಕ್ಷೀರಭಾಗ್ಯ ಸೇರಿದಂತೆ

> **ರೈತರ ಹಿತಾಸಕ್ತಿ ಕಾಪಾಡಲು ಕೆಎಂಎಫ್ ಸದಾ ಬದ್ಧವಾಗಿದೆ. ಕೆಎಂಎಫ್ ನೀಡುತ್ತಿರುವ ದರ ಕಡಿಮೆ ಇದೆ ಎಂದು ಭಾವಿಸಿಕೊಂಡರೂ ಖಾಸಗಿ ಡೇರಿಗಳ ಕಡೆ ಹೈನುಗಾರರು ವಾಲಿಲ್ಲ. ಗಡಿ ಜಿಲ್ಲೆಗಳಲ್ಲಿ ಬೇರೆ ರಾಜ್ಯಗಳ ಹಾಲು ಪೂರೈಕೆ ಸಾಮಾನ್ಯವಾದರೂ ಅದು ತಾತ್ಕಾಲಿಕವಾಗಿರುತ್ತದೆ. ಬಹುತೇಕ ಸಂದರ್ಭಗಳಲ್ಲಿ ಕೆಎಂಎಫ್ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿರುತ್ತದೆ.**
>
> **ಎಂ.ಕೆ. ಜಗದೀಶ್,** ವ್ಯವಸ್ಥಾಪಕ ನಿರ್ದೇಶಕ, ಕೆಎಂಎಫ್

ಒಂದಿಲ್ಲೊಂದು ಯೋಜನೆಗಳ ಮೂಲಕ ಕೆಎಂಎಫ್‌ಗೆ ಆರ್ಥಿಕ ನೆರವು ನೀಡಿವೆ. ಇಡೀ ದೇಶದಲ್ಲೇ ಈ ರೀತಿಯ ನೆರವನ್ನು ಯಾವ ರಾಜ್ಯ ಸರ್ಕಾರಗಳು ಹಾಲು ಒಕ್ಕೂಟಗಳಿಗೆ ನೀಡುತ್ತಿಲ್ಲ.

6ನೇ ಪುಟ ನೋಡಿ

ಬಿಜೆಪಿ ಚುನಾವಣಾ ಕಹಳೆ

ಪ್ರತಿ ಬೂತ್‌ನಲ್ಲಿ ಹೆಚ್ಚುವರಿ 370 ಮತ ತನ್ನಿ: ಮೋದಿ ಕರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿ ಬೂತ್‌ನಲ್ಲಿ 2019ಕ್ಕಿಂತ ಹೆಚ್ಚುವರಿಯಾಗಿ 370 ಮತಗಳನ್ನು ತರಲು ಪಕ್ಷದ ಕಾರ್ಯಕರ್ತರು ಕಾರ್ಯೋನ್ಮುಖರಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕಿವಿಮಾತು ಹೇಳಿದರು. 543 ಲೋಕಸಭಾ ಕ್ಷೇತ್ರಗಳಲ್ಲಿ ಕಮಲ ಚಿಹ್ನೆಯೇ ಪಕ್ಷದ ಅಭ್ಯರ್ಥಿ ಎಂದು ಅವರು ಪ್ರತಿಪಾದಿಸಿದರು.

ಲೋಕಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಸಲುವಾಗಿ ಶನಿವಾರ ಇಲ್ಲಿ ಆರಂಭವಾದ ಎರಡು ದಿನಗಳ ರಾಷ್ಟ್ರೀಯ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಶೇ 37 ಮತಗಳನ್ನು (303 ಕ್ಷೇತ್ರಗಳಲ್ಲಿ ಗೆಲುವು) ಪಡೆದು ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಈ ಸಲ ಮತ ಗಳಿಕೆ ಪ್ರಮಾಣವನ್ನು ಶೇ 45ಕ್ಕೆ ಹೆಚ್ಚಿಸುವ ಗುರಿಯನ್ನು ಪಕ್ಷ ಇಟ್ಟುಕೊಂಡಿದೆ.

ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢ ವಿಧಾನಸಭೆ ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ, ಮುಖ್ಯಮಂತ್ರಿ ಅಭ್ಯರ್ಥಿಗಳ ಹೆಸರನ್ನು ಘೋಷಿಸಿರಲಿಲ್ಲ. ಕಮಲದ ಹೆಸರಿನಲ್ಲಿ ಪಕ್ಷ ಚುನಾವಣೆ ಎದುರಿಸಲಿದೆ ಎಂದು ಮೋದಿ ಅವರು ಚುನಾವಣಾ ರ್‍ಯಾಲಿಗಳಲ್ಲಿ ಹೇಳಿದ್ದರು.

ಮೂರೂ ರಾಜ್ಯಗಳಲ್ಲಿ ಪಕ್ಷ ಭರ್ಜರಿ ಜಯ ಗಳಿಸಿತ್ತು. ಲೋಕಸಭಾ ಚುನಾವಣೆಯಲ್ಲೂ ಇದೇ ತಂತ್ರ ಅನುಸರಿಸಲು ಬಿಜೆಪಿ ಮುಂದಾಗಿದೆ.

11ನೇ ಪುಟ ನೋಡಿ



ನವದೆಹಲಿಯಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಕ್ಷದ ಧ್ವಜಾರೋಹಣ ನೆರವೇರಿಸಿದರು. ಕೇಂದ್ರ ಗೃಹಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

'ಗಾಂವ್ ಚಲೋ' ಅಭಿಯಾನ

'ಪಕ್ಷದ ಕಾರ್ಯಕರ್ತರು 'ಗಾಂವ್ ಚಲೋ ಅಭಿಯಾನ'ದ ಮೂಲಕ ಸರಿಸುಮಾರು 7.5 ಲಕ್ಷ ಹಳ್ಳಿಗಳನ್ನು ಮತ್ತು 8.5 ಲಕ್ಷ ಬೂತ್‌ಗಳನ್ನು ಯಶಸ್ವಿಯಾಗಿ ತಲುಪಿದ್ದಾರೆ. 2019ರ ಸಾಧನೆಯ ಆಧಾರದಲ್ಲಿ 161 ಕ್ಷೇತ್ರಗಳನ್ನು ದುರ್ಬಲ ಕ್ಷೇತ್ರಗಳೆಂದು ಪಕ್ಷ ಗುರುತಿಸಿತ್ತು. ಈ ಕ್ಷೇತ್ರಗಳಲ್ಲಿ ಪಕ್ಷ ಸಂಘಟನೆ ಬಲಪಡಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಒಂದೂವರೆ ವರ್ಷದಲ್ಲಿ 430 ಲೋಕಸಭಾ ಪ್ರವಾಸ ಕಾರ್ಯಕ್ರಮಗಳು ನಡೆದಿವೆ. ಇದರ ಅರ್ಥ ಪ್ರತಿ ಕ್ಷೇತ್ರಕ್ಕೆ ಸಂಸದರು ಕನಿಷ್ಠ ಮೂರು ಭೇಟಿ ನೀಡಿದ್ದಾರೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ವಿನೋದ್ ತಾವಡೆ ಹೇಳಿದರು.

ಇಂದಿನ ಸಂಚಿಕೆಯೊಂದಿಗೆ ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಲಭ್ಯವಿರುತ್ತದೆ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇನ್‌ಸ್ಯಾಟ್–3ಡಿಎಸ್ ಉಡ್ಡಯನ ಯಶಸ್ವಿ



ಶ್ರೀಹರಿಕೋಟಾ(ಆಂಧ್ರಪ್ರದೇಶ)(ಪಿಟಿಐ): ಭೂಮಿಯ ಹವಾಮಾನ ಅಧ್ಯಯನ ಉದ್ದೇಶದ, ಹೊಸ ತಲೆಮಾರಿನ 'ಇನ್‌ಸ್ಯಾಟ್‌-3ಡಿಎಸ್' ಉಪಗ್ರಹವನ್ನು ಶನಿವಾರ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ.

ಇಲ್ಲಿನ ಉಡ್ಡಯನ ಕೇಂದ್ರದಿಂದ ಸಂಜೆ 5.35ಕ್ಕೆ ಉಪಗ್ರಹವನ್ನು ಹೊತ್ತ ರಾಕೆಟ್ ಜಿಎಸ್‌ಎಲ್‌ವಿ–ಎಫ್‌14, ನಭಕ್ಕೆ ಚಿಮ್ಮಿತಲ್ಲದೇ, ನಿಗದಿತ ಭೂಸ್ಥಿರ ಕಕ್ಷೆಗೆ ಉಪಗ್ರಹವನ್ನು ಸೇರಿಸಿತು ಎಂದೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ಜಿಎಸ್‌ಎಲ್‌ವಿ ರಾಕೆಟ್ ಬಳಸಿ ಈ ಹಿಂದೆ ಕೈಗೊಂಡಿದ್ದ ಉಡ್ಡಯನಗಳು ಯಶಸ್ಸು ಕಂಡಿರಲಿಲ್ಲ. ಆದರೆ, ಶನಿವಾರ ನಡೆದ ಉಪಗ್ರಹದ ಉಡ್ಡಯನ ಯಶಸ್ವಿಯಾಗಿದ್ದು ಇಸ್ರೊ ವಿಜ್ಞಾನಿಗಳ ಸಂತಸಕ್ಕೆ ಕಾರಣವಾಗಿತ್ತು.

ಉಡ್ಡಯನದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, 'ಇನ್‌ಸ್ಯಾಟ್–3ಡಿಎಸ್'ನ ಯಶಸ್ವಿ ಉಡ್ಡಯನವು ಸಂಸ್ಥೆಯ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ' ಎಂದರು.


7ನೇ ಪುಟ ನೋಡಿ

ಗುಲ್ಜಾರ್, ರಾಮಭದ್ರಾಚಾರ್ಯರಿಗೆ ಜ್ಞಾನಪೀಠ

ನವದೆಹಲಿ(ಪಿಟಿಐ): ಪ್ರಸಿದ್ಧ ಉರ್ದು ಕವಿ ಗುಲ್ಜಾರ್ ಮತ್ತು ಸಂಸ್ಕೃತ ವಿದ್ವಾಂಸ ಜಗದ್ಗುರು ರಾಮಭದ್ರಾಚಾರ್ಯ ಅವರು 58ನೇ ಜ್ಞಾನಪೀಠ ಪ್ರಶಸ್ತಿಗೆ (2023) ಭಾಜನರಾಗಿದ್ದಾರೆ ಎಂದು ಜ್ಞಾನಪೀಠ ಆಯ್ಕೆ ಸಮಿತಿ ಶನಿವಾರ ತಿಳಿಸಿದೆ.



ರಾಮಭದ್ರಾಚಾರ್ಯ



ಗುಲ್ಜಾರ್

ಗುಲ್ಜಾರ್ ಅವರ ಮೂಲ ಹೆಸರು ಸಂಪೂರಣ್ ಸಿಂಗ್ ಕಾಲ್ರಾ. ಹಿಂದಿ ಚಿತ್ರರಂಗದ ಪ್ರಸಿದ್ಧ ಗೀತೆ ರಚನೆಕಾರರೂ ಆದ ಅವರು, ಈ ಕಾಲದ ಅತ್ಯುತ್ತಮ ಉರ್ದು ಕವಿಗಳಲ್ಲಿ ಒಬ್ಬರು.

ಮಧ್ಯ ಪ್ರದೇಶದ ಚಿತ್ರಕೂಟದ ತುಳಸಿ ಪೀಠದ ಸಂಸ್ಥಾಪಕ ಮತ್ತು ಮುಖ್ಯಸ್ಥರಾದ ರಾಮಭದ್ರಾಚಾರ್ಯರು ಪ್ರಸಿದ್ಧ ಹಿಂದೂ ಆಧ್ಯಾತ್ಮಿಕ ನಾಯಕರು ಮತ್ತು ಶಿಕ್ಷಣ ತಜ್ಞರೂ ಆಗಿದ್ದಾರೆ. ಅವರು ನಾಲ್ಕು ಮಹಾಕಾವ್ಯಗಳು ಸೇರಿದಂತೆ 240ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.

7ನೇ ಪುಟ ನೋಡಿ

ಗೊಂದಲ ಪರಿಹಾರಕ್ಕೆ ಕಂದಾಯ ಇಲಾಖೆ ಸುತ್ತೋಲೆ

ಡೀಮ್ಡ್ ಅರಣ್ಯ: ಜಂಟಿ ಸರ್ವೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದಂತೆ ಗೊಂದಲಗಳಿರುವ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ಪ್ರಕಟಿಸಿ, ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ಜಂಟಿ ಸರ್ವೆ ನಡೆಸಿ ವಿವಾದ ಇತ್ಯರ್ಥಪಡಿಸಲು ಸರ್ಕಾರ ಮುಂದಾಗಿದೆ.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಈ ಕುರಿತು ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯದಲ್ಲಿ ಡೀಮ್ಡ್ ಅರಣ್ಯ ಪ್ರದೇಶಗಳನ್ನು ಗುರುತಿಸಲು ನೇಮಿಸಿದ್ದ ಪುನರ್ ರಚಿತ ತಜ್ಞರ ಸಮಿತಿ–1 9,94,881.11 ಹೆಕ್ಟೇರ್ ವಿಸ್ತೀರ್ಣದ ಡೀಮ್ಡ್ ಅರಣ್ಯ ಪ್ರದೇಶಗಳಿವೆ ಎಂದು ವರದಿ ಸಲ್ಲಿಸಿತ್ತು. ಈ ವರದಿಯಲ್ಲಿ ಲೋಪಗಳಿವೆ ಎಂದು ಅದರ ಪರಿಶೀಲನೆಗಾಗಿ ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳ ಜಂಟಿ ಸಮಿತಿ ರಚಿಸಲಾಗಿತ್ತು.

ಜಂಟಿ ಸಮಿತಿ ಪರಿಶೀಲನೆ ಬಳಿಕ 2022ರ ಫೆಬ್ರುವರಿ 5ರಂದು ಆದೇಶ ಹೊರಡಿಸಿದ್ದ ಅರಣ್ಯ ಇಲಾಖೆ, ಒಟ್ಟು 3,30,186.93 ಹೆಕ್ಟೇರ್ ಪ್ರದೇಶವನ್ನು ಮಾತ್ರ ಡೀಮ್ಡ್ ಅರಣ್ಯ ಎಂದು ಘೋಷಿಸಿತ್ತು. ತಜ್ಞರ ಸಮಿತಿ–1 ಗುರುತಿಸಿದ್ದ ಪಟ್ಟಿಯಿಂದ 7,73,326.91 ಹೆಕ್ಟೇರ್ ಪ್ರದೇಶಗಳನ್ನು ಹೊರಗಿಡಲು ನಿರ್ಧರಿಸಲಾಗಿತ್ತು.

3,30,186.93 ಹೆಕ್ಟೇರ್ ವಿಸ್ತೀರ್ಣದ ಡೀಮ್ಡ್ ಅರಣ್ಯ ಪ್ರದೇಶಗಳ ಪಟ್ಟಿಗೂ ಹಲವೆಡೆ ತಕರಾರುಗಳಿವೆ. ಹೀಗಾಗಿ, ಗೊಂದಲ ಪರಿಹಾರಕ್ಕೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ಪ್ರಕಟಿಸಿ, ಅಹವಾಲು ಆಲಿಸಿ ತೀರ್ಮಾನ ಕೈಗೊಳ್ಳಲು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಶುಕ್ರವಾರ ಹೊರಡಿಸಿರುವ ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.


2022ರ ಫೆ.5ರ ಆದೇಶದಲ್ಲಿ ಅರಣ್ಯ ಇಲಾಖೆ ಪ್ರಕಟಿಸಿರುವ ಡೀಮ್ಡ್ ಅರಣ್ಯಗಳ ಪಟ್ಟಿಯನ್ನು ಪಡೆದು, ಜಿಲ್ಲಾಧಿಕಾರಿ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳ ದೃಢೀಕರಣದೊಂದಿಗೆ ಗ್ರಾಮ ಪಂಚಾಯಿತಿಗಳಲ್ಲಿ ಪ್ರಕಟಿಸಬೇಕು. ಸಂಪೂರ್ಣ ಸರ್ವೆ ನಂಬರ್‌ಗಳು ಡೀಮ್ಡ್ ಅರಣ್ಯ ಪ್ರದೇಶವಾಗಿದ್ದಲ್ಲಿ, ಯಾವುದೇ ವಿವಾದಗಳು ಇಲ್ಲದಿದ್ದರೆ ತಾಲ್ಲೂಕು ಮಟ್ಟದಲ್ಲಿ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ಕಂದಾಯ ಇಲಾಖೆಯ ದಾಖಲೆಗಳಲ್ಲಿ 'ಡೀಮ್ಡ್ ಅರಣ್ಯ' ಎಂಬುದಾಗಿ ಇಂಡೀಕರಣ ಮಾಡಬೇಕು ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

ಭಾನುವಾರ, ಫೆಬ್ರುವರಿ 18, 2024 | ಬೆಂಗಳೂರು | ₹ 7.00 • www.prajavani.net prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೊಳಲು ವಾದನ
'ಡಿಎಚ್ ಬೆಂಗಳೂರು 2040 ಶೃಂಗಸಭೆ' ಕಾರ್ಯಕ್ರಮದಲ್ಲಿ ಪ್ರವೀಣ್ ಗೋಡ್ಖಿಂಡಿ ಅವರು ಕೊಳಲು ನುಡಿಸಿದರು



ಟೆಸ್ಟ್ ಕ್ರಿಕೆಟ್: ಯಶಸ್ವಿ ಜೈಸ್ವಾಲ್ ಶತಕ ಸಂಭ್ರಮ 16
ಸೈಬರ್ ವಂಚನೆ ತಡೆಗೆ ಜಾಗೃತಿಯೇ ಪರಿಹಾರ: ಸಿಐಡಿ ಡಿಐಜಿ ಸಿ. ವಂಶಿಕೃಷ್ಣ
ಚಾರಿತ್ರಿಕ ಚಿನ್ನದ ಮೇಲೆ ಭಾರತದ ಕಣ್ಣು 11
'ಒಂದೇ ವರ್ಷದಲ್ಲಿ ₹ 7,480 ಕೋಟಿ ವಂಚನೆ' 2B

ಡಿಎಚ್ ಬೆಂಗಳೂರು ಶೃಂಗಸಭೆ–2040 ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ಆರ್ಥಿಕ ಶಕ್ತಿ ಕೇಂದ್ರವಾಗಿ ಬೆಂಗಳೂರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಆರ್ಥಿಕತೆಯ ಹೃದಯಭಾಗವಾಗಿರುವ ಬೆಂಗಳೂರಿಗೆ ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಜಾಗತಿಕ ಆರ್ಥಿಕ ಶಕ್ತಿ ಕೇಂದ್ರವಾಗಿ ಪರಿವರ್ತಿಸುವ ಗುರಿ ನಮ್ಮದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಡೆಕ್ಕನ್ ಹೆರಾಲ್ಡ್' ಪತ್ರಿಕೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಡಿಎಚ್ ಬೆಂಗಳೂರು 2040 ಶೃಂಗಸಭೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಶುಕ್ರವಾರ ಮಂಡಿಸಲಾದ ಬಜೆಟ್‌ನಲ್ಲಿ ಹಲವು ನಿರ್ಣಯಗಳನ್ನು ಕೈಗೊಂಡಿದ್ದೇವೆ. ಮೆಟ್ರೊ ಮಾರ್ಗ, ರಸ್ತೆ ಮತ್ತು ಸ್ಮಾರ್ಟ್ ಮೊಬಿಲಿಟಿ ಮಾತ್ರವಲ್ಲ, ನಗರದ ಬಡವರಿಗೆ ಕೈಗೆಟಕುವ ಆರೋಗ್ಯ, ಶಿಕ್ಷಣ, ವಸತಿ ಮತ್ತು ಇತರ ಅಗತ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಶಾಂತಿ, ಕಾನೂನು, ಸುವ್ಯವಸ್ಥೆ ಕಾಪಾಡುವುದು, ಸುರಕ್ಷತೆಯನ್ನು ಖಾತ್ರಿಪಡಿಸುವುದು ನಮ್ಮ ಆದ್ಯತೆ' ಎಂದು ಅವರು ತಿಳಿಸಿದರು.



'ಡಿಎಚ್ ಬೆಂಗಳೂರು 2040 ಶೃಂಗಸಭೆ'ಯಲ್ಲಿ ಪಾಲ್ಗೊಂಡಿದ್ದ ಗಣ್ಯರು ಮತ್ತು ಅತಿಥಿಗಳು –ಪ್ರಜಾವಾಣಿ ಚಿತ್ರ

ಬೆಂಗಳೂರು ಕೇವಲ ನಗರವಲ್ಲ. ನಾವೀನ್ಯ, ವಿವಿಧತೆಯ ಮತ್ತು ಪ್ರಗತಿಯ ಸಂಕೇತವಾಗಿದೆ. ಮೂಲಸೌಕರ್ಯ, ಜೀವನ ಗುಣಮಟ್ಟ ಮತ್ತು ನಾಗರಿಕ ಸೌಕರ್ಯಗಳಂತಹ ನಿರ್ಣಾಯಕ ಅಂಶಗಳ ಮೇಲೆ ಕೇಂದ್ರೀಕರಿಸಲಾಗುವುದು ಎಂದು ವಿವರಿಸಿದರು.

'ಸಮರ್ಥ ಮತ್ತು ಸುಸ್ಥಿರ ಸಾರಿಗೆ ಕೇವಲ ಗುರಿಯಲ್ಲ, ಅದು ನಮ್ಮ ಬದ್ಧತೆ. ಸ್ವಚ್ಛ, ಹಸಿರು ನಗರವನ್ನು ರೂಪಿಸಿಸುವುದು ನಮ್ಮ ಪ್ರಥಮ ಆದ್ಯತೆ. ಸಾಮಾಜಿಕ-ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡಲು ಮತ್ತು ಎಲ್ಲರ ಜೀವನವನ್ನು ಉತ್ತಮಗೊಳಿಸಲು ಮೂಲಸೌಕರ್ಯ ಒದಗಿಸುವ ಸಂಕಲ್ಪ ನಮ್ಮದು. ಬ್ರ್ಯಾಂಡ್ ಬೆಂಗಳೂರು ಮೂಲಕ ನಾವು ಈಗಾಗಲೇ ಈ ಹಾದಿಯಲ್ಲಿ ಪಯಣ ಪ್ರಾರಂಭಿಸಿದ್ದೇವೆ' ಎಂದು ಹೇಳಿದರು.

2B ಪುಟ ನೋಡಿ

ಇತರ ನಗರಗಳೂ ತಂತ್ರಜ್ಞಾನದ ಕ್ಲಸ್ಟರ್‌ಗಳಾಗಬೇಕು: ಪ್ರಿಯಾಂಕ್ ಖರ್ಗೆ

ರಾಜ್ಯದ ನಗರಗಳು ತಮ್ಮಲ್ಲಿರುವ ಸೌಲಭ್ಯ, ಸಾಮರ್ಥ್ಯಗಳನ್ನು ಸದುಪಯೋಗ ಪಡಿಸಿಕೊಳ್ಳದ ಹೊರತು ಬೆಂಗಳೂರಿನಂತೆ ಉದ್ಯಮಶೀಲವಾಗಿ ಬೆಳೆಯಲು ಸಾಧ್ಯವಿಲ್ಲ ಎಂದು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರತಿಪಾದಿಸಿದರು.

ಬೆಂಗಳೂರು ಮಾದರಿಯಲ್ಲಿ ಇತರ ನಗರಗಳನ್ನು ಅಭಿವೃದ್ಧಿಪಡಿಸುವ ಬಗೆಗಿನ ಚರ್ಚೆಯಲ್ಲಿ ಅವರು ಮಾತನಾಡಿದರು.

ಬೆಂಗಳೂರು ವಿಶ್ವದ ನಾಲ್ಕನೇ ಅತಿದೊಡ್ಡ ತಂತ್ರಜ್ಞಾನ ಕ್ಲಸ್ಟರ್ ಆಗಿದೆ. ಇದು ರಾತ್ರೋರಾತ್ರಿ ನಡೆದದ್ದಲ್ಲ. ನಾಲ್ಕು ದಶಕಗಳೇ ಬೇಕಾಯಿತು. ಇತರ ನಗರಗಳನ್ನು ಇದಕ್ಕಿಂತ ಕಡಿಮೆ ಅವಧಿಯಲ್ಲಿ ತಂತ್ರಜ್ಞಾನದ ಕ್ಲಸ್ಟರ್‌ಗಳನ್ನಾಗಿ ಬೆಳೆಸಲು ಪ್ರಯತ್ನಿಸಬಹುದು ಎಂದು ಹೇಳಿದರು.

'ಆರೋಗ್ಯ ಕ್ಷೇತ್ರದಲ್ಲಿ ಎಐ ಬಳಕೆ'

ಆರಂಭಿಕ ರೋಗ ನಿರ್ಣಯ ಮತ್ತು ಚಿಕಿತ್ಸೆ ನೀಡಲು ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಬಳಕೆಯಾಗಿದೆ ಎಂದು ಮಣಿಪಾಲ್ ಆಸ್ಪತ್ರೆ ಮತ್ತು ಮಣಿಪಾಲ್ ಆರೋಗ್ಯ ಉದ್ಯಮಗಳ ಅಧ್ಯಕ್ಷ ಡಾ.ಎಚ್. ಸುದರ್ಶನ್ ಬಲ್ಲಾಳ್ ತಿಳಿಸಿದರು.

'ಡಿಎಚ್ ಬೆಂಗಳೂರು 2040 ಶೃಂಗ' ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, 'ಭವಿಷ್ಯದಲ್ಲಿ ಆರೋಗ್ಯ ರಕ್ಷಣೆಯು ಈಗ ನಾವು ತಿಳಿದಿರುವುದಕ್ಕಿಂತ ವಿಭಿನ್ನವಾಗಿರುತ್ತದೆ. ಇದು ಸ್ಮಾರ್ಟ್ ಆಸ್ಪತ್ರೆಗಳ ಯುಗ. ಇನ್ನು ಮುಂದೆ ಎಐ ಪ್ರಮುಖ ಪಾತ್ರ ವಹಿಸಲಿದೆ ಎಂದು ಸುದರ್ಶನ್ ಬಲ್ಲಾಳ್ ಅವರು ಪ್ರತಿಪಾದಿಸಿದರು.

ಮಾಹಿತಿ ನೀಡದ ಕಂಪನಿ

ಬಾಂಬ್ ಬೆದರಿಕೆ ಇ–ಮೇಲ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಶಾಲೆಗಳಿಗೆ ಬಾಂಬ್ ಬೆದರಿಕೆ ಇ-ಮೇಲ್ ಕಳುಹಿಸಿದ್ದ ವ್ಯಕ್ತಿಗಳ ಮಾಹಿತಿ ನೀಡಲು ವಿದೇಶಿ ಕಂಪನಿಗಳು ನಿರಾಕರಿಸಿದ್ದು, ಪ್ರಕರಣ ಭೇದಿಸಲು ಪೊಲೀಸರಿಗೆ ಹೊಸ ಸವಾಲು ಎದುರಾಗಿದೆ.

2023ರ ಡಿಸೆಂಬರ್‌ನಲ್ಲಿ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 70 ಶಾಲೆಗಳಿಗೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿತ್ತು. ಯಶವಂತಪುರದ ಕೇಂದ್ರೀಯ ವಿದ್ಯಾಲಯಕ್ಕೂ ಇತ್ತೀಚೆಗೆ ಇ-ಮೇಲ್ ಕಳುಹಿಸಿ ಬೆದರಿಕೆ ಹಾಕಲಾಗಿತ್ತು.

ಬಾಂಬ್ ಬೆದರಿಕೆ ಸಂಬಂಧ ಆಯಾ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ತಾಂತ್ರಿಕ ಪುರಾವೆಗಳನ್ನು ಆಧರಿಸಿ ತನಿಖೆ ಮುಂದುವರಿಸಿದ್ದಾರೆ. ಆದರೆ, ಆರೋಪಿಗಳ ಬಗ್ಗೆ ಇದುವರೆಗೂ ಯಾವುದೇ ಸುಳಿವು ಲಭ್ಯವಾಗಿಲ್ಲ.

ಇಂಟರ್‌ಪೋಲ್ ನೋಟಿಸ್‌ಗೂ ಉತ್ತರವಿಲ್ಲ: ಬೆದರಿಕೆ ಸಂದೇಶ ಬಂದಿದ್ದ ಇ-ಮೇಲ್‌ಗಳ ವರ್ಚ್ಯುಲ್ ಪ್ರೈವೇಟ್ ನೆಟ್‌ವರ್ಕ್ಸ್ (ವಿಪಿಎನ್) ಹಾಗೂ ಇಂಟರ್‌ನೆಟ್ ಪ್ರೋಟೊಕಾಲ್ (ಐ.ಪಿ) ವಿಳಾಸವನ್ನು ಪೊಲೀಸರು ಪತ್ತೆ ಮಾಡಿದ್ದಾರೆ. ಆರೋಪಿಗಳು, ವಿದೇಶದ ಕಂಪನಿಗಳ ಸೇವೆ ಬಳಸಿಕೊಂಡು ಇ-ಮೇಲ್ ಕಳುಹಿಸಿದ್ದ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿದ್ದಾರೆ.

'ತಾಂತ್ರಿಕ ಪುರಾವೆಗಳನ್ನು ಆಧರಿಸಿ ಇಂಟರ್‌ಪೋಲ್‌ಗೆ ಪತ್ರ ಬರೆಯಲಾಗಿತ್ತು. ವಿದೇಶಿ ಕಂಪನಿಗಳಿಂದ ಇ-ಮೇಲ್ ಬಳಕೆದಾರರ ಮಾಹಿತಿ ಕೊಡಿಸುವಂತೆ ಕೋರಲಾಗಿತ್ತು. ಇಂಟರ್‌ಪೋಲ್ ಅಧಿಕಾರಿಗಳು, ಸಂಬಂಧಪಟ್ಟ ಕಂಪನಿಗಳಿಗೂ ನೋಟಿಸ್ ನೀಡಿದ್ದಾರೆ. ಆದರೆ, ಕಂಪನಿಯವರು ಮಾಹಿತಿ ನೀಡಲು ನಿರಾಕರಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವೈಯಕ್ತಿಕ ಸುರಕ್ಷತೆಗೆ ಆದ್ಯತೆ: 'ಬಳಕೆದಾರರ ವೈಯಕ್ತಿಕ ಮಾಹಿತಿ ಗೋಪ್ಯವಾಗಿಡುವುದು ಕಂಪನಿಯ ಧ್ಯೇಯ. ಯಾವುದೇ ಕಾರಣಕ್ಕೂ ಮಾಹಿತಿ ಹಂಚಿಕೊಳ್ಳಲು ಸಾಧ್ಯವಿಲ್ಲ. ಮಾಹಿತಿ ಹಂಚಿಕೆ ಸಂಬಂಧ ಯಾವುದೇ ಕಾನೂನುಗಳು ಕಂಪನಿಗೆ ಅನ್ವಯವಾಗುವುದಿಲ್ಲ' ಎಂಬುದಾಗಿಯೂ ಕಂಪನಿಯವರು ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿ ತಿಳಿದುಬಂದಿದೆ.

2022ರ ಏಪ್ರಿಲ್ 8ರಂದು ನಗರದ 16 ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿತ್ತು. ಈ ಪ್ರಕರಣಗಳ ತನಿಖೆ ನಡೆಸಿದ್ದ ಪೊಲೀಸರು, ವಿದೇಶದಿಂದ ಇ-ಮೇಲ್ ಬಂದಿದ್ದನ್ನು ಪತ್ತೆ ಮಾಡಿ ಕಂಪನಿಯಿಂದ ಮಾಹಿತಿ ಕೋರಿದ್ದರು. ಅವಾಗಲೂ ಕಂಪನಿಯಿಂದ ಯಾವುದೇ ಉತ್ತರ ಬಂದಿರಲಿಲ್ಲ.

ವೀರಶೈವ ನಿಗಮಕ್ಕೆ ಕಾಶಪ್ಪನವರ ಅಧ್ಯಕ್ಷ

ಬೆಂಗಳೂರು: ಹುನಗುಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ ಅವರನ್ನು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿರುವ ಆದೇಶವನ್ನು ರದ್ದುಪಡಿಸಿ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಿ ಬುಧವಾರ ಆದೇಶ ಹೊರಡಿಸಲಾಗಿದೆ.



ವಿಜಯಾನಂದ ಅವರನ್ನು ಕ್ರೀಡಾ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿ ಜನವರಿ 26ರಂದು ಆದೇಶ ಹೊರಡಿಸಲಾಗಿತ್ತು. ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಮಾಡಿ, ಬದಲಾವಣೆಗೆ ಮನವಿ ಮಾಡಿದ್ದರು. ವಿಜಯಾನಂದ ಅವರಿಗೆ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನವನ್ನು ನೀಡುವಂತೆ ಮುಖ್ಯಮಂತ್ರಿಯವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಟಿಪ್ಪಣಿ ಹೊರಡಿಸಿದ್ದರು.

ಎರಡು ವರ್ಷಗಳ ಅವಧಿಗೆ ವಿಜಯಾನಂದ ಅವರಿಗೆ ನಿಗಮದ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಸಂಪುಟ ದರ್ಜೆಯ ಸ್ಥಾನ ನೀಡಿ, ಸಂಪುಟ ದರ್ಜೆ ಸಚಿವರಿಗೆ ನೀಡುವ ಎಲ್ಲ ಸೌಲಭ್ಯಗಳನ್ನೂ ಒದಗಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿರುವ ವಿಜಯಾನಂದ ಅವರು, ಪಂಚಮಸಾಲಿ ಮೀಸಲಾತಿಯ ಹೋರಾಟದ ಮುಂಚೂಣಿಯಲ್ಲಿದ್ದಾರೆ.

ಕೇಸರಿ ಪಾಳಯಕ್ಕೆ ಕಮಲ್‌ನಾಥ್?

ನವದೆಹಲಿ: ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್‌ನ ಹಿರಿಯ ನಾಯಕ ಕಮಲ್‌ನಾಥ್ ಮತ್ತು ಸಂಸದರಾದ ಅವರ ಪುತ್ರ ನಕುಲ್‌ನಾಥ್ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂಬ ಊಹಾಪೋಹ ಗಳು ದಟ್ಟವಾಗಿವೆ.

9

ವಾಹನ ಪಲ್ಟಿ: ಮೂವರು ಸಾವು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಬೈರಾಪಟ್ಟಣ ಬಳಿಯ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಶುಕ್ರವಾರ ತಡರಾತ್ರಿ ಟೆಂಪೊ ಟ್ರಾವೆಲರ್ ಪಲ್ಟಿಯಾಗಿ ಮೂವರು ಸ್ಥಳದಲ್ಲೇ ಮೃತಪಟ್ಟು, ಏಳು ಮಂದಿ ಗಾಯಗೊಂಡಿದ್ದಾರೆ.

ಮೈಸೂರು ತಾಲ್ಲೂಕಿನ ಸೋಮೇಶ್ವರಪುರ ಗ್ರಾಮದ ಸೋಮಲಿಂಗಪ್ಪ(70), ಹುಣಸೂರು ತಾಲ್ಲೂಕಿನ ಕರಿಮುದ್ದನಹಳ್ಳಿ ಗ್ರಾಮದ ಶಿವಲಿಂಗಪ್ಪ (66) ಹಾಗೂ ಧಾರವಾಡದ ಮಾಳಮಡ್ಡಿಯ ರಾಜೇಶ್ವರಿ ದೇಸಾಯಿ (57) ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಗಂಭೀರವಾಗಿ ಗಾಯಗೊಂಡಿರುವ ಲೀಲಾವತಿ, ಲಕ್ಷ್ಮಿ, ನಮ್ರತಾ ಹಾಗೂ ಚೂಡರತ್ನ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತದಿಂದ ಜಖಂಗೊಂಡಿದ್ದ ವಾಹನವನ್ನು ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ದೂರಿನ ಮೇರೆಗೆ ಟಿ.ಟಿ ವಾಹನ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಚನ್ನಪಟ್ಟಣ ಸಂಚಾರ ಠಾಣೆ ಪೊಲೀಸರು ಹೇಳಿದರು.

ಸೈಬರ್ ವಂಚನೆ ತಡೆಗೆ ಜಾಗೃತಿಯೇ ಪರಿಹಾರ: ಸಿಐಡಿ ಡಿಐಜಿ ಸಿ. ವಂಶಿಕೃಷ್ಣ ಅಭಿಪ್ರಾಯ

‘ಒಂದೇ ವರ್ಷದಲ್ಲಿ ₹ 7,480 ಕೋಟಿ ವಂಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ 2022ರಲ್ಲಿ 65,893 ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿದ್ದು, ₹ 7,480 ಕೋಟಿ ಹಣವನ್ನು ವಂಚಕರು ದೋಚಿದ್ದಾರೆ’ ಎಂದು ಸಿಐಡಿ ಡಿಐಜಿ ಸಿ. ವಂಶಿಕೃಷ್ಣ ಹೇಳಿದರು.

ನಗರದಲ್ಲಿರುವ ಐಎಎಸ್ ಅಧಿಕಾರಿಗಳ ಸಂಘದ ಸಭಾಭವನದಲ್ಲಿ ಶನಿವಾರ ಆಯೋಜಿಸಿದ್ದ ‘ಸೈಬರ್ ಸುರಕ್ಷತೆ’ ಕುರಿತ ತರಬೇತಿ ಕಾರ್ಯಾಗಾರದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

‘ಕರ್ನಾಟಕದಲ್ಲೂ ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿದ್ದು, 2022ರಲ್ಲಿ ₹ 617 ಕೋಟಿ ಹಣವನ್ನು ವಂಚಕರು ದೋಚಿದ್ದಾರೆ. ಸೈಬರ್ ಅಪರಾಧ ಪ್ರಕರಣಗಳಲ್ಲಿ ಶೇ 89ರಷ್ಟು ಸಂತ್ರಸ್ತರಿಗೆ ಹಣ ವಾಪಸು ಸಿಗುವುದಿಲ್ಲ. ಶೇ 11ರಷ್ಟು ಮಂದಿಗೆ ಮಾತ್ರ ಹಣ ಸಿಗುತ್ತಿದೆ’ ಎಂದು ಹೇಳಿದರು.

‘ಫೆಡೆಕ್ಸ್ ಕೊರಿಯರ್, ಮನೆಯಿಂದ ಕೆಲಸ, ಸಾಲದ ಆ್ಯಪ್, ಬೆತ್ತಲೆ ವಿಡಿಯೊ ಕರೆ ಬ್ಲ್ಯಾಕ್‌ಮೇಲ್ ಪ್ರಕರಣಗಳು ಹೆಚ್ಚಾಗುತ್ತಿವೆ. ಸೈಬರ್ ವಂಚನೆಗೆ ಕೃತಕ ಬುದ್ಧಿಮತ್ತೆ (ಎಐ) ಸಹ ಬಳಸಲಾಗುತ್ತಿದೆ. ಜನರು ಜಾಗೃತಿ ವಹಿಸಿದರೆ ಮಾತ್ರ ಸೈಬರ್ ಅಪರಾಧಗಳನ್ನು ನಿಯಂತ್ರಿಸಬಹುದು. ಯಾವುದೇ ಹೊಸ ಆ್ಯಪ್ ಅಥವಾ ತಂತ್ರಜ್ಞಾನವನ್ನು ಬಳಸುವ ಮುನ್ನ, ಅದರ ಕಾರ್ಯಾಚರಣೆ ಬಗ್ಗೆ ತಿಳಿದುಕೊಂಡು ಮುಂದುವರಿಯಬೇಕು’ ಎಂದು ಅವರು ಸಲಹೆ ನೀಡಿದರು.

2,138 ಕಂಪನಿ ದತ್ತಾಂಶ ಹ್ಯಾಕ್: ‘2022ರಲ್ಲಿ ಭಾರತದ 2,138 ಕಂಪನಿಗಳ ದತ್ತಾಂಶ ಹ್ಯಾಕ್ ಮಾಡಿ ಹಣಕ್ಕೆ ಬೇಡಿಕೆ ಇರಿಸಲಾಗಿತ್ತು. ಇದರಲ್ಲಿ ಶೇ 40ರಷ್ಟು ಕಂಪನಿಗಳು, ದತ್ತಾಂಶ ವಾಪಸು ಪಡೆಯಲು ಹಣ ನೀಡಿವೆ’ ಎಂದು ವಂಶಿಕೃಷ್ಣ ಹೇಳಿದರು.

ಎಲ್ಲರೂ ಸಂತ್ರಸ್ತರು: ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಸಿಐಡಿ ಡಿಜಿಪಿ ಎಂ.ಎ. ಸಲೀಂ, ‘ಮೊಬೈಲ್, ಕಂಪ್ಯೂಟರ್ ಹಾಗೂ ಇತರೆ ಪ್ರಕಾರದ ತಂತ್ರಜ್ಞಾನ ಬಳಸುವ ಎಲ್ಲರೂ ಸೈಬರ್ ವಂಚನೆ ಸಂತ್ರಸ್ತರು. ನಮ್ಮ ವೈಯಕ್ತಿಕ ದತ್ತಾಂಶವನ್ನು ಬಳಸಿಕೊಂಡು ವಂಚಕರು, ಯಾವಾಗ ಬೇಕಾದರೂ ಹಣ ದೋಚಬಹುದು. ಹೀಗಾಗಿ, ನಾವೆಲ್ಲರೂ ಹೆಚ್ಚು ಜಾಗೃತಿ ವಹಿಸಬೇಕು. ಅನುಮಾನಾಸ್ಪದ ಕರೆಗಳು ಬಂದರೆ, ಪೊಲೀಸರಿಗೆ ಮಾಹಿತಿ ನೀಡಬೇಕು’ ಎಂದರು.

ಪೊಲೀಸ್ ಅಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು, ಕಾನೂನು ವಿದ್ಯಾರ್ಥಿಗಳಿಗಾಗಿ ಸಿಐಡಿ ಹಾಗೂ ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆ ಸಹಯೋಗದಲ್ಲಿ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.



ಕಾರ್ಯಾಗಾರದಲ್ಲಿ ಎಂ.ಎ. ಸಲೀಂ ಮಾತನಾಡಿದರು. ನಿವೃತ್ತ ಐಎಎಸ್ ಅಧಿಕಾರಿ ಟಿ.ಎಂ. ವಿಜಯಭಾಸ್ಕರ್ ಹಾಗೂ ಎಸ್. ರಾಮನಾಥನ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ವಂಚಕರಿಗೆ ಬ್ಯಾಂಕ್ ಖಾತೆ ಮಾರಾಟ: 3 ತಿಂಗಳಲ್ಲಿ ₹ 10 ಕೋಟಿ ಗಳಿಕೆ’

‘ಸೈಬರ್ ಅಪರಾಧ ಪ್ರಕರಣವೊಂದರಲ್ಲಿ ಒಡಿಶಾ ಪೊಲೀಸರು, ಪಶ್ಚಿಮ ಬಂಗಾಳದಲ್ಲಿ ಮೂವರನ್ನು ಇತ್ತೀಚೆಗೆ ಬಂಧಿಸಿದ್ದರು. ಈ ಮೂವರು, ಗ್ರಾಮೀಣ ಭಾಗದ ಜನರ ವೈಯಕ್ತಿಕ ದಾಖಲೆಗಳನ್ನು ಖರೀದಿಸಿ ಬ್ಯಾಂಕ್ ಖಾತೆಗಳನ್ನು ತೆರೆದು ವಂಚಕರಿಗೆ ಮಾರುತ್ತಿದ್ದರು’ ಎಂದು ವಂಶಿಕೃಷ್ಣ ಹೇಳಿದರು.

‘ಜನರಿಂದ ದಾಖಲೆ ಪಡೆಯಲು ಒಬ್ಬರಿಗೆ ₹2,000 ನೀಡುತ್ತಿದ್ದರು. ಜೊತೆಗೆ, ಆರೋಪಿಗಳು ತಾವೇ ಸೃಷ್ಟಿಸುವ ಬ್ಯಾಂಕ್ ಖಾತೆಯನ್ನು ₹ 21,000 ಹಣಕ್ಕೆ ವಂಚಕರಿಗೆ ಮಾರುತ್ತಿದ್ದರು. ಇಂಥ ಕೆಲಸದಿಂದಲೇ ಮೂವರು ಕೇವಲ ಎರಡು ತಿಂಗಳಿನಲ್ಲಿ ₹ 10 ಕೋಟಿ ಗಳಿಸಿದ್ದರು’ ಎಂದು ಮಾಹಿತಿ ನೀಡಿದರು.

‘ಸಹಾಯವಾಣಿಗೆ ದಿನ 50 ಸಾವಿರ ಕರೆ’

‘ಸೈಬರ್ ಅಪರಾಧಗಳ ಬಗ್ಗೆ ವರದಿ ಮಾಡಲು ರಾಷ್ಟ್ರಮಟ್ಟದಲ್ಲಿ 1930 ಸಹಾಯವಾಣಿ ತೆರೆಯಲಾಗಿದೆ. ಇದಕ್ಕೆ ನಿತ್ಯವೂ ಕನಿಷ್ಠ 50 ಸಾವಿರ ಕರೆಗಳು ಬರುತ್ತಿವೆ’ ಎಂದು ಸಿಐಡಿ ಡಿಐಜಿ ಸಿ. ವಂಶಿಕೃಷ್ಣ ಹೇಳಿದರು.

‘259 ಸಂಸ್ಥೆಗಳು ಸಹಾಯವಾಣಿ ಅಡಿಯಲ್ಲಿ ಕೆಲಸ ಮಾಡುತ್ತಿವೆ. ಸಾರ್ವಜನಿಕರು, ಸೈಬರ್ ಅಪರಾಧ ನಡೆದ ತಕ್ಷಣ ತುರ್ತಾಗಿ ಮಾಹಿತಿ ನೀಡಬೇಕು. ಸಂಸ್ಥೆಗಳ ನೋಡಲ್ ಅಧಿಕಾರಿಗಳು, ಅನುಮಾನಾಸ್ಪದ ಹಣದ ವಹಿವಾಟು ತಡೆಯಲಿದ್ದಾರೆ. ನಂತರ ಸಾರ್ವಜನಿಕರು, ಪೊಲೀಸರಿಗೆ ದೂರು ನೀಡಿದರೆ ಎಫ್‌ಐಆರ್ ದಾಖಲಾಗುತ್ತದೆ. ಆರೋಪಿ ಪತ್ತೆಗಾಗಿ ಪೊಲೀಸರು ತನಿಖೆ ಆರಂಭಿಸುತ್ತಾರೆ’ ಎಂದರು.

ಸುದ್ದಿ 2 ನಿಮಿಷ


ಎಚ್‌ಎಸ್‌ಆರ್‌ಪಿ: ಕ್ಯೂ ಆರ್ ಕೋಡ್ ವಂಚನೆ

ಬೆಂಗಳೂರು: ‘ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ, ಕೆಲ ನಿಮಿಷಗಳಲ್ಲಿ ಎಚ್‌ಎಸ್‌ಆರ್‌ಪಿ ನೋಂದಣಿ ಮಾಡಿ’ ಎಂಬುದಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹರಿಬಿಟ್ಟು ಸೈಬರ್ ವಂಚಕರು ಹಣ ದೋಚುತ್ತಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸುವಂತೆ ಪೊಲೀಸರು ಕೋರಿದ್ದಾರೆ.

ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಹಣ ಪಾವತಿಸಿದ್ದ ನಗರದ ನಿವಾಸಿ ರಕ್ಷಿತ್, ತಮಗಾದ ವಂಚನೆ ಬಗ್ಗೆ ಸಾಮಾಜಿಕ ಮಾಧ್ಯಮ ಮೂಲಕ ಪೊಲೀಸರಿಗೆ ದೂರು ನೀಡಿದ್ದಾರೆ. ದೂರು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಹಣ ದೋಚಿರುವ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ.

‘ವಾಹನಗಳಿಗೆ ಅತೀ ಸುರಕ್ಷಿತ ನೋಂದಣಿ ಸಂಖ್ಯೆ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸಲು ಸರ್ಕಾರ ಹೇಳಿದೆ. ಈ ಅವಕಾಶವನ್ನು ದುರುಪಯೋಗಪಡಿಸಿಕೊಂಡಿರುವ ಸೈಬರ್ ವಂಚಕರು, ಎಚ್‌ಎಸ್‌ಆರ್‌ಪಿ ಹೆಸರಿನಲ್ಲಿ ಹಣ ದೋಚುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡಿ ಜನರನ್ನು ವಂಚಿಸುತ್ತಿದ್ದಾರೆ. ಜನರು ಯಾವುದೇ ಕಾರಣಕ್ಕೂ ಅಪರಿಚಿತರ ಜೊತೆ ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬಾರದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಸರ್ಕಾರದ ಅಧಿಕೃತ ಜಾಲತಾಣದ ಮೂಲಕವಷ್ಟೇ ಎಚ್‌ಎಸ್‌ಆರ್‌ಪಿ ನೋಂದಣಿ ಮಾಡಬೇಕು. ಅನುಮಾನಾಸ್ಪದ ಲಿಂಕ್‌ಗಳು ಹಾಗೂ ಕ್ಯೂಆರ್ ಕೋಡ್‌ಗಳು ಕಂಡುಬಂದರೆ ಪೊಲೀಸರು ಅಥವಾ ಸಾರಿಗೆ ಇಲಾಖೆಗೆ ಮಾಹಿತಿ ನೀಡಬೇಕು’ ಎಂದು ಕೋರಿದ್ದಾರೆ.



₹ 1.07 ಕೋಟಿ ದಂಡ ಬಾಕಿ: 85 ವಾಹನ ಜಪ್ತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿ ₹ 1.07 ಕೋಟಿ ದಂಡ ಬಾಕಿ ಉಳಿಸಿಕೊಂಡಿದ್ದ 85 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದು, ದಂಡ ಪಾವತಿ ಮಾಡುವಂತೆ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

₹ 50 ಸಾವಿರಕ್ಕಿಂತ ಹೆಚ್ಚು ದಂಡ ಬಾಕಿ ಉಳಿಸಿಕೊಂಡಿರುವ ಮಾಲೀಕರ ಮನೆಗಳಿಗೆ ಭೇಟಿ ನೀಡುತ್ತಿರುವ ಪೊಲೀಸರು, ದಂಡ ಪಾವತಿಸುವಂತೆ ಸೂಚಿಸುತ್ತಿದ್ದಾರೆ.ದಂಡ ಪಾವತಿಸಲು ಹಿಂದೇಟು ಹಾಕಿದವರ ವಾಹನಗಳನ್ನು ಜಪ್ತಿ ಮಾಡುತ್ತಿದ್ದಾರೆ.

‘ಹೆಲ್ಮೆಟ್ ರಹಿತ ಸವಾರಿ, ಸಿಗ್ನಲ್ ಜಂಪ್ ಸೇರಿದಂತೆ ವಿವಿಧ ಪ್ರಕಾರದ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದವರ ಪಟ್ಟಿ ಸಿದ್ಧಪಡಿಸಲಾಗಿದೆ. ಆಯಾ ಠಾಣೆ ಸಿಬ್ಬಂದಿ ದಂಡ ವಸೂಲಿ ಮಾಡುತ್ತಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸದ್ಯಕ್ಕೆ 85 ವಾಹನಗಳನ್ನು (ಕಾರು ಹಾಗೂ 84 ದ್ವಿಚಕ್ರ ವಾಹನ) ಜಪ್ತಿ ಮಾಡಲಾಗಿದೆ. ಬಾಕಿ ದಂಡ ಪಾವತಿಸುವಂತೆ ಮಾಲೀಕರಿಗೆ ಹೇಳಲಾಗಿದೆ. ದಂಡ ಪಾವತಿ ಮಾಡದಿದ್ದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿದೆ’ ಎಂದರು.



ರೈತರ ಪ್ರತಿಭಟನೆ

‘ರಾಷ್ಟ್ರೀಕೃತ ಬ್ಯಾಂಕ್‌ಗಳು, ಸಹಕಾರ ಸಂಘಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳಲ್ಲಿರುವ ರೈತರ ಸಾಲ ಮನ್ನಾ ಮಾಡಬೇಕು. ಬರಗಾಲದಿಂದ ತತ್ತರಿಸಿರುವ ರೈತರಿಗೆ ಪ್ರತಿ ಎಕರೆಗೆ ₹ 25,000 ಪರಿಹಾರ ನೀಡಬೇಕು. ಕೃಷಿ ಪರಿಷತ್ ಮಂಡಳಿ ಸ್ಥಾಪಿಸಬೇಕು’ ಎಂದು ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಆರ್ಥಿಕ ಶಕ್ತಿ ಕೇಂದ್ರವಾಗಿ ಬೆಂಗಳೂರು’

ಎರಡನೇ ಮುಖಪುಟದಿಂದ

ಹೊರವಲಯದಲ್ಲಿರುವ ಪಟ್ಟಣಗಳನ್ನು ಸ್ಯಾಟಲೈಟ್ ಪಟ್ಟಣಗಳಾಗಿ ಅಭಿವೃದ್ಧಿಪಡಿಸಲಾಗುವುದು. ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿ ಮತ್ತು ಬಿಡದಿ ಮುಂತಾದ ಪಟ್ಟಣಗಳ ರಸ್ತೆ ಮತ್ತು ರೈಲು ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಸುಗಮಗೊಳಿಸಲಾಗುವುದು ಎಂದರು.

ನಗರದ ಅಭಿವೃದ್ಧಿಗೆ ನಾಗರಿಕರು ಕೊಡುಗೆ ನೀಡಬೇಕು. ಎಲ್ಲರೂ ಕೈಜೋಡಿಸಿದಾಗ ಜನರ ನಿರೀಕ್ಷೆಗಳನ್ನು ಪೂರೈಸುವ ನಗರವನ್ನಾಗಿ ಪರಿವರ್ತಿಸಲು ಸಾಧ್ಯ ಎಂದು ಪ್ರತಿಪಾದಿಸಿದರು.

ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೀತಾರಾಮನ್ ಶಂಕರ್ ಭಾಗವಹಿಸಿದ್ದರು. ಶನಿವಾರ ಇಡೀ ದಿನ ವಿವಿಧ ಗೋಷ್ಠಿಗಳು ನಡೆದವು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಟಿಪಿಎಂಎಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ತಿಲಕ್ ಕುಮಾರ್ ಅವರು ಸಿದ್ದರಾಮಯ್ಯನವರ ಕ್ಯಾರಿಕೇಚರ್ ಇರುವ ಸ್ಮರಣಿಕೆ ನೀಡಿದರು –ಪ್ರಜಾವಾಣಿ ಚಿತ್ರ

‘ಕೇಂದ್ರದ ವೈಫಲ್ಯ: ಯೋಧರಿಗೆ ಸಿಗದ ಸೌಲಭ್ಯ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಕೇಂದ್ರದ ಅಡಿಯಲ್ಲಿ ಶ್ರಮಿಸುವ ಯೋಧರು ಸೌಲಭ್ಯಗಳಿಗಾಗಿ ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ವೈಫಲ್ಯವೇ ಕಾರಣ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟೀಕಿಸಿದರು.

ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಬಳಿ ಉಗ್ರರ ದಾಳಿಯಲ್ಲಿ ಹುತಾತ್ಮರಾದ ಸಿಆರ್‌ಪಿಎಫ್‌ನ 44 ವೀರಯೋಧರ ಸ್ಮರಣೆಗಾಗಿ ಕೇಂದ್ರೀಯ ಅರೆಸೇನಾ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಸಿಆರ್‌ಪಿಎಫ್ ಕೇಂದ್ರದಲ್ಲಿ ಆಯೋಜಿಸಿದ್ದ 5ನೇ ವಾರ್ಷಿಕ ಸ್ಮರಣಾಂಜಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯೋಧರು, ನಿವೃತ್ತಿ ನಂತರ ಸಿಗಬೇಕಾದ ಸವಲತ್ತುಗಳಿಗಾಗಿ ಬೇಡಿಕೊಳ್ಳಬೇಕಾದ ಪರಿಸ್ಥಿತಿ ಬದಲಾಗಬೇಕಿದೆ ಎಂದರು.

ದೇಶಕ್ಕೆ ಕೃಷಿಕರು, ಕಾರ್ಮಿಕರು ಹಾಗೂ ಯೋಧರು ಪ್ರಮುಖ ಆಧಾರ ಸ್ತಂಭಗಳಿದ್ದಂತೆ. ಅರೆಸೇನಾಪಡೆ ಮಾಜಿ ಯೋಧರ ಸಮಸ್ಯೆಗಳ ಕುರಿತು ಚರ್ಚಿಸಿ, ಪರಿಹರಿಸಲಾಗುವುದು. ನಗರಾಭಿವೃದ್ಧಿ ಇಲಾಖೆಯಲ್ಲಿ ಮಾಜಿ ಯೋಧರಿಗೆ ಹುದ್ದೆ ನೀಡುವ ಬಗ್ಗೆ ಚರ್ಚಿಸಲಾಗುವುದು’ ಎಂದು ತಿಳಿಸಿದರು.

ಸಿಆರ್‌ಪಿಎಫ್ ಕೇಂದ್ರದ ನಿವೃತ್ತ ಐಜಿಪಿ ಕೆ. ಅರ್ಕೇಶ್ ಮಾತನಾಡಿ, ‘ಅರೆಸೇನಾ ಪಡೆಗಳ ಕುಂದುಕೊರತೆಗಳು ಸಾಕಷ್ಟಿವೆ. ಈ ಕುರಿತು ಸರ್ಕಾರದ ಗಮನಕ್ಕೆ ತರಲು ಹಾಗೂ ದೇಶಕ್ಕಾಗಿ ತಮ್ಮ ಪ್ರಾಣವನ್ನು ಕಳೆದುಕೊಂಡ ಅರೆಸೇನಾ ಪಡೆಗಳ ಯೋಧರ ಸ್ಮರಣೆ ಮಾಡಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.



ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಬಳಿ ಉಗ್ರರ ದಾಳಿಯಲ್ಲಿ ಹುತಾತ್ಮರಾದ ಸಿಆರ್‌ಪಿಎಫ್‌ನ 44 ವೀರಯೋಧರ ಸ್ಮರಣೆಗಾಗಿ ಸಿಆರ್‌ಪಿಎಫ್ ಕೇಂದ್ರದಲ್ಲಿ ಆಯೋಜಿಸಿದ್ದ 5ನೇ ವಾರ್ಷಿಕ ಸ್ಮರಣಾಂಜಲಿ ಕಾರ್ಯಕ್ರಮವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು

ಎಫ್‌ಎಆರ್ ಕರಡು ಮಸೂದೆ ಸಿದ್ಧ: ರಾಕೇಶ್ ಸಿಂಗ್

ಬಿಲ್ಡರ್‌ಗಳು ಸೇರಿದಂತೆ ನಾಗರಿಕರು ಹೆಚ್ಚುವರಿ ಮಹಡಿ ನಿರ್ಮಿಸಲು ಅವಕಾಶ ನೀಡುವ ಅಂತಸ್ತು ವಿಸ್ತೀರ್ಣ ಅನುಪಾತ (ಎಫ್‌ಎಆರ್) ಕರಡು ಮಸೂದೆಯನ್ನು ನಗರಾಭಿವೃದ್ಧಿ ಇಲಾಖೆ ಸಿದ್ಧಪಡಿಸಿದೆ. ಪ್ರಸ್ತುತ ನಡೆಯುತ್ತಿರುವ ಅಧಿವೇಶನದಲ್ಲಿ ಮಂಡನೆಯಾಗುವ ಸಾಧ್ಯತೆ ಇದೆ ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ತಿಳಿಸಿದರು.

‘ವಾಣಿಜ್ಯ ಮತ್ತು ಸಾರ್ವಜನಿಕ ಹಿತಾಸಕ್ತಿಗಳ ಸಮತೋಲನ: ಸುಸ್ಥಿರತೆ ಅಭಿವೃದ್ಧಿಪಡಿಸುವ ತಂತ್ರಗಳು’ ಚರ್ಚಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಎಫ್‌ಎಆರ್ ನೀತಿ ಬಗ್ಗೆ ನಾಲ್ಕು ವರ್ಷಗಳ ಹಿಂದೆಯೇ ಚರ್ಚೆ ನಡೆದಿತ್ತು. ಈಗ ಜಾರಿಯಾಗುವ ಹಂತಕ್ಕೆ ಬಂದಿದೆ. ಎಫ್‌ಎಆರ್ ಹೊಸ ಕಾಯ್ದೆಯು ನಿಗದಿ ಪಡಿಸುವ ಗರಿಷ್ಠ ಮಿತಿ ಮತ್ತು ಅದರ ಶುಲ್ಕಗಳ ವಿವರಗಳನ್ನು ಒದಗಿಸಲಿದೆ ಎಂದರು.

‘ಬಿಡದಿಯಲ್ಲಿ ನಗರಾಭಿವೃದ್ಧಿ ಇಲಾಖೆಗೆ ಸೇರಿದ 10,000 ಎಕರೆ ಜಮೀನಿದೆ. ನೀಲನಕ್ಷೆ ಸಿದ್ಧವಾಗಿದೆ. ಅಲ್ಲಿ ಹೊಸ ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಇಟ್ಟುಕೊಂಡಿದ್ದೇವೆ. ವಾಣಿಜ್ಯ, ವಸತಿ, ಕ್ರೀಡೆ, ಆರೋಗ್ಯ ಸಹಿತ ಎಲ್ಲವೂ ಒಂದೇ ಕಡೆ ಇರುವಂತೆ ಯೋಜನೆ ರೂಪಿಸಲಾಗುವುದು’ ಎಂದು ಹೇಳಿದರು.

120 ಮೊಬೈಲ್ ಕಳವು: 5 ಮಹಿಳೆಯರ ಬಂಧನ

ಬೆಂಗಳೂರು: ಜನ ಹೆಚ್ಚು ಸೇರುವ ಸ್ಥಳಗಳಲ್ಲಿ ಸುತ್ತಾಡಿ ಮೊಬೈಲ್ ಕಳ್ಳತನ ಮಾಡುತ್ತಿದ್ದ ಆರೋಪದಡಿ ಐವರು ಮಹಿಳೆಯರನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶ ಅನಂತಪುರ ಜಿಲ್ಲೆಯ ರಾಧಾ ಅಲಿಯಾಸ್ ಉಷಾ (27), ರಾಶಿಪೊಗುಲಾ ನಂದಿನಿ (27), ಶಂಕ್ರಮ್ಮ (26), ಚಿಂತಾಮಣಿ ತಾಲ್ಲೂಕಿನ ಕರಿಯಪ್ಪಲ್ಲಿಯ ಸುಜಾತಾ (36) ಹಾಗೂ ಮುರುಗುಮುಲ್ಲಾ ಗ್ರಾಮದ ಶಾಂತಮ್ಮ (45) ಬಂಧಿತರು. ಇವರಿಂದ ₹ 30 ಲಕ್ಷ ಮೌಲ್ಯದ 120 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಫೆ. 7ರಂದು ಬಸ್‌ನಲ್ಲಿ ಹೊರಟಿದ್ದ ಪ್ರಯಾಣಿಕರೊಬ್ಬರ ಮೊಬೈಲ್ ಕಳ್ಳತನ ಆಗಿತ್ತು. ಈ ಸಂಬಂಧ ದಾಖಲಾಗಿದ್ದ ಪ್ರಕರಣ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದರು.

‘ಬಸ್ ನಿಲ್ದಾಣ, ಮಾರುಕಟ್ಟೆ, ಜಾತ್ರೆ, ಸಭೆ–ಸಮಾರಂಭ ಸೇರಿ ಜನರು ಹೆಚ್ಚು ಸೇರುತ್ತಿದ್ದ ಸ್ಥಳಗಳಿಗೆ ಆರೋಪಿಗಳು ಹೋಗುತ್ತಿದ್ದರು. ಬ್ಯಾಗ್ ಹಾಗೂ ಜೇಬಿನಲ್ಲಿರುತ್ತಿದ್ದ ಮೊಬೈಲ್‌ಗಳನ್ನು ಕದಿಯುತ್ತಿದ್ದರು. ನಂತರ, ಬೆಂಗಳೂರಿನ ಮನೆಯೊಂದರಲ್ಲಿ ಮೊಬೈಲ್ ಸಂಗ್ರಹಿಸಿಡುತ್ತಿದ್ದರು. ಆಂಧ್ರಪ್ರದೇಶದ ವ್ಯಕ್ತಿಯೊಬ್ಬರ ಮೂಲಕ ಮೊಬೈಲ್ ಮಾರಿ, ಹಣ ಸಂಪಾದಿಸುತ್ತಿದ್ದರು’ ಎಂದು ಹೇಳಿದ್ದಾರೆ.

‘ಇಡ್ಲಿ ಗುರು’ ಮಾಲೀಕನ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಡ್ಲಿ ಮಾರಾಟಕ್ಕೆ ಫ್ರಾಂಚೈಸಿ ನೀಡುವುದಾಗಿ ಹೇಳಿ ಹಣ ಪಡೆದು ವಂಚಿಸಿದ್ದ ಪ್ರಕರಣದಲ್ಲಿ ‘ಇಡ್ಲಿ ಗುರು’ ಕಂಪನಿ ಮಾಲೀಕ ಕಾರ್ತಿಕ್ ಶೆಟ್ಟಿ ಅವರನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

‘ವಂಚನೆಗೆ ಸಂಬಂಧಪಟ್ಟಂತೆ ಕಾರ್ತಿಕ್ ಶೆಟ್ಟಿ ಹಾಗೂ ಇತರರ ವಿರುದ್ಧ ಮೂರು ಪ್ರತ್ಯೇಕ ಎಫ್‌ಐಆರ್ ದಾಖಲಾಗಿದ್ದವು. ವಿಚಾರಣೆಗೆ ಹಾಜರಾಗುವಂತೆ ಕಾರ್ತಿಕ್ ಶೆಟ್ಟಿಗೆ ನೋಟಿಸ್ ನೀಡಲಾಗಿತ್ತು. ಆದರೆ, ಅವರು ವಿಚಾರಣೆಗೆ ಬಂದಿರಲಿಲ್ಲ. ಮುಂಬೈ ಬಳಿ ಅವರನ್ನು ವಶಕ್ಕೆ ಪಡೆದು ನಗರಕ್ಕೆ ಕರೆತರಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪ್ರಕರಣ ಸಂಬಂಧ ವಿಚಾರಣೆ ನಡೆಸಿ ಕಾರ್ತಿಕ್ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಅಗತ್ಯವಿದ್ದರೆ ಪುನಃ ವಿಚಾರಣೆಗೆ ಕರೆಯುವುದಾಗಿ ಹೇಳಿ ಕಾರ್ತಿಕ್‌ನನ್ನು ಬಿಟ್ಟು ಕಳುಹಿಸಲಾಗಿದೆ’ ಎಂದು ತಿಳಿಸಿದರು.

₹ 3 ಲಕ್ಷ ವಾಪಸು ನೀಡಲು ಸಿದ್ಧ: ‘ನಾನು ಯಾರಿಗೂ ವಂಚಿಸಿಲ್ಲ. ದೂರುದಾರ ಚೇತನ್ ಕಡೆಯಿಂದ ಒಪ್ಪಂದದ ಪ್ರಕಾರ ಫ್ರಾಂಚೈಸಿ ನೀಡಲು ₹ 3 ಲಕ್ಷ ಪಡೆದಿದ್ದೆ. ಅದನ್ನು ವಾಪಸು ನೀಡಲು ಒಪ್ಪಿದ್ದೆ. ಆದರೆ, ಅವರು ₹ 5 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದರು’ ಎಂದು ಕಾರ್ತಿಕ್ ಶೆಟ್ಟಿ ವಿಚಾರಣೆಯಲ್ಲಿ ತಿಳಿಸಿದ್ದಾರೆ.

‘₹ 5 ಲಕ್ಷ ನೀಡಲು ಸಾಧ್ಯವಿಲ್ಲವೆಂದು ಚೇತನ್‌ಗೆ ಹೇಳಿದ್ದೆ. ಅವರ ವಕೀಲರ ಕಡೆಯಿಂದ ನೋಟಿಸ್ ಬಂದಿತ್ತು. ಅದಕ್ಕೆ ಉತ್ತರ ಕೊಟ್ಟಿದ್ದೆ. ಅದರ ನಡುವೆಯೇ ಚೇತನ್ ದೂರು ನೀಡಿದ್ದು, ಮಾಧ್ಯಮಗಳ ಮೂಲಕವೇ ಈ ವಿಷಯ ನನಗೆ ತಿಳಿಯಿತು’ ಎಂದು ಅವರು ಹೇಳಿದ್ದಾರೆ.

ನೈಜೀರಿಯಾ ಪ್ರಜೆಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ವಾಸವಿದ್ದ ನೈಜೀರಿಯಾ ಪ್ರಜೆ ಇಫೆಂನಲ್ ಒಕೆಹುಕ್ವು ಮೈಕ್‌ಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ 56ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

ಕೊಡಿಗೇಹಳ್ಳಿ ಠಾಣೆಯಲ್ಲಿ 2022ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಸಿ.ಕೆ. ರಂಜಿತ್ ವಾದಿಸಿದ್ದರು.

‘ಇಫೆಂನಲ್, 2022ರ ಜೂನ್ 10ರಂದು ಕೊಡಿಗೇಹಳ್ಳಿ ಗೇಟ್ ಬಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ. ಗಸ್ತಿನಲ್ಲಿದ್ದ ಸಿಬ್ಬಂದಿ ಈತನನ್ನು ವಿಚಾರಿಸಿದ್ದರು. ಆದರೆ, ಯಾವುದೇ ದಾಖಲೆ ತೋರಿಸಿರಲಿಲ್ಲ. ಅಕ್ರಮ ವಾಸ ಆರೋಪದಡಿ ಇಫೆಂನಲ್‌ನನ್ನು ಬಂಧಿಸಲಾಗಿತ್ತು. ತನಿಖೆ ನಡೆಸಿದ್ದ ಅಂದಿನ ಪಿಎಸ್‌ಐ ಪ್ರತಿಮಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು’.

‘2 ವರ್ಷ ಶಿಕ್ಷೆ ಜೊತೆಯಲ್ಲೇ ಅಪರಾಧಿಗೆ ₹ 20 ಸಾವಿರ ದಂಡ ವಿಧಿಸಲಾಗಿದೆ. ಶಿಕ್ಷೆ ಅವಧಿ ಮುಗಿದ ನಂತರ ಇಫೆಂನಲ್‌ನನ್ನು ಗಡಿಪಾರು ಮಾಡುವಂತೆಯೂ ನ್ಯಾಯಾಲಯ ಆದೇಶ ದಲ್ಲಿ ಉಲ್ಲೇಖಿಸಿದೆ’ ಎಂದು ಸಿ.ಕೆ. ರಂಜಿತ್ ತಿಳಿಸಿದರು.

ಅಪಘಾತ: ತಲೆ ಮೇಲೆ ಚಕ್ರ ಹರಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ ಮುಖ್ಯರಸ್ತೆ ಬಳಿ ಶನಿವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಕ್ಯಾಂಟರ್ ಚಕ್ರ ತಲೆ ಮೇಲೆ ಹರಿದು ಮಂಜಮ್ಮ (40) ಅವರು ಮೃತಪಟ್ಟಿದ್ದಾರೆ.

‘ಎಚ್. ಗೊಲ್ಲಹಳ್ಳಿ ನಿವಾಸಿ ಮಂಜಮ್ಮ, ಟೈಲರ್ ಆಗಿದ್ದರು. ಕೆಲಸ ನಿಮಿತ್ತ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಮಂಜಮ್ಮ ಅವರು ಉತ್ತರಹಳ್ಳಿ ಕಡೆಯಿಂದ ಕೆಂಗೇರಿ ಕಡೆಗೆ ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ಕ್ಯಾಂಟರ್ (ಕೆಎ 41 ಡಿ 0639) ಹೊರಟಿತ್ತು. ಚಾಲಕ, ನಿರ್ಲಕ್ಷ್ಯ ಹಾಗೂ ಅತೀ ವೇಗದಲ್ಲಿ ಕ್ಯಾಂಟರ್ ಚಲಾಯಿಸಿದ್ದ. ಇದರಿಂದಾಗಿ ದ್ವಿಚಕ್ರ ವಾಹನಕ್ಕೆ ಕ್ಯಾಂಟರ್ ಡಿಕ್ಕಿ ಹೊಡೆದಿತ್ತು.’

‘ದ್ವಿಚಕ್ರ ವಾಹನ ಸಮೇತ ಉರುಳಿಬಿದ್ದಿದ್ದ ಮಂಜಮ್ಮ ಅವರ ತಲೆ ಮೇಲೆಯೇ ಕ್ಯಾಂಟರ್ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಮಂಜಮ್ಮ ಮೃತಪಟ್ಟಿದ್ದಾರೆ. ಸಾವಿಗೆ ಕಾರಣವಾದ ಆರೋಪದಡಿ ಕ್ಯಾಂಟರ್ ಚಾಲಕನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಕೇಂದ್ರ ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ರಾಮದಾಸ್ ಅಠವಳೆ ಅಭಿಮತ

ಮೀಸಲಾತಿ ಹೆಚ್ಚಳಕ್ಕೆ ಜಾತಿಗಣತಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಸಮುದಾಯಗಳಿಗೂ ಅರ್ಹತೆಯ ಆಧಾರದಲ್ಲಿ ಮೀಸಲಾತಿ ಕಲ್ಪಿಸಲು ದೇಶದಲ್ಲಿ ಜಾತಿ ಗಣತಿ ಅಗತ್ಯ ಎಂದು ಕೇಂದ್ರ ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ರಾಮದಾಸ್ ಅಠವಳೆ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಬಲ ಜಾತಿಗಳೂ ಸೇರಿದಂತೆ ಎಲ್ಲ ಸಮುದಾಯಗಳೂ ಮೀಸಲಾತಿ ಹೆಚ್ಚಳಕ್ಕೆ ಬೇಡಿಕೆ ಸಲ್ಲಿಸುತ್ತಲೇ ಇವೆ. ಆಯಾ ಜಾತಿಯ ಜನಸಂಖ್ಯೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಿಂದುಳಿದಿರುವಿಕೆ ಆಧಾರದಲ್ಲಿ ಮೀಸಲಾತಿ ಹೆಚ್ಚಳ ಮಾಡಿದಾಗ ಮಾತ್ರ ಎಲ್ಲ ಸಮುದಾಯಗಳಿಗೂ ನ್ಯಾಯ ದೊರಕಿಸಬಹುದು. ಜಾತಿ ಗಣತಿ ನಡೆಸಲು ಪ್ರಧಾನಿಗೂ ಮನಸ್ಸಿದೆ. ಆದರೆ, ಕೆಲ ತಾಂತ್ರಿಕ ಸಮಸ್ಯೆಗಳಿಂದ ಅದು ಸಾಧ್ಯವಾಗಿಲ್ಲ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನ ಸಂಖ್ಯೆಯೂ ಹೆಚ್ಚಾಗಿದೆ. ಹಿಂದುಳಿದ ವರ್ಗಗಳ ಮೀಸಲಾತಿಯನ್ನೂ ಹೆಚ್ಚಿಸಬೇಕಿದೆ. ಮಹಾರಾಷ್ಟ್ರದಲ್ಲಿ ಮರಾಠರು, ಕರ್ನಾಟಕದಲ್ಲಿ ಲಿಂಗಾಯತರು ಸೇರಿದಂತೆ ಪ್ರಬಲ ಜಾತಿಗಳು ಮೀಸಲಾತಿಯ ಬೇಡಿಕೆ ಇಟ್ಟಿವೆ. ಕೇಂದ್ರ ಸರ್ಕಾರ ಆರ್ಥಿಕ ದುರ್ಬಲ ವರ್ಗಗಳಿಗೆ ಈಗಾಗಲೇ ಶೇ 10ರಷ್ಟು ಮೀಸಲಾತಿ ಕಲ್ಪಿಸಿದೆ. ಕೆಲ ಸಮುದಾಯಗಳನ್ನು ಸೇರಿಸುವ ಚಿಂತನೆಯೂ ಇದೆ. ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜಾತಿ ಗಣತಿ ಕುರಿತು ನಿರಂತರವಾಗಿ ಆಗ್ರಹ ಮಾಡುತ್ತಿದ್ದಾರೆ. ಅವರದೇ ಸರ್ಕಾರ 10 ವರ್ಷಗಳು ಆಡಳಿತ ನಡೆಸುವಾಗ ಏಕೆ ಸುಮ್ಮನಿದ್ದರು?. ರಾಜಕೀಯ ಕಾರಣಗಳಿಗಾಗಿ ಧ್ವನಿ ಎತ್ತುವುದರಿಂದ ಸಾಮಾಜಿಕ ನ್ಯಾಯ ಕೊಡಿಸಲು ಸಾಧ್ಯವಿಲ್ಲ ಎಂದು ಟೀಕಿಸಿದರು.



ಆರ್‌ಪಿಐ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶದಲ್ಲಿ ಸಂವಿಧಾನದ ಪೀಠಿಕೆ ಬೋಧಿಸಲಾಯಿತು. ಕೇಂದ್ರ ಸಚಿವ ರಾಮದಾಸ್ ಅಠವಳೆ, ಆರ್‌ಪಿಐ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ , ರಾಜ್ಯ ಕಾರ್ಯಾಧ್ಯಕ್ಷ ಜಿ. ಗೋವಿಂದಯ್ಯ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಉದ್ಯೋಗದಲ್ಲೂ ಮಹಿಳಾ ಮೀಸಲು

ಶಾಸನಸಭೆಗಳಲ್ಲಿ ಮಹಿಳಾ ಮೀಸಲಾತಿಯ ಐತಿಹಾಸಿಕ ನಿರ್ಧಾರ ಕೈಗೊಂಡಿದ್ದ ಕೇಂದ್ರ ಸರ್ಕಾರ, ಉದ್ಯೋಗದಲ್ಲೂ ಮಹಿಳೆಯರಿಗೆ ಮೀಸಲಾತಿ ನೀಡುವ ಕುರಿತು ಚಿಂತನೆ ನಡೆಸಿದೆ. ಇಂತಹ ನಿರ್ಧಾರಗಳು ಮಹಿಳಾ ಸಬಲೀಕರಣದಲ್ಲಿ ಮಹತ್ವದ ಪಾತ್ರವನ್ನು ವಹಿಸಲಿವೆ ಎಂದು ಅಠವಳೆ ಹೇಳಿದರು.

‘ಮೋದಿ ಮತ್ತೊಮ್ಮೆ ಪ್ರಧಾನಿಯಾಗಲಿ’

ಬೆಂಗಳೂರು: ‘ಮುಂಬರುವ ಲೋಕಸಭೆ ಚುನಾವಣೆಯಲ್ಲಿ ‘ಇಂಡಿಯಾ’ ಎಂಬ ವಿರೋಧ ಪಕ್ಷಗಳ ಮೈತ್ರಿಕೂಟದ ನೇತೃತ್ವ ವಹಿಸಿರುವ ಕಾಂಗ್ರೆಸ್ ಪಕ್ಷದ ಎಲ್ಲ ಅಭ್ಯರ್ಥಿಗಳನ್ನು ಸೋಲಿಸಿ, ಎನ್‌ಡಿಎ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನ ಮಂತ್ರಿಯನ್ನಾಗಿ ಮಾಡಬೇಕು’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಖಾತೆಯ ರಾಜ್ಯ ಸಚಿವ ರಾಮದಾಸ್ ಅಠವಳೆ ಕರೆ ನೀಡಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಶನಿವಾರ ಆಯೋಜಿಸಿದ್ದ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಇಂಡಿಯಾ ಎಂಬ ಮೂರ್ಖರ ಗುಂಪಿನಿಂದ ಈಗಾಗಲೇ ನಿತೀಶ್ ಕುಮಾರ್ ಅವರು ಹೊರನಡೆದಿದ್ದಾರೆ. ಮಮತಾ ಬ್ಯಾನರ್ಜಿ ಮತ್ತು ಅರವಿಂದ ಕೇಜ್ರಿವಾಲ್ ಅವರ ಪಕ್ಷಗಳು ಸ್ವತಂತ್ರವಾಗಿ ಸ್ಪರ್ಧೆ ಮಾಡುವ ಇಂಗಿತ ವ್ಯಕ್ತಪಡಿಸಿವೆ. ಕಾಂಗ್ರೆಸ್ ಈಗ ಕೇವಲ ಪ್ರಾದೇಶಿಕ ಪಕ್ಷವಾಗಿ ಮಾತ್ರ ಉಳಿದಿದೆ’ ಎಂದು ಹೇಳಿದರು.

ಆರ್‌ಪಿಐ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ. ವೆಂಕಟಸ್ವಾಮಿ, ‘ರಾಜ್ಯದಲ್ಲಿ ಎನ್‌ಡಿಎ ಮಿತ್ರ ಪಕ್ಷಗಳು ಕೋಲಾರ ಲೋಕಸಭೆ ಕ್ಷೇತ್ರವನ್ನು ಆರ್‌ಪಿಐ ಅಭ್ಯರ್ಥಿಗೆ ಬಿಟ್ಟುಕೊಡಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ರಾಜ್ಯದಲ್ಲಿ ನಡೆದಾಡಿರುವ 10 ಸ್ಥಳಗಳಲ್ಲಿ ವಸ್ತು ಸಂಗ್ರಹಾಲಯ ನಿರ್ಮಿಸಲು ₹10 ಕೋಟಿ ಅನುದಾನ ನೀಡಬೇಕು. ಪಿಟಿಸಿಎಲ್ ಕಾಯ್ದೆಯನ್ನು ಸಮಗ್ರವಾಗಿ ತಿದ್ದುಪಡಿ ಮಾಡಿ ಜಾರಿಗೊಳಿಸಬೇಕು. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 12 ಸಾವಿರ ಗ್ರಾಮ ಸಹಾಯಕರನ್ನು ಕಾಯಂಗೊಳಿಸಬೇಕು’ ಎಂದು ಆಗ್ರಹಿಸಿದರು.

ಆರ್‌ಪಿಐ ರಾಜ್ಯ ಘಟಕದ ಅಧ್ಯಕ್ಷ ಸತೀಶ್, ಪ್ರಧಾನ ಕಾರ್ಯದರ್ಶಿ ಬಿ.ಸಿ. ವೆಂಕಟರಮಣಪ್ಪ, ಎ.ಬಿ. ಹೊಸಮನಿ, ಜಿ. ಗೋವಿಂದಯ್ಯ, ಅಶ್ವತ್ಥಾಮ, ಚಿತ್ರದುರ್ಗದ ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ ಭಾಗವಹಿಸಿದ್ದರು.

ಲಿಂಗಾಯತ ಧರ್ಮ ಶ್ಲಾಘಿಸಿದ ಸಚಿವ

ಕರ್ನಾಟಕದಲ್ಲಿ ಇರುವ ಲಿಂಗಾಯತ ಧರ್ಮ ಸಜ್ಜನ ಧರ್ಮ. ಸಂಸ್ಥಾಪಕ ಬಸವಣ್ಣ ಅವರು 12ನೇ ಶತಮಾನದಲ್ಲೇ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿದ್ದರು. ಅವರ ಸಾಮಾಜಿಕ ಸಮಾನತೆಯ ಪರಿಕಲ್ಪನೆಯೇ ಅಂಬೇಡ್ಕರ್ ಅವರ ಸಂವಿಧಾನದ ತಳಹದಿ ಎಂದು ಸಚಿವ ಅಠವಳೆ ಶ್ಲಾಘಿಸಿದರು.

ರಾಣಿ ಕೆಳದಿ ಚೆನ್ನಮ್ಮ ವಿಜಯೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಮೊದಲು’ ವತಿಯಿಂದ ಇದೇ 19ರಂದು ‘ರಾಣಿ ಕೆಳದಿ ಚೆನ್ನಮ್ಮ ವಿಜಯೋತ್ಸವ’ ಕಾರ್ಯಕ್ರಮವನ್ನು ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಮ್ಮಿಕೊಳ್ಳಲಾಗಿದೆ.


‘ಮುಖ್ಯಮಂತ್ರಿ’ ಚಂದ್ರು ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

‘ಕರ್ನಾಟಕ ಪ್ರಾದೇಶಿಕ ವಿಚಾರಗಳ ಮಂಡನೆ’ಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಧರ್ಮರಾಜ್ ಗೌಡ, ಅಜಯ್ ಕುಮಾರ್ ಬಿ. ಶರ್ಮ, ಆನಂದ್ ಗುರು, ಗುರುದೇವ ನಾರಾಯಣ್ ಕುಮಾರ್, ಅರುಣ್ ಜಾವಗಲ್ ಭಾಗವಹಿಸಲಿದ್ದಾರೆ.

ಚಿತ್ರ ಸಾಹಿತಿ ಕವಿರಾಜ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್, ಇತಿಹಾಸಕಾರ ಧರ್ಮೇಂದ್ರ ಅರೇನಹಳ್ಳಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಧನವಾರ್ತೆ

ಎಚ್. ಮರಿಯಪ್ಪ



ಎಚ್. ಮರಿಯಪ್ಪ

ಬೆಂಗಳೂರು: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸಂಸ್ಥೆಯ ನಿವೃತ್ತ ನೌಕರ ಎಚ್. ಮರಿಯಪ್ಪ (78) ಅವರು ನಗರದಲ್ಲಿ ಶನಿವಾರ ನಿಧನರಾದರು.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ದಂ. ಜಕ್ಕನಹಳ್ಳಿಯ ಮರಿಯಪ್ಪ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಧಂ. ಜಕ್ಕನಹಳ್ಳಿಯಲ್ಲಿರುವ ತೋಟದಲ್ಲಿ ಭಾನುವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಪುತ್ರನ ಅಂತ್ಯಕ್ರಿಯೆಗೆ ಪರದಾಡಿದ ತಾಯಿ

ಬೆಳಗಾವಿ: ಅನಾರೋಗ್ಯದಿಂದ ಮೃತಪಟ್ಟ ಪುತ್ರನ ಅಂತ್ಯಕ್ರಿಯೆಗೆ ಹಣವಿಲ್ಲದೇ ತಾಯಿ ಶನಿವಾರ ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಪರದಾಡಿದರು.

ಸವದತ್ತಿ ತಾಲ್ಲೂಕಿನ ಮರಕುಂಬಿ ಗ್ರಾಮದ ವಿಶ್ವನಾಥ ಶಿವಲಿಂಗಪ್ಪ ಗುರಕ್ಕನವರ (34) ಜಿಲ್ಲಾಸ್ಪತ್ರೆಯಲ್ಲಿ ಶುಕ್ರವಾರ ರಾತ್ರಿ ಮೃತಪಟ್ಟರು. ವಿಶ್ವನಾಥ ಅವರ ತಾಯಿ ನೀಲವ್ವ ಅವರ ರೋದನ ಹೇಳತೀರದಾಯಿತು. 'ಇದ್ದ ಒಬ್ಬ ಮಗನ ಶವವನ್ನು ಊರಿಗೆ ಒಯ್ಯಲು ಮತ್ತು ಅಂತ್ಯಕ್ರಿಯೆ ನೆರವೇರಿಸಲು ಹಣವಿಲ್ಲ' ಎಂದು ನೀಲವ್ವ ಸಂಕಟಪಟ್ಟರು.

ವಿಷಯ ತಿಳಿದು ಸ್ಥಳಕ್ಕೆ ಬಂದ ವಿಜಯ ಮೋರೆ ಅವರ 'ಎಂಗ್ ಬೆಳಗಾಂ ಫೌಂಡೇಷನ್' ಸದಸ್ಯರು ಮಹಿಳೆಗೆ ನೆರವಾದರು. ಪಾಲಿಕೆ ಆಂಬುಲೆನ್ಸ್‌ನಲ್ಲಿ ಶವ ಸಾಗಿಸಿ, ಸದಾಶಿವ ನಗರದಲ್ಲಿ ಅಂತ್ಯಕ್ರಿಯೆ ನೆರವೇರಿಸಿದರು.

ಸಮಂಜಸ ತಂಡದಿಂದ ಗೌರವ ಸಮರ್ಪಣೆ • ಕಷ್ಟ ಜಯಿಸಿ ಯಶಸ್ಸು ಸಾಧಿಸಿದ ಬಗೆಗೆ ಮೆಚ್ಚುಗೆ

ಸಾಧನೆಯ ಸ್ಮರಿಸಿದ 'ಪದ್ಮ' ಪುರಸ್ಕೃತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬದುಕಿನುದ್ದಕ್ಕೂ ಎದುರಾದ ಸವಾಲುಗಳನ್ನು ಹಿಮ್ಮೆಟ್ಟಿ, ಕಷ್ಟಗಳನ್ನು ಜಯಿಸಿ ಯಶಸ್ಸು ಸಾಧಿಸಿದ ಪರಿಯನ್ನು 'ಪದ್ಮ' ಸಾಧಕರು ಎಳೆಎಳೆಯಾಗಿ ವಿವರಿಸುತ್ತಿದ್ದರೆ, ನೆರೆದಿದ್ದ ಪ್ರೇಕ್ಷಕರ ಮನಸ್ಸು ಮರುಗಿ ಕಣ್ಣಾಲಿಗಳು ತೇವವಾಗಿದ್ದವು.

ಈ ದೃಶ್ಯ ಕಂಡುಬಂದಿದ್ದು ಸಮಂಜಸ ತಂಡ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಪದ್ಮಶ್ರೀ ಪ್ರಶಸ್ತಿ' ಪುರಸ್ಕೃತರ ಸಮ್ಮಿಲನ ಕಾರ್ಯಕ್ರಮದಲ್ಲಿ. 2024ನೇ ಸಾಲಿನ 'ಪದ್ಮಶ್ರೀ ಪ್ರಶಸ್ತಿ'ಗೆ ಭಾಜನರಾದವರಲ್ಲಿ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, ಕೃಷಿ ತಜ್ಞ ಸತ್ಯನಾರಾಯಣ ಬೆಳೇರಿ, ಪ್ಲಾಸ್ಟಿಕ್ ಸರ್ಜನ್ ಡಾ. ಪ್ರೇಮಾ ಧನರಾಜ್, ಅಂಗವಿಕಲತೆ ಮೆಟ್ಟಿ ಸಾಧನೆ ಮಾಡಿದ ಸಮಾಜ ಸೇವಕ ಕೆ.ಎಸ್. ರಾಜಣ್ಣ ಹಾಗೂ ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಸೋಮಣ್ಣ ಅವರು ಗೌರವ ಸ್ವೀಕರಿಸಿ, ಮನದಾಳದ ಮಾತನ್ನು ಹಂಚಿಕೊಂಡರು.

'ನನಗೆ ದೊಡ್ಡ ಗಾಯಕಿ ಆಗಬೇಕೆಂಬ ಕನಸಿತ್ತು. ಆದರೆ, ದೇವರ ಇಚ್ಛೆಯೇ ಬೇರೆಯಿತ್ತು. ಎಂಟನೇ ವಯಸ್ಸಿನಲ್ಲಿ ಸೀಮೆಎಣ್ಣೆ ಸ್ಟೌ ಸ್ಫೋಟದಿಂದ ದೇಹದ ಶೇ 50ರಷ್ಟು ಭಾಗ ಸುಟ್ಟು, ತುಟಿ ಎದೆಗೆ ಅಂಟಿ, ಕತ್ತು ಕೂಡ ಬಾಗಿತ್ತು. ಆ ವೇಳೆ 28 ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೆ. ತಾಯಿಯ ಪ್ರೋತ್ಸಾಹದಿಂದ ನೋವನ್ನು ಮರೆತು, ವೈದ್ಯೆಯಾಗಿ ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಯಿತು. ಪರಿಶ್ರಮ ಮತ್ತು ನಿರಂತರ ಪ್ರಯತ್ನ ಇದ್ದಲ್ಲಿ ಗುರಿ ತಲುಪಬಹುದು. ಆದರೆ, ವೈದ್ಯರಾಗಬೇಕೆಂಬ ಕನಸು ಹೊಂದುವ ಯುವಜನರು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿಲ್ಲ ಎಂಬ ಕಾರಣಕ್ಕೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಡಾ. ಪ್ರೇಮಾ ಧನರಾಜ್ ಬೇಸರ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ (ಎಡದಿಂದ ಬಲಕ್ಕೆ) ಡಾ.ಸಿ.ಆರ್. ಚಂದ್ರಶೇಖರ್, ಸೋಮಣ್ಣ, ಸತ್ಯನಾರಾಯಣ ಬೆಳೇರಿ, ಡಾ. ಪ್ರೇಮಾ ಧನರಾಜ್ ಹಾಗೂ ಕೆ.ಎಸ್. ರಾಜಣ್ಣ ಅವರನ್ನು ಗೌರವಿಸಲಾಯಿತು. ಹಂ.ಪ. ನಾಗರಾಜಯ್ಯ, ಕೆ.ಈ. ರಾಧಾಕೃಷ್ಣ, ನ್ಯಾ.ಬಿ. ವೀರಪ್ಪ, ನಿವೃತ್ತ ಲೆಫ್ಟಿನೆಂಟ್ ಜನರಲ್ ರಮೇಶ ಹಲಗಲಿ, ಎಸ್.ಆರ್. ರಂಗನಾಥ್, ಕರ್ನಾಟಕದ ಪ್ಯಾರಾ ಅಥ್ಲೀಟ್ ಕೆ.ವೈ.ವೆಂಕಟೇಶ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗೆ ನಾಲ್ಕು ದಶಕಗಳು ಶ್ರಮಿಸಿದ ಬಗೆ ಹಾಗೂ ಜೀತದಾಳಾಗಿದ್ದ ಅವಧಿಯಲ್ಲಿ ಎದುರಿಸಿದ ಕಷ್ಟಗಳನ್ನು ಸೋಮಣ್ಣ ಮೆಲುಕು ಹಾಕಿದರು. 'ಬುಡಕಟ್ಟು ಜನರಿಗೆ ಅಗತ್ಯ ಸೌಲಭ್ಯ ಸಿಗಬೇಕು. ಅವರಿಗೆ ಸಂವಿಧಾನಬದ್ಧ ಹಕ್ಕುಗಳನ್ನು ಒದಗಿಸಲು ಹೋರಾಟ ಮುಂದುವರಿಸುತ್ತೇನೆ. ಉದ್ಯೋಗ, ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆಯೂ ಪ್ರತ್ಯೇಕ ಯೋಜನೆ ರೂಪಿಸಬೇಕು' ಎಂದು ಆಗ್ರಹಿಸಿದರು.

ಸತ್ಯನಾರಾಯಣ ಬೆಳೇರಿ ಅವರು 650 ಭತ್ತದ ತಳಿಗಳನ್ನು ಸಂಗ್ರಹಿಸಿ, ಅದನ್ನು ಬೆಳೆಯುತ್ತಿರುವ ಬಗೆಯನ್ನು ವಿವರಿಸಿದರು.


ಕಾಡುತ್ತಿರುವ ಖಿನ್ನತೆ: ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, 'ವಿಜ್ಞಾನ ಬೆಳೆಯುತ್ತಿದ್ದರೂ ನಮ್ಮಲ್ಲಿನ ಅಜ್ಞಾನ ತೊಲಗುತ್ತಿಲ್ಲ. ಈಗಲೂ ಮಾನಸಿಕ ಕಾಯಿಲೆಗಳನ್ನು ಒಪ್ಪುವ ಮನಸ್ಥಿತಿಯಿಲ್ಲ. ಕೋವಿಡ್ ಬಳಿಕ ದೇಶದ ಒಟ್ಟು ಜನರಲ್ಲಿ ಶೇ 25 ರಷ್ಟು ಮಂದಿ ಮಾನಸಿಕ ಅಸ್ವಸ್ಥರಾಗಿದ್ದಾರೆ. ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಕೊಡಿಸುವ ಬದಲು, ದೇವಸ್ಥಾನ, ಮಸೀದಿ, ಚರ್ಚ್‌ಗಳಿಗೆ ಹೋಗುವವರು ಇದ್ದಾರೆ. ಶೇ 70 ರಷ್ಟು ಮಕ್ಕಳು ಸ್ಮಾರ್ಟ್‌ಫೋನ್‌ನ ಗೀಳಿಗೆ ಒಳಗಾಗಿದ್ದಾರೆ. ಬೆಂಗಳೂರಿನಲ್ಲಿ ಶೇ 75 ರಷ್ಟು ಜನರಿಗೆ ಸರಿಯಾಗಿ ನಿದ್ದೆ ಬರುತ್ತಿಲ್ಲ. ದುಃಖದಿಂದ ಹೊರಬರಲು ಮದ್ಯಸೇವನೆಯಂತಹ ವ್ಯಸನಕ್ಕೆ ಒಳಗಾಗುತ್ತಿದ್ದಾರೆ' ಎಂದು ಹೇಳಿದರು.

ಸಮಂಜಸ ತಂಡದ ಕೆ.ಈ.ರಾಧಾಕೃಷ್ಣ, 'ಸರ್ಕಾರಗಳು ಸೂಕ್ಷ್ಮತೆಗಳನ್ನು ಕಳೆದುಕೊಳ್ಳುತ್ತಿವೆ. 'ಪದ್ಮ' ಪ್ರಶಸ್ತಿಗಳು ಘೋಷಣೆಯಾದ ಬಳಿಕ ತೆಲಂಗಾಣ ಸರ್ಕಾರ ಅಲ್ಲಿನ ಪ್ರಶಸ್ತಿ ಪುರಸ್ಕೃತರಿಗೆ ₹ 25 ಲಕ್ಷ ನೀಡಿ, ಗೌರವಿಸಿತು. ಆ ಕೆಲಸವನ್ನು ಈವರೆಗೂ ಇಲ್ಲಿನ ಸರ್ಕಾರ ಮಾಡದಿರುವುದು ವಿಪರ್ಯಾಸ' ಎಂದರು.

'ವೈದ್ಯ ರೂಪದ ರಾಕ್ಷಸರು ಬೇಡ'

'ಹಣದ ಹಿಂದೆ ಬಿದ್ದಿರುವ ಆಸ್ಪತ್ರೆಗಳು ಸಾಮಾನ್ಯ ಜ್ವರಕ್ಕೂ ಹತ್ತಾರು ಪರೀಕ್ಷೆಗಳನ್ನು ನಡೆಸಿ, ₹ 10 ಸಾವಿರದಿಂದ ₹ 20 ಸಾವಿರ ದುಡ್ಡನ್ನು ಜನಸಾಮಾನ್ಯರಿಂದ ಕಿತ್ತುಕೊಳ್ಳುತ್ತಿವೆ. ₹ 10 ಪಡೆಯುವಲ್ಲಿ ₹ 100 ಸುಲಿಗೆ ನಡೆಯುತ್ತಿದೆ. ವೈದ್ಯರೂಪದ ರಾಕ್ಷಸರು ನಮಗೆ ಬೇಡ. ರಾಜ್ಯ ಕಾನೂನು ಆಯೋಗದ ಅಧ್ಯಕ್ಷನಾಗಿದ್ದಾಗ ಹಲವಾರು ಆಸ್ಪತ್ರೆಗಳಿಗೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದ್ದೇನೆ. ಹಣ ಮಾಡುವ ಸ್ಪರ್ಧೆಯಲ್ಲಿ ವೈದ್ಯರು, ಶಿಕ್ಷಕರು, ವಕೀಲರು ಸೇರಿ ವಿವಿಧ ವೃತ್ತಿಯಲ್ಲಿರುವವರು ನಿರತರಾಗಿದ್ದು, ನೈತಿಕತೆ ಮರೆಯುತ್ತಿದ್ದಾರೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ವೀರಪ್ಪ ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಹಂ.ಪ. ನಾಗರಾಜಯ್ಯ, 'ವಾಯುಮಾಲಿನ್ಯ, ಜಲಮಾಲಿನ್ಯಕ್ಕಿಂತ ಭಾಷಾ ಮಾಲಿನ್ಯ ಇತ್ತೀಚೆಗೆ ಹೆಚ್ಚಾಗಿದೆ. ಭಾಷಾ ಪ್ರಯೋಗಕ್ಕೆ ಸಂಬಂಧಿಸಿದಂತೆ ರಾಜಕಾರಣಿಗಳಿಗೆ ಹೈಕೋರ್ಟ್ ಎಚ್ಚರಿಕೆ ನೀಡಿರುವುದು ಶ್ಲಾಘನೀಯ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಲಕ್ಷ್ಮೀಶ ತೋಳ್ಪಾಡಿ ಮತ್ತು ವಿಜಯ ಲಕ್ಷ್ಮೀಶ ತೋಳ್ಪಾಡಿ ದಂಪತಿಯನ್ನು ಸನ್ಮಾನಿಸಲಾಯಿತು. ರಂಗ ಕಲಾವಿದ ಜೆಪಿಜಿ ಚಂದ್ರು, ವಿದ್ಯಾಭೂಷಣ, ಧರಣೀದೇವಿ ಮಾಲಗತ್ತಿ, ಎಂ.ಎಸ್. ಇಸ್ಮಾಯಿಲ್ ಮತ್ತು ನ. ರವಿಕುಮಾರ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಕಲಿತ ವಿದ್ಯೆಯನ್ನು ಎಲ್ಲೆಡೆ ಹರಡಬೇಕು: ವಿದ್ಯಾಭೂಷಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾಧ್ಯಾಯ ಪ್ರವಚನಗಳು ಜ್ಞಾನಾರ್ಜನೆ ವಿಷಯದಲ್ಲಿ ಬಹಳ ಮುಖ್ಯ. ಆದ್ದರಿಂದ ಶಾಸ್ತ್ರಾಭ್ಯಾಸ ಮಾಡಿದವರು ಕಲಿತ ವಿದ್ಯೆಯನ್ನು ತಪಸ್ಸಿಗೆ ಸೀಮಿತಗೊಳಿಸದೆ, ಎಲ್ಲೆಡೆ ಹರಡಬೇಕು' ಎಂದು ಸಂಗೀತ ವಿದ್ವಾಂಸ ವಿದ್ಯಾಭೂಷಣ ತಿಳಿಸಿದರು.

ರಂಗಚಂದಿರ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ಅಭಿನಂದಿಸಿ, ಮಾತನಾಡಿದರು.

'ಕಲಿತ ವಿದ್ಯೆಯನ್ನು ಅನುಷ್ಠಾನ ಮತ್ತು ತಪಸ್ಸಿಗೆ ಮಾತ್ರ ಕೆಲವರು ವಿನಿಯೋಗಿಸುತ್ತಾರೆ. ಶಾಸ್ತ್ರಾಧ್ಯಯನದ ಬಳಿಕ ತಪಸ್ಸಿಗಾಗಿ ಹಿಮಾಲಯಕ್ಕೆ ತೆರಳುವುದು ಕಲಿಕೆಯಲ್ಲ. ಬದಲಾಗಿ, ಸ್ವಾಧ್ಯಾಯ ಮತ್ತು ಪ್ರವಚನ ಮಾಡುವುದು ಕಲಿಕೆಯೆಂದು ಉಪನಿಷತ್ತಿನಲ್ಲಿ ಹೇಳಲಾಗಿದೆ. ಅದನ್ನು ಲಕ್ಷ್ಮೀಶ ತೋಳ್ಪಾಡಿ ಮಾಡುತ್ತಿದ್ದಾರೆ' ಎಂದರು.

'ಇತ್ತೀಚೆಗೆ ಪ್ರಶಸ್ತಿಗಳನ್ನು ಲಾಬಿ ಮಾಡಿ ಪಡೆಯುವವರ ಸಂಖ್ಯೆ ಹೆಚ್ಚುತ್ತಿದೆ. ಆದರೆ, ಲಕ್ಷ್ಮೀಶ ತೋಳ್ಪಾಡಿ ಅವರು ಪ್ರಶಸ್ತಿಗಾಗಿ ಯಾವುದೇ ಇಲಾಖೆಯನ್ನು ಸುತ್ತಿದವರಲ್ಲ' ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ, 'ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ನಮ್ಮ ಹೆಮ್ಮೆಯಾಗಿವೆ. ಈ ಕಾವ್ಯಗಳು ವಿವಿಧ ಸಂದರ್ಭದಲ್ಲಿ ಬೇರೆ ಬೇರೆ ರೀತಿಯಲ್ಲಿ ಬರುತ್ತಿವೆ. ಲಾಬಿ ಇಲ್ಲದೆ ಪ್ರಶಸ್ತಿ ನೀಡಿದರೆ ಪ್ರಶಸ್ತಿಯ ಮೌಲ್ಯವೂ ಹೆಚ್ಚುತ್ತದೆ' ಎಂದು ತಿಳಿಸಿದರು.

'ಮಹಾಭಾರತದಲ್ಲಿ ಮಾತು ಮತ್ತು ಮೌನ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ ಲಕ್ಷ್ಮೀಶ ತೋಳ್ಪಾಡಿ, 'ಕೇಂದ್ರ ಸಾಹಿತ್ಯ ಅಕಾಡೆಮಿಯು 'ಮಹಾಭಾರತದ ಅನುಸಂಧಾನದ ಭಾರತಯಾತ್ರೆ' ಕೃತಿಗೆ ನೀಡಿದ ಪ್ರಶಸ್ತಿಯು ವ್ಯಾಸ, ಪಂಪ ಮತ್ತು ಕುಮಾರವ್ಯಾಸನಿಗೆ ಸಲ್ಲಬೇಕು' ಎಂದು ಹೇಳಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಳಿಕ ಉಡುಪಿಯ ಥಿಯೇಟರ್ ಯಕ್ಷದಿಂದ 'ಚಕ್ರವ್ಯೂಹ' ಯಕ್ಷಗಾನ ಪ್ರದರ್ಶನ ಕಂಡಿತು.

ಭವಿಷ್ಯನಿಧಿ ಬಡ್ಡಿದರ ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ನೌಕರರ ಅಂಶದಾಯಿ ಭವಿಷ್ಯನಿಧಿ ನ್ಯಾಸ ಮಂಡಳಿಯು ಭವಿಷ್ಯನಿಧಿ ಬಡ್ಡಿದರವನ್ನು ಹೆಚ್ಚಳ ಮಾಡಿ ನಿಗದಿಪಡಿಸಬೇಕು ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಆಗ್ರಹಿಸಿದೆ.

ನೌಕರರ ಭವಿಷ್ಯನಿಧಿ ಸಂಸ್ಥೆಯು 2023–24ನೇ ಸಾಲಿಗೆ ಶೇ 8.25 ಬಡ್ಡಿ ನಿಗದಿಪಡಿಸಿದೆ. ಕೆಎಸ್‌ಆರ್‌ಟಿಸಿ ಭವಿಷ್ಯನಿಧಿ ನ್ಯಾಸ ಮಂಡಳಿಯು ನೌಕರರ ಭವಿಷ್ಯನಿಧಿ ಸಂಸ್ಥೆಯಿಂದ ವಿನಾಯಿತಿ ಪಡೆದಿರುವ ಸಂಸ್ಥೆಯಾಗಿದೆ. ಹಾಗಾಗಿ ಕೂಡಲೇ ನ್ಯಾಸ ಮಂಡಳಿಯ ಸಭೆ ಕರೆಯಬೇಕು. ಶೇ 8.25 ಬಡ್ಡಿ ನಿಗದಿ ಮಾಡಬೇಕು. ನಿವೃತ್ತರು, ರಾಜೀನಾಮೆ ನೀಡಿದವರು, ವಜಾ ಆಗಿರುವವರು ಸಹಿತ ವಿವಿಧ ಕಾರಣಗಳಿಂದ ಸಂಸ್ಥೆಯಿಂದ ಹೊರಹೋಗಿರುವವರಿಗೂ ಈ ಬಡ್ಡಿದರ ಅನ್ವಯ ಮಾಡಬೇಕು ಎಂದು ಫೆಡರೇಶನ್ ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್ ಡಿ.ಎ. ಒತ್ತಾಯಿಸಿದ್ದಾರೆ.

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಬೆಂಗಳೂರು

ಸಂ: ಕಾ.ಇಂ(ವಿ)/ಲೋ.ಇ/ವಿದ್ಯುತ್/2581/2023-24 ದಿನಾಂಕ: 16.02.2024

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಯಾದ KW-3 STD ಷರತ್ತುಗೊಳಪಟ್ಟಂತೆ ಅಲ್ಪಾವಧಿ ಟೆಂಡರ್‌ನ ಮೊದಲನೆ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಕೆಳಕಂಡಂತಿವೆ. Name of work: Design, Supply, Erection, Testing & Commissioning of 2 Nos. of 5 stops 20 passenger capacity Lift by replacing the existing 2 Nos. of Lifts at Nyaya Degula, Siddiah Road, Bengaluru PWD/2023-24/EL/WORK_INDENT 6316. Work Value: ರೂ. 76.87 ಲಕ್ಷಗಳು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ https://kppp.karnataka.gov.inನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: 16.02.2024 ರಿಂದ 23.02.2024, 16.00 ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂದಿರುಗಿಸುವ ದಿನಾಂಕ: 23.02.2024 ರಂದು 16.00 ಗಂಟೆವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು KPPP ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿ),
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು

DIPR/CP-DD/AAA/3666/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಎಸ್‌ಡಬ್ಲ್ಯುಡಿ, ಬೊಮ್ಮನಹಳ್ಳಿ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು - 560011.

ಸಂಖ್ಯೆ: ಕಾಅ/ಎಸ್‌ಡಬ್ಲ್ಯುಡಿ/ಬೊ/ಟೆಂಡರ್/02/2023-24 ದಿನಾಂಕ: 17-02-2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ) (2ನೇ ಕರೆ)

(ದ್ವಿ-ಲಕೋಟೆ ಪದ್ಧತಿ) (ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯುಡಿ – ಬೊಮ್ಮನಹಳ್ಳಿ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿ ಅಥವಾ ಸಿಪಿಡಬ್ಲ್ಯುಡಿ / ಕೆಡಬ್ಲ್ಯುಡಿ / ರೈಲ್ವೆಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ಸೂಕ್ತವಾದ ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯು–4)

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಬೊಮ್ಮನಹಳ್ಳಿ ವಲಯದ ಅಕ್ಷಯನಗರ ಇಂಜಿನಿಯರಿಂಗ್ ಕಾಲೇಜ್ ಹತ್ತಿರ ಹೊಂಗಸಂದ್ರ ಮುಖ್ಯ ನಿಲ್ದಾಣದಿಂದ ಎನ್‌ಹೆಚ್ (ಹೊಸೂರು ರಸ್ತೆ) ಗೆ ಅಡ್ಡಲಾಗಿ ಬ್ರಿಕ್ಸ್ ಬಾಕ್ಸ್ ಡ್ರೈನ್ ಒದಗಿಸುವುದು.	237.48	3.56 (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ನ್ನು ಜಿ.ಒ.ಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: 22-02-2024 ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಎಸ್‌ಡಬ್ಲ್ಯುಡಿ, ಬೊಮ್ಮನಹಳ್ಳಿ ವಲಯ, ಬಿಬಿಎಂಪಿ, 9ನೇ ಮಹಡಿ, ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್ ಜಯನಗರ, ಬೆಂಗಳೂರು – 560011 ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 27-02-2024 ರಂದು 16.00 ಗಂಟೆವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 29-02-2024 ರಂದು 16.30 ಗಂಟೆಗೆ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: ಯಶಸ್ವಿ ಬಿಡ್ದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯುಡಿ–ಬೊಮ್ಮನಹಳ್ಳಿ ವಲಯ, ಬಿಬಿಎಂಪಿ.

ರೇಷ್ಮೆ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ನಂ. 1ನೇ ವಿಭಾಗ, ರೇಷ್ಮೆ ಇಲಾಖೆ, ನಂ.14, ರೇಷ್ಮೆ ಭವನ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರಂ, ಬೆಂಗಳೂರು–560021.

ಸಂಖ್ಯೆ: ರೇಇ/ಕಾ/ಅ–1/ಟೆಂ.ರೇ.ಭ/2023-24/528 ದಿನಾಂಕ: 16-02-2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಇಂಡೆಂಟ್ ನಂ: SD/2023-24/SE0083 ರಲ್ಲಿ ಬೆಂಗಳೂರಿನ ಓಕಳೀಪುರಂ, ವಾಟಾಳ್ ನಾಗರಾಜ್ ರಸ್ತೆಯಲ್ಲಿ (ಲುಲು ಹೈಪರ್ ಮಾರ್ಕೆಟ್ ಎದುರುಗಡೆ) ರೇಷ್ಮೆ ಇಲಾಖೆಯ ಮಾಲೀಕತ್ವದಲ್ಲಿರುವ 4.25 ಎಕರೆ ಜಮೀನಿನಲ್ಲಿ ರೇಷ್ಮೆ ಭವನ ನಿರ್ಮಾಣ ಮಾಡಲು ಉದ್ದೇಶಿಸಿರುವ ಬಹುಮಹಡಿ ಕಟ್ಟಡದ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸಲು ಸಿವಿಲ್ ಇಂಜಿನಿಯರಿಂಗ್ ಸಲಹೆಗಾರರನ್ನು ನೇಮಿಸುವ ಸಲುವಾಗಿ ಟೆಂಡರ್ ಕರೆಯಲಾಗಿದೆ. ರೇಷ್ಮೆ ಇಲಾಖೆಯ ವತಿಯಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in ಮುಖಾಂತರ ಟೆಂಡರ್ ಮಾಡಲಾಗುತ್ತಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://kppp.karnataka.gov.in ನೊಂದಾಯಿಸಿ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ವೇಳಾಪಟ್ಟಿ ಕೆಳಕಂಡಂತಿರುತ್ತದೆ:

(1) ಟೆಂಡರ್ ಪೂರ್ವ ಸಭೆಯನ್ನು ದಿನಾಂಕ: 20.02.2024 ರಂದು ಬೆಳಿಗ್ಗೆ 11.30 ಘಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ನಂ.1ನೇ ವಿಭಾಗ, 2ನೇ ಮಹಡಿ, ರೇಷ್ಮೆ ಭವನ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರಂ, ಬೆಂಗಳೂರು–5600021. (2) ಟೆಂಡರ್ ಡಾಕ್ಯುಮೆಂಟ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ನಿಗದಿಪಡಿಸಲಾದ ಕೊನೆಯ ದಿನಾಂಕ: 23.02.2024 ರಂದು ಸಂಜೆ 4.00 ಘಂಟೆಯವರೆಗೆ. (3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.02.2024 ರಂದು ಬೆಳಿಗ್ಗೆ 11.30 ಘಂಟೆಗೆ. (4) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮಾರ್ಗಸೂಚಿಗಳಂತೆ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿರುವ ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ತಿಳಿಯಪಡಿಸಲಾಗುವುದು.

ಸೂಚನೆ: ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ತಿದ್ದುಪಡಿಗಳು ಅಥವಾ ಮಾರ್ಪಾಡುಗಳು ಇದ್ದಲ್ಲಿ ಹಾಗೂ ಟೆಂಡರ್ ಕರಾರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮುಖಾಂತರವೇ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು

DIPR/CP/SPAN/3668/2023-24

ಸರ್ಕಾರದ ಕಾರ್ಯದರ್ಶಿಗಳ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ, 1ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001.

ಸಂಖ್ಯೆ: DWCD/2023-24/IND0035 ದಿನಾಂಕ: 17.02.2024

2023–24ನೇ ಸಾಲಿಗೆ ಮೆಡಿಸಿನ್ ಕಿಟ್ ಸರಬರಾಜಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕೇಂದ್ರಗಳಿಗೆ ಮೆಡಿಸಿನ್ ಕಿಟ್ ಸರಬರಾಜು ಮಾಡಲು ನೊಂದಾಯಿತ ಸರಬರಾಜುದಾರರಿಂದ ತಾಂತ್ರಿಕ / ಆರ್ಥಿಕ ಬಿಡ್‌ಗಳನ್ನು (ಎರಡು ಲಕೋಟೆ ಪದ್ಧತಿ) ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಬಿಡ್‌ದಾರರು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https:kppp.karnataka.gov.in) ಮುಖಾಂತರ ಬಿಡ್‌ಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಕಾಣಿಸಿರುವಂತೆ ಇ.ಎಂ.ಡಿ ಮೊತ್ತವನ್ನು ಪಾವತಿಸತಕ್ಕದ್ದು. ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ:

1) ಟೆಂಡರ್ ದಸ್ತಾವೇಜನ್ನು ಆನ್‌ಲೈನ್ ಮುಖಾಂತರ ಪಡೆಯಬಹುದಾದ ದಿನಾಂಕ: 17.02.2024
2) ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 19.02.2024 ಅಪರಾಹ್ನ 12.30ಕ್ಕೆ
3) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಕ್ಷೇಪಣೆ ಸಲ್ಲಿಸುವ ಅಂತಿಮ ದಿನಾಂಕ: 23.02.2024 ಸಂಜೆ 5.00 ಗಂಟೆಯವರೆಗೆ.
4) ಟೆಂಡರ್ ಅನ್ನು ಸಲ್ಲಿಸಲು ಅಂತಿಮ ದಿನಾಂಕ: 02.03.2024 ಸಂಜೆ 5.00 ಗಂಟೆಗೆ
5) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: 04.03.2024 ಬೆಳಿಗ್ಗೆ 11.00 ಗಂಟೆಗೆ.
6) ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಆರ್ಥಿಕ ಬಿಡ್ ತೆರೆಯುವ ತಾತ್ಕಾಲಿಕವಾಗಿ ನಿಗದಿಪಡಿಸಿರುವ ದಿನಾಂಕ: 05.03.2024 ಬೆಳಿಗ್ಗೆ 11.00 ಗಂಟೆಗೆ.

ಟೆಂಡರ್ ಪ್ರಕಟಣೆ ಮತ್ತು ಟೆಂಡರ್ ಡಾಕ್ಯುಮೆಂಟ್ ಪ್ರತಿಗಳು (ಅ) ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ-ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಕಛೇರಿ, (ಆ) ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ – ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಕಛೇರಿಯಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಜಂಟಿ ನಿರ್ದೇಶಕರು (ಐ.ಸಿ.ಡಿ.ಎಸ್) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಕಛೇರಿಯನ್ನು (ದೂರವಾಣಿ ಸಂಖ್ಯೆ: 080–22353780) ಸಂಪರ್ಕಿಸಬಹುದಾಗಿದೆ.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿಗಳು ಹಾಗೂ ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿಗಳು

DIPR/CP/SPAN/3667/2023-24

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ: 13/2023–24/3643 ದಿನಾಂಕ : 16.02.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 4 ರನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿ ಲೆ.ಶೀ: 5054–03–337–0–16–154 ರಾಜ್ಯ ಹೆದ್ದಾರಿಗಳ ಸೇತುವೆಗಳು ಸುಧಾರಣೆ ಅಡಿಯ ಸೋಮವಾರಪೇಟೆ ತಾಲ್ಲೂಕಿನ 1 ಕಾಮಗಾರಿಯನ್ನು ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 846.59 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ : 16.02.2024 ರಿಂದ ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 02.03.2024 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ–ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ / ಮಾರ್ಪಾಡುಗಳನ್ನು ಇ– ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ.

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪನಿರ್ದೇಶಕರ ಕಛೇರಿ, ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ, ಬೆಂಗಳೂರು.

ಸಂಖ್ಯೆ: KSHD/2023-24/SE0179 ದಿನಾಂಕ: 16–02–2024

ಇ–ಟೆಂಡರ್ ಪ್ರಕಟಣೆ

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ದ ತುಂತುರು ನೀರು ನಿರ್ವಹಣಾ ವ್ಯವಸ್ಥೆಯ ದುರಸ್ತಿ ಮತ್ತು ನಿರ್ವಹಣೆ ಕಾರ್ಯಕ್ಕೆ ದ್ವಿ–ವಾರ್ಷಿಕ ಇ–ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಹಾಗೂ ಈ ಕೆಳಸಹಿದಾರರ ಕಛೇರಿಯಿಂದ (ಸರ್ಕಾರಿ ಕೆಲಸದ ದಿನಗಳಲ್ಲಿ ಕೆಲಸದ ಅವಧಿಯಲ್ಲಿ) ಪಡೆಯಬಹುದಾಗಿರುತ್ತದೆ.

1) ಟೆಂಡರ್‌ನ ಅಂದಾಜು ಮೊತ್ತ: **ರೂ. 68.35 ಲಕ್ಷಗಳು.** 2) ಅರ್ಜಿ ನಮೂನೆ ಶುಲ್ಕ: ಅರ್ಜಿ ಶುಲ್ಕವನ್ನು **e-Procurement Government of Karnataka** ನಿರ್ದೇಶಿಸಿದಂತೆ ಪಾವತಿಸುವುದು. 3) ಇ.ಎಂ.ಡಿ: **ರೂ. 1,37,000/–** ಗಳನ್ನು **e-Procurement Government of Karnataka** ರವರ ಹೆಸರಿಗೆ ಪಡೆದು ಸಲ್ಲಿಸುವುದು. 4) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **01–03–2024 ರಂದು ಸಂಜೆ 5.00 ಗಂಟೆವರೆಗೆ.** 5) ಬಿಡ್ ಪೂರ್ವಭಾವಿ ಸಭೆ ದಿನಾಂಕ: **22–02–2024 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆ.** 6) ತಾಂತ್ರಿಕ ಟೆಂಡರ್ ಫಾರಂನ್ನು ತೆರೆಯುವ ದಿನಾಂಕ: **04–03–2024 ರಂದು ಮಧ್ಯಾಹ್ನ 12.00 ಗಂಟೆಗೆ.** 7) ಆರ್ಥಿಕ ಟೆಂಡರ್‌ನ್ನು ತೆರೆಯುವ ದಿನಾಂಕ: **06–03–2024 ರಂದು ಮಧ್ಯಾಹ್ನ 12.00 ಗಂಟೆಗೆ.** ಟೆಂಡರ್ ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಟೆಂಡರ್ ಪ್ರಾಧಿಕಾರವು ಹೊಂದಿರುತ್ತದೆ.

ಸಹಿ/– ತೋಟಗಾರಿಕೆ ಉಪನಿರ್ದೇಶಕರು,
ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ, ಬೆಂಗಳೂರು.

ವಾಸಾಸಂಇ/ವಾ.ಪ್ರ/3664/ಅಡ್ವರ್ಟೋರ್/2023–24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ: ಬೆಂಗಳೂರು

ಸಂ: ಕರಾಸಾ/ವಿನಿ/ಕೆಂಬನಿ/ವಾ/1188/2023–24 ದಿನಾಂಕ: 16–02–2024

ಅಲ್ಪಾವಧಿ ಇ–ಟೆಂಡರು/ಸಂಧಾನ ಪ್ರಕಟಣೆ ಸಂಖ್ಯೆ: 08/2023–24

ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು 3 ರಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ಮಳಿಗೆ ಸಂಖ್ಯೆ: 24 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ: 09, 18, 24ಕ್ಕೆ ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯಾ) ಕೆಳಮಹಡಿ, ನೆಲಮಹಡಿ, ಮೊದಲನೇ, ಎರಡನೇ ಮಹಡಿ ಮತ್ತು ಪೀಣ್ಯಾದ ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು **ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದ ಮೂಲಕ** ಹಾಗೂ ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ: 46, 48, 09 (ಹಳೆಯ ಸಿಸಿಸೆಲ್ ಸ್ಥಳ) ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ: 04, 05, 6, 15, 31ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು **ಸಂಧಾನದ (ಮಾತುಕತೆ)** ಮೂಲಕ **ದಿನಾಂಕ: 17.02.2024 ರಿಂದ 26.02.2024 ರವರೆಗೆ** ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ/ ವಿವರಗಳಿಗಾಗಿ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್: ksrtc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760990557, 7760990554 ಮತ್ತು ಸಹಾಯವಾಣಿ ಸಂಖ್ಯೆ: +91–8046010000/+91–8068948777.

ಸಹಿ/– ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ಕೆಂಬನಿ ವಿಭಾಗ, ಬೆಂಗಳೂರು

ವಾಸಾಸಂಇ/ವಾ.ಪ್ರ/3680/ಎಂಎಎ/2023–24

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054/2023–24/4843 ದಿನಾಂಕ: 17.02.2024

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 3 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 350.00 ಲಕ್ಷಗಳು ಹಾಗೂ 150.00 ಲಕ್ಷಗಳು ಮತ್ತು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ 5,25,000/– ರೂ.ಗಳು ಹಾಗೂ 2,25,000/– ರೂ.ಗಳು. ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ:– 19.02.2024ರ ಮುಂಜಾನೆ 11.00 ಗಂಟೆಗೆ 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–26.02.2024 ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 27.02.2024 ರ ಸಂಜೆ 4.31 ಗಂಟೆಯ ನಂತರ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 29.02.2024 ರ ಮುಂಜಾನೆ 11.00 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in (ಫೋನ್ ನಂ. 91 8046010000, +91 8068948777) ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/474/ಕೆಎಸ್‌ಎಂಸಿಎ/2023–24

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವು:ಕಿಇಂ–3:ಟೆಂಡರ್26/2023–24 ದಿನಾಂಕ: 14.02.2024

ಟೆಂಡರ್ ಪ್ರಕಟಣೆ ಸಂ.26/2023–24 ದಿನಾಂಕ: 14.02.2024

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:26/2023–24 ದಿನಾಂಕ 14–02–2024 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ, 3054–04–337–1–10–200 ಜಿಲ್ಲಾ ಇತರೆ ರಸ್ತೆಗಳ ನಿರ್ವಹಣೆ ಮತ್ತು ಲೆಕ್ಕಶೀರ್ಷಿಕೆ: 5054–03–337–0–17–154 ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 05 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.829.17 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: 40.84 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ.1243761/– ಮತ್ತು ಕನಿಷ್ಠ ಮೊತ್ತ ರೂ.81686/– ಅರ್ಹ ಗುತ್ತಿಗೆದಾರರು: 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 04 ರಿಂದ 09 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 21–02–2024 ರ 17–30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 15–02–2024 ರಿಂದ 22–02–2024 ರ 17–00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 22–02–2024 ರ ಸಂಜೆ 17–00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 23–02–2024 ರ ಸಂಜೆ 17–30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 24–02–2024 ರ ಸಂಜೆ 17–00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/538/KSMCA/2023-24

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ, ಸಿ.ಆರ್.ಪಿ.ಎಫ್.

ಯಲಹಂಕ, ಬೆಂಗಳೂರು - 560064.
ದೂರವಾಣಿ : 080-28567017.
ಇ-ಮೇಲ್ : kvcrpfyelfin@gmail.com, ವೆಬ್‌ಸೈಟ್ : https://crpfyelahanka.kvs.ac.in

ನೇರ ಸಂದರ್ಶನ

ದಿನಾಂಕ : 19-02-2024 ರಂದು ಬೆಳಿಗ್ಗೆ 11.30ಕ್ಕೆ ಕೆಳಗಿನ ವಿಷಯಗಳಲ್ಲಿ ಗುತ್ತಿಗೆ ಶಿಕ್ಷಕರ ಹುದ್ದೆಗ ನೇರ ಸಂದರ್ಶನ ಕರೆಯಲಾಗಿದೆ.

ಕ್ರ.ಸಂ.	ಹುದ್ದೆ	ದಿನಾಂಕ ಮತ್ತು ಸಮಯ
01.	ಕನ್ನಡ ಶಿಕ್ಷಕರು	ದಿನಾಂಕ : 19.02.2024 ರಂದು ಬೆಳಿಗ್ಗೆ 11.30 ಕ್ಕೆ
02.	ಶೈಕ್ಷಣಿಕ ಸಲಹೆಗಾರರು	
03.	ಸ್ನಾತಕೋತ್ತರ ಶಿಕ್ಷಕರು (ಭೌತಶಾಸ್ತ್ರ)	

ಶೈಕ್ಷಣಿಕ ಅರ್ಹತೆ ಮತ್ತು ಅರ್ಜಿಯ ನಮೂನೆಗಳಿಗಾಗಿ ದಯವಿಟ್ಟು ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಇನ್ ಮಾಡಿ.

https://crpfyelahanka.kvs.ac.in

ಸಹಿ/- ಪ್ರಾಂಶುಪಾಲರು

ಕರ್ನಾಟಕ ಸರ್ಕಾರದ ಸಚಿವಾಲಯ (ಭದ್ರತೆಗಳು)

ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು.

1. ಒಟ್ಟು ಮೊತ್ತ: ರೂ. 5000 ಕೋಟಿ (ರೂ. 4000 ಕೋಟಿ (09 ವರ್ಷಗಳ ಅಧಿಕಾರಾವಧಿ) (ರೂ. 1000 ಕೋಟಿ (16 ವರ್ಷಗಳ ಅಧಿಕಾರಾವಧಿ)).
2. ವಿತರಿಸುವ ವಿಧಾನ: ಹರಾಜು PDO, RBI, ಮುಂಬೈ (ಕೋಟೆ) ಮೂಲಕ.
3. ಹರಾಜಿನ ದಿನಾಂಕ : ಫೆಬ್ರವರಿ 20, 2024.

ಕರ್ನಾಟಕ ಸರ್ಕಾರವು ಮೇಲಿನ ಭದ್ರತೆಗಳಿಗೆ ಚಂದಾದಾರಿಕೆಗಳನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಅರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ 10% ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ **www.rbi.org.in** ವೆಬ್‌ಸೈಟ್ ನಲ್ಲಿ ಲಭ್ಯವಿದೆ.

ಸಹಿ/– (ಡಾ. ಪಿ. ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ

DIPR/CP/RO/3624/2023-24

ಕರ್ನಾಟಕ ಸರಕಾರ
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ಹಾವೇರಿ

ಸಂಖ್ಯೆ :ಯೋ2/ಸಪ್ರಾಶಾಲೆ/37/ಇ–ಕಲಿಕಾ ಕೇಂದ್ರ ಟೆಂಡರ್/2023–24 ದಿನಾಂಕ : 15–02–2024

ಟೆಂಡರ್ ಪ್ರಕಟಣೆ

2023–24 ನೇ ಸಾಲಿನಲ್ಲಿ ತಾಲೂಕ ಪಂಚಾಯತ ಯೋಜನೆ ಅಡಿಯಲ್ಲಿ ಹಾವೇರಿ ತಾಲೂಕಿನ ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಒಟ್ಟು ರೂ. **4.99** ಲಕ್ಷ ಅನುದಾನದಲ್ಲಿ (ಲಭ್ಯವಿರುವ ಗರಿಷ್ಠ ಮೊತ್ತಕ್ಕೆ) ಗಣಕಯಂತ್ರ ಪೂರಕ ಸಾಮಗ್ರಿಗಳನ್ನು ಆಯ್ಕೆ ಮಾಡಿದ ಶಾಲೆಗೆ ಪೂರೈಕೆ ಮಾಡಲು ಅಧಿಕೃತ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಂಸ್ಥೆಗಳಿಂದ ಷರತ್ತಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ. (1) ವಿವರ : ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ (ಇ–ಕಲಿಕಾ ಕೇಂದ್ರ) ಗಣಕಯಂತ್ರ ಪೂರಕ ಸಾಮಗ್ರಿಗಳು, ಇ–ಟೆಂಡರ್‌ಗೆ ಇಟ್ಟಿರುವ ಒಟ್ಟು ಮೊತ್ತ ರೂ. **4.99** ಲಕ್ಷ

ದಿನಾಂಕ: **16.02.2024** ರಿಂದ **01.03.2024**ರ ಸಂಜೆ 5–00 ಗಂಟೆಯೊಳಗಾಗಿ ಪತ್ರಿಕೆಯಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಕೊಂಡು ಟೆಂಡರಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/470/2023–24

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ

Tel. No.: 08338-275101 E-Mail:ee.rdws.ckd@gmail.com

ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು4:ಟೆಂಡರ್:2023–24/24/2602 ದಿನಾಂಕ: 15/02/2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No 6644

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪ್ರೊಟಾಲ್ (https://kppp.karnataka.gov.in/) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01)ಟೆಂಡರ ಪೂರ್ವಬಾವಿ ಸಭೆ:– 19–02–2024 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ, 02) ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 22–02–2024 ಸಾಯಂಕಾಲ 17.00 ಘಂಟೆವರೆಗೆ03)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:23–02–2024 ಸಾಯಂಕಾಲ 17.30 ಘಂಟೆ ನಂತರ ತೆರೆಯಲಾಗುವುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.

DIPR/BGM/RO-NO-1165/KSMCA/2023-24

ಕೇಂದ್ರೀಯ ವಿದ್ಯಾಲಯ, ಡಿ.ಆರ್.ಡಿ.ಒ.,

ಶಿಕ್ಷಣ ಇಲಾಖೆಯ ಸಚಿವಾಲಯದ ಅಡಿಯಲ್ಲಿ, ಭಾರತ ಸರ್ಕಾರ.
ಸಿ.ವಿ. ರಾಮನ್ ನಗರ, ಬೆಂಗಳೂರು - 560093.
ದೂರವಾಣಿ : 080-25243919
ಇ-ಮೇಲ್ ಐಡಿ : kvdrdobangalore@gmail.com, ವೆಬ್‌ಸೈಟ್ : drdobangalore.kvs.ac.in

ಉಲ್ಲೇಖ : F. 13049/KV.DRDO/2023-24/ ದಿನಾಂಕ : 15.02.2024

ವಾಕ್-ಇನ್-ಇಂಟರ್ವ್ಯೂ (2024-25ನೇ ಸಾಲಿನ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ನೇಮಕಾತಿಗಾಗಿ)

ಬೆಂಗಳೂರಿನ ಕೇಂದ್ರೀಯ ವಿದ್ಯಾಲಯ ಡಿ.ಆರ್.ಡಿ.ಒ., ಸಿ.ವಿ. ರಾಮನ್ ನಗರ, ಬೆಂಗಳೂರು - 560093 ನಲ್ಲಿ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆಪಟ್ಟಿಯನ್ನು (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ ಸಂದರ್ಶನವನ್ನು ಈ ಕೆಳಗೆ ನಮೂದಿಸಿದ ದಿನಾಂಕಗಳಂದು ನಡೆಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳ ಸೇವೆಗಳನ್ನು ಅವರು ನೀಡಿದ ಆದ್ಯತೆಗೆ ಅನುಗುಣವಾಗಿ ಮತ್ತು ಅಗತ್ಯವಿರುವಾಗ ಈ ಶಾಲೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ.

ಸಂದರ್ಶನದ ಸ್ಥಳ : ಕೇಂದ್ರೀಯ ವಿದ್ಯಾಲಯ ಡಿ.ಆರ್.ಡಿ.ಒ., ಸಿ.ವಿ. ರಾಮನ್ ನಗರ, ಬೆಂಗಳೂರು - 560093.

ಸಂದರ್ಶನದ ದಿನಾಂಕ	ಸಂದರ್ಶನಕ್ಕಾಗಿ ನೋಂದಣಿ	ಹುದ್ದೆಗಳು / ವಿಷಯಗಳ ವರ್ಗ
23.02.2024 (ಶುಕ್ರವಾರ)	ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 01.00 ಗಂಟೆಯವರೆಗೆ	(ಎ) ಸ್ನಾತಕೊತ್ತರ (ಪಿ.ಜಿ.ಟಿ.) - ಇಂಗ್ಲಿಷ್, ಹಿಂದಿ, ಗಣಿತ, ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ. (ಬಿ) ಸ್ನಾತಕ ಶಿಕ್ಷಕ - ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ಅಧ್ಯಯನ, ಸಂಸ್ಕೃತ.
24.02.2024 (ಶನಿವಾರ)	ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 01.00 ಗಂಟೆಯವರೆಗೆ	(ಎ) ಸ್ನಾತಕೊತ್ತರ (ಪಿ.ಜಿ.ಟಿ.) - ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಬೋಧಕರು (ಬಿ) ವೃತ್ತಿ ಕೌಶಲ್ಯ ತರಬೇತುದಾರರು : ಯೋಗ ತರಬೇತುದಾರ, ಕನ್ನಡ ಶಿಕ್ಷಕ, ಸಂಗೀತ ಶಿಕ್ಷಕ, ನೃತ್ಯ ಶಿಕ್ಷಕ, ಕ್ರೀಡಾ ತರಬೇತುದಾರರು, ಕಲೆ ಮತ್ತು ಕರಕುಶಲ ಶಿಕ್ಷಕರು, ಕಂಪ್ಯೂಟರ್ ಬೋಧಕರು, ನರ್ಸ್, ವೈದ್ಯರು, ವಿಶೇಷ ಶಿಕ್ಷಕರು. (ಸಿ) ಪ್ರಾಥಮಿಕ ಶಿಕ್ಷಕ (ಪಿ.ಆರ್.ಟಿ.)

ಗಮನಿಸಿ : ವಿದ್ಯಾರ್ಹತೆ ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವಿದ್ಯಾಲಯದ ವೆಬ್‌ಸೈಟ್ : **drdobangalore.kvs.ac.in** ಗೆ ಭೇಟಿ ನೀಡಿ, ದೂರವಾಣಿ : **08025243919.**

ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ **ಕೇಂದ್ರೀಯ ವಿದ್ಯಾಲಯ ಡಿ.ಆರ್.ಡಿ.ಒ., ಸಿ.ವಿ. ರಾಮನ್ ನಗರ, ಬೆಂಗಳೂರು-560093** ನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಮತ್ತು ಪ್ರಮಾಣಪತ್ರಗಳ ಮೂಲ ಮತ್ತು ಫೋಟೊ ಕಾಪಿಗಳು ಮತ್ತು ಪಾಸ್ಪೋರ್ಟ್ ಭಾವಚಿತ್ರದೊಂದಿಗೆ ಹಾಜರಾಗಬೇಕು. ಎಲ್ಲಾ ಹುದ್ದೆಗಳ ನೋಂದಣಿಯನ್ನು ಮಾಡಲಾಗುತ್ತದೆ.

ಸಹಿ/- ಶ್ರೀ ರವಿವೆಂಕಟೇಶ್ವರ ರಾವ್
ಪ್ರಾಂಶುಪಾಲರು

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆರೋಗ್ಯ ಸೌಧ, 7ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023
ದೂರವಾಣಿ ಸಂ: 22536200, ಇಮೇಲ್: directorsast@gmail.com

ಸಂಖ್ಯೆ: ಆಕುಕ/ಎಸ್‌ಎಎಸ್‌ಟಿ/ಆಡಳಿತ/183/2022–23, ಭಾಗ–1 ದಿನಾಂಕ: 17.02.2024

ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಿಸುವ ಬಗ್ಗೆ

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಛೇರಿಯಲ್ಲಿ ವಿವಿಧ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸಮಸಂಖ್ಯೆಯ ಅಧಿಸೂಚನೆಯನ್ನು ದಿನಾಂಕ: 10–02–2024 ರಂದು ಪ್ರಕಟಣೆ ಹೊರಡಿಸಿದ್ದು, ಕೊನೆಯ ದಿನಾಂಕವನ್ನು **23–02–2024** ರವರೆಗೆ ವಿಸ್ತರಿಸಲಾಗಿದೆ.

ಸಹಿ/– ಕಾರ್ಯಕಾರಿ ನಿರ್ದೇಶಕರು
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು.

DIPR/CP/BCPL/3669/2023-24

ಪುರಸಭೆ ಕಾರ್ಯಾಲಯ ಹಳಿಯಾಳ (ಉ.ಕ) –581329

ಸಂ. /ಪು.ಹ/ಕಾಮಗಾರಿ ವಿಭಾಗ/ವಿವ//2023–24 ದಿನಾಂಕ: 15/02/2024

ಟೆಂಡರ್ ಪ್ರಕಟಣೆ (Kppp portal ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾಯ್ದೆ –1999 ನಿಯಮಾವಳಿ 2000 ರಂತೆ ಪುರಸಭೆ ಹಳಿಯಾಳದ 2023–24 ನೇ ಸಾಲಿನ ಕುಡಿಯುವ ನೀರಿನ ವ್ಯವಸ್ಥೆಯ ವಾರ್ಷಿಕ ನಿರ್ವಹಣೆಗೆ ಮಾನವ ಸಂಪನ್ಮೂಲ ಸರಬರಾಜದಾರರಿಗೆ **KC Documents** ಪ್ರಕಾರ ಒಟ್ಟು 1 ಕಾಮಗಾರಿಗೆ ಈ ಕೆಳಗೆ ನಮುದಿಸಿದ ನಿಶ್ಚಿತ ಕಾಮಗಾರಿಯ **INDENT : DMA/2023-24/SE2287** ನಮೂದಿಸಿದ ಐಟಂವಾರು ಟೆಂಡರಗಳನ್ನು ಟೆಂಡರ್ ಅವ್ಹಾನಿಸಲಾಗಿದ್ದು, ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು **http://kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ಪುರಸಭೆಯ ಅಂತರಜಾಲ **www.haliyalatown.mrc.gov.in** ನಲ್ಲಿ ಪಡೆಯಬಹುದು.

ಕ್ರ. ಸಂಖ್ಯೆ 1 ರ ವರೆಗಿನ ಕಾಮಗಾರಿಗಳಿಗೆ ದಿನಾಂಕವನ್ನು ನಿಗಧಿ ಪಡಿಸಲಾಗಿರುತ್ತದೆ.

(1) ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 01/03/2024 16–00 ಗಂಟೆಯವರೆಗೆ.** (2) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02/03/2024 16.30 ಗಂಟೆಗೆ.** (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 07/03/2024 16.30 ಗಂಟೆಗೆ.** (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)

ಸಹಿ/– ಮುಖ್ಯಾಧಿಕಾರಿ,
ಪುರಸಭೆ, ಹಳಿಯಾಳ (ಉ.ಕ)

DIPR/ADK/KSMCA/703/23-24 dt.16.02.2024

ಕರ್ನಾಟಕ ಸರ್ಕಾರ
ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ:ಬಿ1/ಬಿಜಿಟಿ/ಟೆಂಡರ್/ಸಿಆರ್–25/2023–24/6 ದಿನಾಂಕ:16.02.2024

ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನಲ್ಲಿ 2406-04-103-1-04-NPV-ForestLand-140-Minor Works (CAMPA) ಲೆಕ್ಕ ಶೀರ್ಷಿಕೆ–ರಡಿ ಶಿವಮೊಗ್ಗ ಅರಣ್ಯ ವಿಭಾಗದ, ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ "ಮುಂಗಡ ಗುಂಡಿ ನಿರ್ಮಾಣ ಹಾಗೂ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2023–24 ನೇ ಸಾಲಿಗೆ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವದಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:24.02.2024ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/155/02/23–24/1313

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು

ಕಛೇರಿ–2ನೇ ಮಹಡಿ , ಐ.ಸಿ.ಎಂ.ಸಿ.ಸಿ ಕಟ್ಟಡ, ಎಸ್.ಪಿ. ಕಛೇರಿ ಆವರಣ, ಬಿ,ಹೆಚ್,ರಸ್ತೆ, ತುಮಕೂರು–572 103
Office-2nd Floor, Integrated Command and Control Center, SP Office Premises, B.H Road, Tumkuru - 572103 Phone : 0816–2278190
E-mail : smartcitytumakuru@gmail.com. website: www.smartcitytumakuru.in. CIN:U74999KA2017PLC099774

ಸಂ:ತುಸ್ಮಾಸಿ/ಟೆಂಡರ್/ಸಿಆರ್/8/2023–24 ದಿ: 16.02.2024

ಮರು–ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಕರ್ನಾಟಕ ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಮರು ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.kppp.karnataka.gov.in–ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು : 1. ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತೆ ಮತ್ತು ಸೈನ್ ಬೋರ್ಡ್‌ಗಳ ಅಳವಡಿಕೆ. ಕಾಮಗಾರಿಯ ಮೊತ್ತ 1.89 ಕೋಟಿಗಳು. ಇಎಂಡಿ ರೂ.2.84 ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26.02.2024 ಟೆಂಡರ್ ತೆರೆಯುವ ದಿನಾಂಕ : 27.02.2024

ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/550/KSMCA/2023-24

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001.
ಫೋನ್ ಸಂ. 080–22265383 ವೆಬ್‌ಸೈಟ್: www.kiadb.in
ಇ–ಮೇಲ್: cdoce2@kiadb.in or jdtp@kiadb.in

ಸಂ.ಐಎಡಿಬಿ/ಇಎನ್‌ಜಿಜಿ/ಇಇಎ/ಇಟಿಎನ್‌ಡಿ–ಇಸಿ–27/19902/2023–24 ದಿನಾಂಕ: 17–02–2024

ಪರಿಸರ ವಿಮೋಚನ ಪತ್ರ (ಇಸಿ) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಉತ್ತರ ಕನ್ನಡ ಜಿಲ್ಲೆ, ಕಾರವಾರ ತಾಲ್ಲೂಕು, ಮುಡಗೇರಿ ಗ್ರಾಮದ ಒಟ್ಟು 73.06 ಎಕರೆ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸುತ್ತಿರುವ ಮುಡಗೇರಿ ಕೈಗಾರಿಕಾ ಕೈಗಾರಿಕಾ ಪ್ರದೇಶಕ್ಕೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MoEF&CC) ದಿಂದ ಪರಿಸರ ವಿಮೋಚನಾ (Environmental Clearance) ಪತ್ರವನ್ನು ಪಡೆಯಲು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನ ಸಮ್ಮತಿ ಪತ್ರ (ಸಿ.ಎಫ್.ಇ) ಪಡೆಯಲು ಮತ್ತು ಅರ್ಧ ವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ 3 ವರ್ಷಗಳವರೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸುವುದು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಮತ್ತು ಇತ್ಯಾದಿಯನ್ನು ಸಿದ್ಧಪಡಿಸಲು ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಅಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರಿಂದ NABET ಮಾನ್ಯತೆ ಪಡೆದ ಸಂಸ್ಥೆಗಳು/ಸಲಹೆಗಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕ ಕೆಳಕಂಡಂತಿರುವುದು:

- ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **27–02–2024 ಸಂಜೆ 4.00 ಗಂಟೆಯವರೆಗೆ.**

ಸಹಿ/–
ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3674/ಆಕಾರ್/2023–24

ಇದು ಬರೀ ಹಾಲಲ್ಲ!



ನಂದಿನಿ ಹಾಲಿನ ಮಾರಾಟ ದರ

ಮಾದರಿ	ದರ (₹ಗಳಲ್ಲಿ ಪ್ರತಿ ಲೀ)
ಟೋನ್ಡ್ ಹಾಲು	42
ಹೋಮೋಜಿನೈಸ್ಡ್ ಟೋನ್ಡ್ ಹಾಲು	43
ಹಸುವಿನ ಹಾಲು (ಹಸಿರು ಪೊಟ್ಟಣ)	46
ಶುಭಂ ಹಾಲು	48
ಸಮೃದ್ಧಿ	52

15 ಹಾಲು ಒಕ್ಕೂಟಗಳು

24,125 ಹಳ್ಳಿಗಳು

15,551 ಹಾಲು ಸಹಕಾರ ಸಂಘಗಳು

26.60 ಲಕ್ಷ ಹಾಲು ಉತ್ಪಾದಕರ ಸದಸ್ಯರು

81.33 ಲಕ್ಷ ಲೀಟರ್ ಹಾಲು ಪ್ರತಿ ನಿತ್ಯ ಸರಾಸರಿ ಶೇಖರಣೆ

94.18 ಲಕ್ಷ ಕೆ.ಜಿ. ದಿನದ ಗರಿಷ್ಠ ಹಾಲು ಶೇಖರಣೆ (2022 ಜೂನ್ 29ರಂದು)

₹27 ಕೋಟಿ ಮೊತ್ತ ರೈತರಿಗೆ ಪ್ರತಿ ದಿನ ಪಾವತಿ

150ಕ್ಕೂ ಹೆಚ್ಚು ನಂದಿನಿ ಹಾಲು ಉತ್ಪನ್ನಗಳು

6 ಕೋಟಿಗೂ ಅಧಿಕ ಗ್ರಾಹಕರು

351 ಲಕ್ಷ ಲೀಟರ್ ಹಾಲು ರಾಜ್ಯದಲ್ಲಿ ಪ್ರತಿ ನಿತ್ಯ ಒಟ್ಟಾರೆ ಉತ್ಪಾದನೆ

ಒಂದನೇ ಪುಟದಿಂದ..

ಒಟ್ಟಾರೆಯಾಗಿ ಕೆಎಂಎಫ್‌ಗೆ ವಾರ್ಷಿಕ ₹1000 ಕೋಟಿಗೂ ಹೆಚ್ಚು ಮೊತ್ತವನ್ನು ಸರ್ಕಾರವೇ ನೀಡುತ್ತಿದೆ. 2021-22ರಲ್ಲಿ ₹1250 ಕೋಟಿ, 2022-23ರಲ್ಲಿ ₹1200 ಕೋಟಿ ಮೊತ್ತವನ್ನು ನೀಡಲಾಗಿದೆ. ಜತೆಗೆ ಸಿನಿಮಾ ನಟರಾದ ಡಾ.ರಾಜಕುಮಾರ್, ಉಪೇಂದ್ರ, ಪುನೀತ್ ಅವರು ಉಚಿತವಾಗಿ ಕೆಎಂಎಫ್ ಬ್ರ್ಯಾಂಡ್ ರಾಯಭಾರಿಯಾಗಿ ಹಾಲಿನ ಉತ್ಪನ್ನಗಳ ಪ್ರಚಾರ ಮಾಡಿ, ಮಾರಾಟಕ್ಕೆ ನೆರವು ನೀಡಿದ್ದರು. ಇಷ್ಟೆಲ್ಲ ನೆರವು ದೊರೆಯುತ್ತಿದ್ದರೂ ಹೆಚ್ಚಿನ ಖರೀದಿ ದರವನ್ನು ಹಾಲಿಗೆ ಯಾವ ಕಾರಣಕ್ಕೆ ಕೆಎಂಎಫ್ ನೀಡಲು ಸಾಧ್ಯವಾಗುತ್ತಿಲ್ಲ ಎನ್ನುವುದು ಹೈನುಗಾರರಿಗೆ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ಕೆಎಂಎಫ್, ಈಗ ಹಾಲು ಉತ್ಪಾದನೆಯಲ್ಲಿ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಕೆಎಂಎಫ್ ಛಾಪು ಮೂಡಿಸಿದೆ. ಅಮೂಲ್ ನಂತರ ಎರಡನೇ ಅತಿ ದೊಡ್ಡ ಸಹಕಾರ ಸಂಸ್ಥೆ ಕೆಎಂಎಫ್. ಅಮುಲ್ ಪ್ರತಿ ದಿನ ಅಂದಾಜು 1.8 ಕೋಟಿ ಲೀಟರ್ ಹಾಲು ಸಂಗ್ರಹಿಸುತ್ತಿದ್ದರೆ, ಕೆಎಂಎಫ್ ಸುಮಾರು 81 ಲಕ್ಷ ಲೀಟರ್ ಸಂಗ್ರಹಿಸುತ್ತಿದೆ. ಕೆಎಂಎಫ್‌ನ 'ನಂದಿನಿ' ಸುಮಾರು 21 ಸಾವಿರ ಕೋಟಿ ಮೌಲ್ಯ ಹೊಂದಿರುವ ಪ್ರತಿಷ್ಠಿತ ಬ್ರ್ಯಾಂಡ್. 'ನಂದಿನಿ'ಯನ್ನು ಕನ್ನಡಿಗರು ಕೇವಲ ಒಂದು ಉತ್ಪನ್ನವಾಗಿ ಕಂಡಿಲ್ಲ. ಅನ್ನದಾತರು ತಮ್ಮ ಬದುಕಿನ ಮತ್ತು ಗ್ರಾಮೀಣ ಆರ್ಥಿಕತೆಯ ಭಾಗವಾಗಿ ಭಾವನಾತ್ಮಕ ನಂಟು ಹೊಂದಿದ್ದಾರೆ.

ಆದರೆ, ಇತ್ತೀಚಿನ ವರ್ಷಗಳಲ್ಲಿ ರಾಜಕಾರಣಿಗಳ ಸ್ವಹಿತಾಸಕ್ತಿಯೇ ವಿಜೃಂಭಿಸುತ್ತಿದೆ. ಹಾಲು ಉತ್ಪಾದಕರ ಸಂಘದಿಂದ ಕೆಎಂಎಫ್‌ವರೆಗಿನ 'ಸೋರಿಕೆ' ಅವ್ಯಾಹತವಾಗಿ ನಡೆಯುತ್ತಿದೆ. 'ರೈತರೇ 'ಯಜಮಾನ'ರಾಗಬೇಕಾಗಿದ್ದ ಸಂಸ್ಥೆಯ ಆಡಳಿತ ಮಂಡಳಿಯಿಂದ ನೈಜ ಹೈನುಗಾರರನ್ನು ದೂರವೇ ಉಳಿಸುವ ವ್ಯವಸ್ಥೆಯನ್ನು ಸೃಷ್ಟಿಸಿ ರಾಜಕಾರಣಿಗಳು ಕೆಎಂಎಫ್ ಅನ್ನು ತಮ್ಮ ಕಪಿಮುಷ್ಟಿಯಲ್ಲಿರಿಸಿಕೊಂಡಿದ್ದಾರೆ. ಒಕ್ಕೂಟಗಳ ಆಡಳಿತ ಮಂಡಳಿಗಳಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ ನೈಜ ರೈತರ ಬದಲು ರಿಯಲ್ ಎಸ್ಟೇಟ್ ಕುಳಗಳು, ರೌಡಿಶೀಟರ್ ಹಿನ್ನೆಲೆಯವರೂ ಆಯ್ಕೆಯಾಗುತ್ತಿದ್ದಾರೆ. ದುಂದು ವೆಚ್ಚ, ಭ್ರಷ್ಟಾಚಾರ, ಅನಗತ್ಯ ಸಿಬ್ಬಂದಿ ನೇಮಕಾತಿ, ಸ್ವಜನಪಕ್ಷಪಾತ, ಜಾತಿ ಸಂಕೋಲೆಯಲ್ಲಿ ಕೆಎಂಎಫ್ ಮತ್ತು ಹಾಲು ಒಕ್ಕೂಟಗಳು ನರಳಿ ನಲುಗಿವೆ' ಎನ್ನುವ ಆರೋಪವನ್ನು ಹೆಸರು ಬಹಿರಂಗ ಮಾಡಬಾರದು ಎನ್ನುವ ಶರತ್ತಿನ ಮೇಲೆ ಸಂಸ್ಥೆಯ ಮಾಜಿ ನಿರ್ದೇಶಕರೊಬ್ಬರು ಈ ಆಪಾದನೆ ಮಾಡಿದರು.

ಕೆಎಂಎಫ್ ಮತ್ತು ಹಾಲು ಒಕ್ಕೂಟಗಳ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾಗುವವರಿಗೆ ಸ್ಥಾನಮಾನ ದೊರೆಯುವ ಜತೆಗೆ, ಹಲವು ರೀತಿಯ ಭತ್ಯೆ ಮತ್ತು ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ವಿದೇಶ ಪ್ರವಾಸವೂ ಇವುಗಳಲ್ಲಿ ಮುಖ್ಯ. ಒಂದು ಅವಧಿಯಲ್ಲಿ ಕನಿಷ್ಠ ಒಂದು ಬಾರಿ ವಿದೇಶಿ ಪ್ರವಾಸ ಕೈಗೊಳ್ಳಲಾಗುತ್ತಿದ್ದು, ಪ್ರತಿಯೊಬ್ಬರಿಗೆ ₹ 4 ಲಕ್ಷದಿಂದ ₹ 5 ಲಕ್ಷದವರೆಗೆ ವೆಚ್ಚ ಮಾಡಲಾಗುತ್ತದೆ. ಪ್ರವಾಸಕ್ಕೆ ತೆರಳುವ ತಂಡದ ಜತೆ ಅಧಿಕಾರಿಗಳನ್ನು ಸಹ ನಿಯೋಜಿಸಲಾಗುತ್ತದೆ. ತಾರಾ ಹೋಟೆಲ್‌ಗಳಲ್ಲೇ ಇವರ ವಾಸ್ತವ್ಯ. ದಕ್ಷಿಣ ಕರ್ನಾಟಕದ ಒಕ್ಕೂಟಗಳೇ ಈ ವಿದೇಶ ಪ್ರವಾಸಗಳನ್ನು ಆಯೋಜಿಸುವುದು ಹೆಚ್ಚು. ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾಗೆ ಅಧ್ಯಯನ ಪ್ರವಾಸ ಕೈಗೊಳ್ಳುವುದು ಸಾಮಾನ್ಯ. ಕೆಲವು ಬಾರಿ ಬ್ಯಾಂಕಾಕ್‌ನಂತಹ 'ಆಕರ್ಷಕ ತಾಣ'ಗಳು ಸಹ ಪ್ರವಾಸದ ಪಟ್ಟಿಯಲ್ಲಿ ಸೇರ್ಪಡೆಯಾದ ಉದಾಹರಣೆಗಳಿವೆ. ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಕೋಚಿಮುಲ್) ಅಧ್ಯಕ್ಷ ನಂಜೇಗೌಡ ಹಾಗೂ ಹಲವು ನಿರ್ದೇಶಕರು ಮತ್ತು ಅಧಿಕಾರಿಗಳು ಇತ್ತೀಚೆಗೆ ಯುರೋಪ್ ಪ್ರವಾಸ್ ಕೈಗೊಂಡಿದ್ದು ಚರ್ಚೆಗೆ ಗ್ರಾಸವಾಗಿತ್ತು. ವೈದ್ಯಕೀಯ ಭತ್ಯೆಯನ್ನು ಸಹ ಮನಬಂದಂತೆ ಪಡೆಯಲಾಗುತ್ತಿದೆ ಎನ್ನುವ ದೂರುಗಳು ಸಹ ಇವೆ.



ಯಾದಗಿರಿ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದಲ್ಲಿ ಮಾರುಕಟ್ಟೆಗೆ ಕಳುಹಿಸಲು ಪ್ಯಾಕೆಟ್‌ನಲ್ಲಿ ಸಿದ್ಧವಾಗುತ್ತಿರುವ ನಂದಿನಿ ಹಾಲು ಚಿತ್ರ: ತಾಜುದ್ದೀನ್ ಆಜಾದ್

ಕ್ಷೀರಭಾಗ್ಯದಲ್ಲೂ ಅಕ್ರಮ

ಕ್ಷೀರಭಾಗ್ಯ ಯೋಜನೆಯ ಅನುಷ್ಠಾನದಲ್ಲಿಯೂ ಅಕ್ರಮಗಳು ನಡೆದ ಪ್ರಕರಣಗಳು ವರದಿಯಾಗಿವೆ.

ಶಾಲೆಗಳ ಮುಖ್ಯಸ್ಥರು, ಬಿಇಒಗಳು ಗಮನಹರಿಸದ ಪರಿಣಾಮ ಹಾಲಿನ ಪುಡಿಯನ್ನು ಖಾಸಗಿ ದಿನಸಿ ಅಂಗಡಿಗಳಿಗೆ, ಬೇಕರಿಗಳಿಗೆ, ಐಸ್‌ಕ್ರೀಂ ಮತ್ತು ಚಾಕೊಲೇಟ್ ತಯಾರಿಸಲು ಅರ್ಧ ಬೆಲೆಗೆ ಪೂರೈಸುವ ಮಾಫಿಯಾ ತಲೆ ಎತ್ತಿದೆ.

ಹಾಲಿನ ಪುಡಿಯ ತೂಕದಲ್ಲೇ ವ್ಯತ್ಯಾಸ ಮಾಡಲಾಗುತ್ತಿದೆ. ಶಾಲಾ ಮಕ್ಕಳಿಗೆ ಗುಣಮಟ್ಟದ ಹಾಲು ನೀಡದೆ ನೀರು ಮಿಶ್ರಣ ಮಾಡಿ ಪೂರೈಸುತ್ತಿರುವ ಪ್ರಕರಣಗಳು ನಡೆದಿವೆ.

ಹಾಲಿನ ಪುಡಿಯ ಪ್ಯಾಕಿಂಗ್ ಅನ್ನು ಖಾಸಗಿಯವರಿಗೆ ವಹಿಸಿದ್ದರಿಂದ ಈ ರೀತಿಯ ಪ್ರಕರಣಗಳು ಹೆಚ್ಚುತ್ತಿವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಕಲಬುರಗಿ, ಧಾರವಾಡ, ವಿಜಯಪುರ ಸೇರಿದಂತೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹಾಲಿನ ಪುಡಿಯ ಅಕ್ರಮ ವ್ಯವಹಾರ ಹೆಚ್ಚು ನಡೆದಿರುವುದನ್ನು ಪೊಲೀಸರು ಪತ್ತೆ ಮಾಡಿದ್ದರು. ಆದರೂ, ಹಾಲಿನ ಪುಡಿಯನ್ನು ಸಮರ್ಪಕವಾಗಿ ಪ್ಯಾಕ್ ಮಾಡುವ ವ್ಯವಸ್ಥೆ ರೂಪಿಸಿಲ್ಲ.

ಹಾಲು ಒಕ್ಕೂಟಗಳಿಗೆ ನಿರ್ದೇಶಕರಾಗಿ ಆಯ್ಕೆಯಾಗಲು ನಡೆಯುವ ಚುನಾವಣೆಯ ವೆಚ್ಚವೂ ಹೆಚ್ಚುತ್ತಿದೆ. ಅಧಿಕಾರ ಹಿಡಿಯುವ 'ದಾಹ'ದಿಂದ ಚುನಾವಣೆಗೆ ₹25 ಲಕ್ಷದಿಂದ ₹75 ಲಕ್ಷದವರೆಗೆ ಖರ್ಚು ಮಾಡುತ್ತಿದ್ದು, ತೀವ್ರ ಪೈಪೋಟಿ ಇರುವ ಸ್ಥಳಗಳಲ್ಲಿ ₹1 ಕೋಟಿಗೂ ಹೆಚ್ಚು ಖರ್ಚು ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ನಿರ್ದೇಶಕರಿಗೆ ಆಮಿಷವೊಡ್ಡಿ ಮತ ಪಡೆಯುವ ವ್ಯವಸ್ಥೆಯಿಂದ ಮೂಲ ಆಶಯಕ್ಕೆ ಧಕ್ಕೆ ಬಂದಿದೆ. ಇನ್ನು ಕೆಎಂಎಫ್ ಆಡಳಿತ ಮಂಡಳಿ ನಿರ್ದೇಶಕರಾಗಲು ಬಯಸುವವರು ₹50 ಲಕ್ಷದಿಂದ ₹ 1 ಕೋಟಿಗೂ ಹೆಚ್ಚು ಖರ್ಚು ಮಾಡುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಕೆಎಂಎಫ್ ನಿರ್ದೇಶಕರೊಬ್ಬರು ಹೇಳುತ್ತಾರೆ.

'ಒಟ್ಟಾರೆ ಒಕ್ಕೂಟದ ಚುನಾವಣೆಗಳು ವ್ಯಾಪಾರದಂತೆ ನಡೆಯುತ್ತಿವೆ. ಚುನಾವಣೆಯಲ್ಲಿನ ಖರ್ಚು ಸರಿದೂಗಿಸಲು ನೇಮಕಾತಿ, ವರ್ಗಾವಣೆ, ಬಡ್ತಿ ಮತ್ತು ಇತರ ಮೂಲಗಳಿಂದ 'ಬಂಡವಾಳ' ವಾಪಸ್ ಪಡೆಯುವ ವಾಮಮಾರ್ಗಗಳನ್ನು ಸೃಷ್ಟಿಸಿಕೊಳ್ಳಲಾಗಿದೆ. ಬೆಂಗಳೂರು ನಗರ ಜಿಲ್ಲೆಯ ಕಣಿಮಿಣಿಕೆ ಹಾಲು ಉತ್ಪಾದಕರ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕರ ಮನೆ ಮೇಲೆ ಇತ್ತೀಚೆಗೆ ಲೋಕಾಯುಕ್ತ ದಾಳಿ ನಡೆದಿತ್ತು. ಗ್ರಾಮೀಣ ಮಟ್ಟದಲ್ಲೂ ಇಂತಹ ಪರಿಸ್ಥಿತಿ ಸೃಷ್ಟಿಯಾದರೆ ರೈತರ ಬದುಕು ಹಸನಾಗಲು ಹೇಗೆ ಸಾಧ್ಯ' ಎಂದು ಹಾಲು ಒಕ್ಕೂಟದ ನಿರ್ದೇಶಕರೊಬ್ಬರು ಪ್ರಶ್ನಿಸಿದರು.

ಇನ್ನು, ಸಚಿವ ಸ್ಥಾನ ಸಿಗದೆ ಭಿನ್ನ ಧ್ವನಿ ಮೊಳಗಿಸುವ ಶಾಸಕರನ್ನು ಸಂತೃಪ್ತಿಪಡಿಸಲು ಕೆಎಂಎಫ್ ಅಧ್ಯಕ್ಷರನ್ನಾಗಿ ನೇಮಿಸಿ ಪುನರ್ವಸತಿ ಕಲ್ಪಿಸುವುದು ಕಾಲದಿಂದಲೂ ನಡೆದು ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ಮಾಜಿ ಶಾಸಕ ಭೀಮನಾಯ್ಕ್ ಅವರು ಈಗ ಕೆಎಂಎಫ್ ಅಧ್ಯಕ್ಷರಾಗಿದ್ದಾರೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಇವರು ಪರಾಭವಗೊಂಡಿದ್ದರು.

ಶಾಸಕ ಎಚ್.ಡಿ. ರೇವಣ್ಣ ಅವರು ಸುಮಾರು 30 ವರ್ಷ ಹಾಲು ಒಕ್ಕೂಟ ಮತ್ತು ಕೆಎಂಎಫ್‌ನಲ್ಲಿ ಆಡಳಿತ ನಡೆಸಿ ಹಿಡಿತ ಸಾಧಿಸಿದ್ದರು. ಸುಮಾರು ಹತ್ತು ವರ್ಷಗಳ ಕಾಲ ಇವರೇ ಕೆಎಂಎಫ್ ಅಧ್ಯಕ್ಷರಾಗಿದ್ದರು. 2019ರಲ್ಲಿ ಜನತಾ ಪರಿವಾರದ ಪ್ರಾಬಲ್ಯ ನಿಯಂತ್ರಿಸುವಲ್ಲಿ ಯಶಸ್ವಿಯಾದ ಬಿಜೆಪಿಯು, ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿತು.

ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಬೆಮುಲ್) ಮೇಲೆಯೂ ಶಾಸಕ ಬಾಲಚಂದ್ರ ಜಾರಕಿಹೊಳಿ ಬಿಗಿ ಹಿಡಿತ ಸಾಧಿಸಿದ್ದಾರೆ. ಸಹಜವಾಗಿಯೇ ಅವರು ಸೂಚಿಸಿದ ಅಥವಾ ಬೆಂಬಲಿಸಿದ ವ್ಯಕ್ತಿಯೇ ಈ ಒಕ್ಕೂಟದ ಚುಕ್ಕಾಣಿ ಹಿಡಿಯುತ್ತಾರೆ.

ಶಾಸಕ ಬಾಲಚಂದ್ರ ಅವರು ಸಕ್ರಿಯ ರಾಜಕಾರಣಕ್ಕೆ ಬಂದ ಮೇಲೆ ಕ್ಷೀರೋದ್ಯಮದಲ್ಲಿ 'ಪ್ರಭಾವಿ'ಯಾದರು. 20 ವರ್ಷಗಳಿಂದ ಬೆಮುಲ್ ಮೇಲೆ ತಮ್ಮದೇ ಪ್ರಭಾವ ಬೀರಿದ್ದಾರೆ. ಅವರ ಬೆಂಬಲದಿಂದಾಗಿಯೇ ವಿವೇಕರಾವ್ ಪಾಟೀಲ ಅವರು ಸತತ ಎರಡನೇ ಅವಧಿಗೂ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ. ಇಲ್ಲಿ ಇವರಿಬ್ಬರೇ ನಿರ್ಣಾಯಕರು ಎನ್ನುತ್ತಾರೆ ರೈತರು.

ತಮಿಳುನಾಡು, ಆಂಧ್ರಪ್ರದೇಶದಲ್ಲಿನ ಹಾಲು ಮಹಾಮಂಡಳಿಗಳು ಆರಂಭದಲ್ಲಿ ಉತ್ತಮ ಸ್ಥಿತಿಯಲ್ಲಿದ್ದರೂ ರಾಜಕೀಯ ಹಸ್ತಕ್ಷೇಪ ಮತ್ತು ಅದಕ್ಷತೆಯಿಂದ ಕಾಲಕ್ರಮೇಣ ಖಾಸಗಿ ಡೇರಿಗಳ ಜತೆ ಸ್ಪರ್ಧೆ ನೀಡಲು ವಿಫಲವಾಗಿವೆ. ಇಂತಹ ಆತಂಕ ಕೆಎಂಎಫ್‌ಗೂ ಎದುರಾಗುವ ಸ್ಥಿತಿ ನಿಧಾನವಾಗಿ ನಿರ್ಮಾಣವಾಗುತ್ತಿದೆ. ಸಂಪೂರ್ಣ ಸ್ವಾಯತ್ತ ಸಂಸ್ಥೆಯಾಗಬೇಕಾಗಿದ್ದ ಈ ಸಂಸ್ಥೆಯನ್ನು ಸರ್ಕಾರದ ನಿಯಂತ್ರಣಕ್ಕೆ ದೂಡಲಾಗುತ್ತಿದೆ. ಕೆಎಂಎಫ್ ಮೇಲೆ ಪಶು ಸಂಗೋಪನೆ ಮತ್ತು ಸಹಕಾರ ಇಲಾಖೆಗಳು ಸವಾರಿ ಮಾಡುತ್ತಿವೆ.

ಕೆಎಂಎಫ್ ಮತ್ತು ಹಾಲು ಒಕ್ಕೂಟಗಳಲ್ಲಿ ನಡೆದಿರುವ ನೇಮಕಾತಿಗಳು ಸಹ ಪಾರದರ್ಶಕವಾಗಿ ನಡೆದಿಲ್ಲ ಎನ್ನುವ ಆರೋಪಗಳು ಪ್ರಬಲವಾಗಿ ಕೇಳುತ್ತಿದೆ. ಹಾಲು ಒಕ್ಕೂಟಗಳು ಲಾಭದ ಹಳಿಯಲ್ಲಿ ಇಲ್ಲದಿದ್ದರೂ ಸಿಬ್ಬಂದಿಗಳ ನೇಮಕಕ್ಕೆ ಆದ್ಯತೆ ನೀಡುತ್ತಿವೆ. 'ತಾಳಿಭಾಗ್ಯ'ದ ಪ್ರಕರಣಗಳು ಸಹ ಇಲ್ಲಿಯೂ ನಡೆದಿವೆ. ತಮ್ಮ ಸಂಬಂಧಿಕರಿಗೆ, ಜಾತಿಯವರಿಗೆ, ಕ್ಷೇತ್ರದವರಿಗೆ ಮತ್ತು ಹಣದ ಥೈಲಿ ನೀಡಿದವರಿಗೆ ಮಣೆ ಹಾಕುತ್ತಿರುವುದು ನಡೆದುಕೊಂಡು ಬಂದಿದೆ.

ನೇಮಕದ ಬಗ್ಗೆ ವೈಜ್ಞಾನಿಕ ಸಮೀಕ್ಷೆ ನಡೆಯದಿದ್ದರೂ, ಪ್ರತಿ ಐದು ವರ್ಷಗಳ ಅವಧಿಯಲ್ಲಿ 200ರಿಂದ 500ರಷ್ಟು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಕೆಲವು ಸಲ ಮೂಲ ವೇತನ ಆಧಾರದ ಮೇಲೆಯೂ 'ಕಾಂಚಾಣ' ನಿಗದಿಪಡಿಸಲಾಗುತ್ತಿದೆ. ಉದಾಹರಣೆಗೆ ಮೂಲ ವೇತನ ₹30 ಸಾವಿರ ಇದ್ದರೆ ₹30 ಲಕ್ಷ 'ಕಾಂಚಾಣ'ವನ್ನು ನಿಗದಿಪಡಿಸಲಾಗುತ್ತಿದೆ ಎನ್ನುವ ಆಪಾದನೆಯಿದೆ. ಕೆಎಂಎಫ್‌ನಲ್ಲಿ ಇತ್ತೀಚೆಗೆ 487 ಮಂದಿಯ ನೇಮಕಾತಿ ಕೈಗೊಳ್ಳಲಾಯಿತು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಒಂದು ವಾರ ಮೊದಲು ತರಾತುರಿಯಲ್ಲಿ ನೇಮಕಾತಿ ಆದೇಶ ನೀಡಲಾಯಿತು. ಬೆಳಗಾವಿ ಹಾಲು ಒಕ್ಕೂಟದಲ್ಲೂ ಇತ್ತೀಚೆಗೆ 46 ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ. ಕೋಚಿಮುಲ್‌ನಲ್ಲಿ 75 ಹುದ್ದೆಗಳ ಭರ್ತಿಗೆ ನಡೆದ ನೇಮಕಾತಿ ವಿಚಾರದಲ್ಲಿ ಅಕ್ರಮ ನಡೆದಿರುವ ಆರೋಪ ಮಾಡಲಾಗಿತ್ತು.

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಯ ಸಹಕಾರ ಹಾಲು ಒಕ್ಕೂಟಕ್ಕೆ (ಕೋಚಿಮುಲ್) ಇತ್ತೀಚೆಗೆ ನಡೆದ 75 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳೇ ಪತ್ತೆ ಮಾಡಿದ್ದರು. 'ನೇಮಕಾತಿಯಲ್ಲಿ ಸಂದರ್ಶನದ ಅಂಕಗಳನ್ನು ತಿದ್ದಲಾಗಿದ್ದು, ಪ್ರತಿ ಹುದ್ದೆಯನ್ನು ₹ 20 ಲಕ್ಷದಿಂದ ₹ 30 ಲಕ್ಷಕ್ಕೆ ಮಾರಾಟ ಮಾಡಲಾಗಿದೆ ಎಂಬುದನ್ನು ಕೋಚಿಮುಲ್ ನಿರ್ದೇಶಕರು ಹಾಗೂ ನೇಮಕಾತಿ ಸಮಿತಿ ಸದಸ್ಯರು ಶೋಧ ಹಾಗೂ ಜಪ್ತಿ ಪ್ರಕ್ರಿಯೆ ಹೇಳಿ ಒಪ್ಪಿಕೊಂಡಿದ್ದಾರೆ' ಎಂಬುದಾಗಿ ಜಾರಿ ನಿರ್ದೇಶನಾಲಯವು ತಿಳಿಸಿತ್ತು. ಕೋಚಿಮುಲ್ ಅಧ್ಯಕ್ಷರಾಗಿರುವ ಮಾಲೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಅವರ ನಿವಾಸ ಮತ್ತು ಅವರಿಗೆ ಸಂಬಂಧಿಸಿದ 14 ಕಡೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದರು.

ಅತ್ಯಂತ ಪ್ರಾಮುಖ್ಯತೆ ಹೊಂದಿರುವ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯು ಚರ್ಚೆಗೆ ಗ್ರಾಸವಾಗಿದೆ. ಐಎಎಸ್ ಅಧಿಕಾರಿಗಳಿಗಿಂತ ತಾಂತ್ರಿಕವಾಗಿ ಪರಿಣತಿ ಹೊಂದಿರುವ ಸಂಸ್ಥೆಯ ಹಿರಿಯರನ್ನೇ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಬೇಕು ಎನ್ನುವ ವಾದಕ್ಕೆ ಬೆಲೆ ಸಿಕ್ಕಿಲ್ಲ. ಇಲ್ಲಿಯೂ ತಮ್ಮ 'ಅಚ್ಚುಮೆಚ್ಚಿನ' ಅಧಿಕಾರಿಗಳನ್ನೇ ನೇಮಿಸುವ ಸಂಪ್ರದಾಯ ದಶಕಗಳಿಂದ ನಡೆಯುತ್ತಾ ಬಂದಿದೆ. ಸಹಕಾರ ಇಲಾಖೆಯ ಅಧಿಕಾರಿಗಳನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಲೇಬಾರದು ಎನ್ನುವ ಪ್ರಬಲ ವಾದವೂ ಇದೆ. ಸಹಕಾರ ಇಲಾಖೆಯಿಂದ ಈ ಹಿಂದೆ ವ್ಯವಸ್ಥಾಪಕ ನಿರ್ದೇಶಕರಾಗಿ ನಿಯೋಜನೆಗೊಂಡ ಸಂದರ್ಭದಲ್ಲೇ ಕೆಎಂಎಫ್ ಅತಿ ಹೆಚ್ಚು ಸಂಕಷ್ಟಗಳನ್ನು ಅನುಭವಿಸಿದ ಉದಾಹರಣೆಗಳಿವೆ. ಹಾಲು ಮತ್ತು ತುಪ್ಪದ ಕೊರತೆಯ ಸಮಸ್ಯೆಗಳು ಸಹ ಸೃಷ್ಟಿಯಾಗಿದ್ದವು. 75 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದ ಸಂದರ್ಭದಲ್ಲೂ ಸಮರ್ಪಕವಾಗಿ ಗ್ರಾಹಕರಿಗೆ ಸರಬರಾಜು ಆಗಲಿಲ್ಲ. ಸಹಕಾರ ಇಲಾಖೆಯ ಎಂ.ಡಿ. ಇದ್ದಾಗಲೇ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಹಲವು ಪ್ರಾಜೆಕ್ಟ್‌ಗಳಿಗೆ ಚಾಲನೆ ನೀಡಿ ಬಲಿಷ್ಠ ವ್ಯಕ್ತಿಗಳಿಗೆ ಧಾರೆ ಎರೆದುಕೊಡಲಾಯಿತು ಎನ್ನುವ ಆರೋಪ ಕೆಎಂಎಫ್‌ನಲ್ಲಿ ಕೇಳಿಬಂದಿತ್ತು.

ಕೆಎಂಎಫ್ ಒಟ್ಟು 19 ಲಕ್ಷ ಲೀಟರ್ ಹಾಲನ್ನು ಪುಡಿಯಾಗಿ ಪರಿವರ್ತಿಸುವ ಘಟಕಗಳನ್ನು ಸ್ಥಾಪಿಸಿದೆ. ರಾಮನಗರ, ಚನ್ನರಾಯಪಟ್ಟಣ, ಮದರ್ ಡೇರಿ, ಡೆಂಪೋ ಡೇರಿಗಳಲ್ಲಿ ಹಾಲನ್ನು ಪುಡಿಯಾಗಿ ಪರಿವರ್ತಿಸುವ ಸಂಸ್ಕರಣಾ ಘಟಕವನ್ನು ಸ್ಥಾಪಿಸಲಾಗಿದೆ. ಆದರೂ, ಬೆಂಗಳೂರು ಹಾಲು ಒಕ್ಕೂಟ ವತಿಯಿಂದ ಕನಕಪುರದಲ್ಲಿ 6 ಲಕ್ಷ ಲೀಟರ್ ಸಾಮರ್ಥ್ಯದ ಹಾಲಿನ ಪುಡಿ ತಯಾರಿಸುವ ಘಟಕ ಸ್ಥಾಪಿಸುವ ಯೋಜನೆ ಜಾರಿಯಲ್ಲಿದೆ. ಇದೇ ರೀತಿ ಚನ್ನರಾಯಪಟ್ಟಣದಲ್ಲಿ ಘಟಕವಿದ್ದರೂ ಹಾಸನದಲ್ಲಿ ಮತ್ತೊಂದು ಘಟಕ ಸ್ಥಾಪಿಸಲಾಗಿದೆ. ಕೆಎಂಎಫ್‌ನ ಚಲ್ಲಘಟ್ಟ ಜಾಗದಲ್ಲಿ ಬೆಣ್ಣೆಯನ್ನು 'ಡಿಫ್ರೀಜ್' ಮಾಡುವ ಯೋಜನೆಗೆ ಚಾಲನೆ ನೀಡಲಾಗಿದೆ. ಸಾಮಾನ್ಯವಾಗಿ ಬೆಣ್ಣೆ ಹೆಚ್ಚುವರಿಯಾಗಿ ಉಳಿಯುವುದೇ ಇಲ್ಲ. ಹೀಗಿದ್ದರೂ, ಈ ಯೋಜನೆಯ ಅಗತ್ಯತೆ ಬಗ್ಗೆ ಪ್ರಶ್ನೆಗಳು ಮೂಡಿವೆ. ಕೆಎಂಎಫ್ ಘಟಕಗಳಲ್ಲೇ ಪಶು ಆಹಾರ ತಯಾರಿಸುವ ಸಾಮರ್ಥ್ಯ ಇದ್ದರೂ ಖಾಸಗಿ ಸಹಭಾಗಿತ್ವದಲ್ಲಿ ಕೆ.ಆರ್. ಪೇಟೆ ಮತ್ತು ಅರಕಲಗೂಡಿನಲ್ಲಿ ಹೊಸದಾಗಿ ಪಶು ಆಹಾರ ತಯಾರಿಕ ಘಟಕವನ್ನು ಸಹ ಸ್ಥಾಪಿಸಲಾಗುತ್ತಿದೆ.

ಗುಜರಾತ್‌ನ ಅಮೂಲ್, ತೆಲಂಗಾಣದ ಹೆರಿಟೇಜ್ ಮತ್ತು ದೊಡ್ಲ, ತಮಿಳುನಾಡಿನ ಅರೋಕ್ಯ ಹಾಲು ಕರ್ನಾಟಕದಲ್ಲಿ 'ನಂದಿನಿ'ಗೆ ಪೈಪೋಟಿ ನೀಡುತ್ತಿವೆ. ಕೇರಳದಲ್ಲಿ 'ನಂದಿನಿ' ಅತ್ಯಂತ ಜನಪ್ರಿಯವಾಗಿದ್ದು, ಪ್ರತಿ ನಿತ್ಯ 2 ಲಕ್ಷ ಲೀಟರ್‌ಗೂ ಹೆಚ್ಚು ಹಾಲು ಪೂರೈಕೆಯಾಗುತ್ತಿದೆ. ಅತಿ ಹೆಚ್ಚು ಬೇಡಿಕೆ ಇರುವ ಸ್ಥಳಗಳಲ್ಲಿ ದೊರೆಯುವ ಅವಕಾಶವನ್ನು ಹೆರಿಟೇಜ್, ಅರೋಕ್ಯ, ದೊಡ್ಲ ಮುಂತಾದ ಖಾಸಗಿ ಡೇರಿಗಳು ಬಳಸಿಕೊಂಡು, ಮಾರುಕಟ್ಟೆಯನ್ನು ಆಕ್ರಮಿಸುತ್ತಿವೆ. ಈ ಬೇಡಿಕೆಯನ್ನು ಸಮಗಟ್ಟಿ ನಂದಿನಿಯ ಪಾರುಪತ್ಯ ಉಳಿಸಿಕೊಳ್ಳಬೇಕಾಗಿದೆ.

ಪೂರಕ ಮಾಹಿತಿ:
ಡಿ.ಎಂ. ಕುರ್ಕೆ ಪ್ರಶಾಂತ್, ಸಂತೋಷ ಚಿನಗುಡಿ,
ಅಮೃತ ಕಿರಣ,
ಮೋಹನ್ ಸಿ. ಕುಮಾರ್



ಮೈಸೂರು ಜಿಲ್ಲೆಯ ಸಿದ್ದಲಿಂಗಪುರದಲ್ಲಿ ರೈತರು ಹಾಲು ಮಾರಲು ಸರದಿಯಲ್ಲಿ ನಿಂತಿರುವ ದೃಶ್ಯ ಚಿತ್ರ: ಅನೂಪ್ ರಾಘ.ಟಿ.

'ನಷ್ಟದಲ್ಲಿ ಬಹುತೇಕ ಹಾಲು ಒಕ್ಕೂಟಗಳು'

'ರಾಜ್ಯದಲ್ಲಿನ ಬಹುತೇಕ ಹಾಲು ಒಕ್ಕೂಟಗಳು ನಷ್ಟದಲ್ಲಿವೆ. ಬಮುಲ್ ಈಗ ಸುಮಾರು ₹ 50 ಕೋಟಿ ನಷ್ಟದಲ್ಲಿದೆ. ಈ ಮೊದಲು ₹ 70 ಕೋಟಿ ನಷ್ಟದಲ್ಲಿತ್ತು. ರೈತರಿಗೆ ನೀಡುತ್ತಿದ್ದ ಹಾಲಿನ ದರದಲ್ಲಿ ₹ 2ರಷ್ಟು ಕಡಿಮೆ ಮಾಡಿದ್ದರಿಂದ ನಷ್ಟದ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ' ಎಂದು ಬಮೂಲ್ ನಿರ್ದೇಶಕ ನರಸಿಂಹಮೂರ್ತಿ ಹೇಳುತ್ತಾರೆ.

'ಹಾಲಿಗೆ ವೈಜ್ಞಾನಿಕ ದರ ನಿಗದಿಪಡಿಸಬೇಕು. ರೈತರಿಗೆ ಪ್ರತಿ ಲೀಟರ್ ಹಾಲಿಗೆ ಕನಿಷ್ಠ ₹40 ನೀಡಬೇಕು. ಆಗ ಮಾತ್ರ ಹೈನೋದ್ಯಮಕ್ಕೆ ಪ್ರೋತ್ಸಾಹ ದೊರೆಯುತ್ತದೆ. ಬೇರೆ ರಾಜ್ಯಗಳಲ್ಲಿ ಗ್ರಾಹಕರಿಗೆ ₹60 ಮಾರಾಟ ಮಾಡಲಾಗುತ್ತಿದೆ. ಗ್ರಾಹಕರಿಗೆ ಕನಿಷ್ಠ ₹50 ದರ ನಿಗದಿ ಮಾಡಿದರೆ ಒಕ್ಕೂಟಗಳು ಉಳಿಯುತ್ತವೆ. ಒಕ್ಕೂಟಗಳೇ ದರ ನಿಗದಿಪಡಿಸುವ ನಿರ್ಧಾರವನ್ನು ಕೈಗೊಳ್ಳಬೇಕು. ಸರ್ಕಾರದ ನಿಯಂತ್ರಣಗಳಿಂದ ಮುಕ್ತವಾಗಬೇಕು' ಎಂದು ಪ್ರತಿಪಾದಿಸುತ್ತಾರೆ.

'ಒಂದು ಲೀಟರ್ ಹಾಲಿನ ಪುಡಿ ತಯಾರಿಸಲು ಪ್ರತಿ ಕೆ.ಜಿಗೆ ₹360 ವೆಚ್ಚವಾಗುತ್ತದೆ. ಸರ್ಕಾರವು ₹285 ಕ್ಕೆ ಖರೀದಿ ಮಾಡುತ್ತದೆ. ಇದರಿಂದ, ಕೆ.ಜಿಗೆ ₹75 ನಷ್ಟವಾಗುತ್ತಿದ್ದು, ತಿಂಗಳಿಗೆ ₹2.5 ಕೋಟಿಯಷ್ಟು ನಷ್ಟವಾಗುತ್ತಿದೆ. ಗ್ರಾಹಕರಿಗೆ ಕಡಿಮೆ ದರಕ್ಕೆ ಹಾಲು ಮಾರಾಟ ಮಾಡುವುದರಿಂದ ₹7 ಕೋಟಿ ನಷ್ಟವಾಗುತ್ತಿದೆ. ಇದರಿಂದ ಒಟ್ಟಾರೆ ಬಮುಲ್‌ಗೆ ತಿಂಗಳಿಗೆ ₹9.5 ಕೋಟಿಗೂ ಹೆಚ್ಚು ನಷ್ಟವಾಗುತ್ತಿದೆ' ಎಂದು ಹೇಳುತ್ತಾರೆ.

'ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಮನ್‌ಮುಲ್) ₹ 24 ಕೋಟಿ ನಷ್ಟದಲ್ಲಿದೆ. ಹೀಗಾಗಿ, ಹಾಲು ಖರೀದಿ ದರವನ್ನು ಲೀಟರ್‌ಗೆ ₹1.50 ಇಳಿಕೆ ಮಾಡಲಾಗಿದೆ' ಎಂದು ಮನ್‌ಮುಲ್ ಅಧ್ಯಕ್ಷ ಬಿ.ಬೋರೇಗೌಡ ವಿವರಿಸುತ್ತಾರೆ.

'ಮಹಾರಾಷ್ಟ್ರದಲ್ಲಿ ಪ್ರತಿ ಲೀಟರ್ ಹಾಲಿಗೆ ₹5 ಕಡಿಮೆ ಮಾಡಿದ್ದಾರೆ. ಹೀಗಾಗಿ ಅಲ್ಲಿ ಹಾಲು ಮಾರಾಟವಾಗದೇ ಅದನ್ನು ಕರ್ನಾಟಕದ ಗಡಿ ಜಿಲ್ಲೆಯಲ್ಲಿ ಸರಬರಾಜು ಆಗುತ್ತಿದೆ. ನಮ್ಮ ಹಾಲು ಅವರಿಗಿಂತ ಹೆಚ್ಚು ದರ ಇರುವ ಕಾರಣ ಜನ ಅಲ್ಲಿಯ ಹಾಲನ್ನೇ ಖರೀದಿಸುವುದು ಹೆಚ್ಚು. ಇದರೊಂದಿಗೆ ಏಜೆಂಟರಿಗೆ ಖಾಸಗಿ ಒಕ್ಕೂಟಗಳು ಹೆಚ್ಚಿನ ಮಾರ್ಜಿನ್ ನೀಡುತ್ತಿವೆ. ಹಾಗಾಗಿ, ಅವರು ನಂದಿನಿ ಹಾಲು ಮಾರಾಟಕ್ಕೆ ತೆಗೆದುಕೊಳ್ಳಲು ಹಿಂದಡಿ ಇಟ್ಟಿದ್ದಾರೆ. ಹೀಗಾಗಿ ಬೆಳಗಾವಿ ಒಕ್ಕೂಟಗಳು ಹಾನಿಯಲ್ಲಿವೆ' ಎಂದು ಬೆಮುಲ್ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ್ ಹೇಳುತ್ತಾರೆ.

'ಕೆಎಂಎಫ್ ಹಿತಾಸಕ್ತಿ ಮುಖ್ಯವಾಗಲಿ'

ಗ್ರಾಹಕರು, ಹಾಲು ಉತ್ಪಾದಕರ ವಿಶ್ವಾಸ ಗಳಿಸುವ ಜತೆಗೆ ಕೆಎಂಎಫ್ ಹಿತಾಸಕ್ತಿ ಕಾಪಾಡುವುದು ಮುಖ್ಯವಾಗಬೇಕು. ಆದರೆ, ಲೂಟಿ ನಡೆಯುತ್ತಿದೆ. ಸಕಾಲಕ್ಕೆ ಮಂಡಳಿಯ ಸಭೆಗಳು ನಡೆಯುತ್ತಿಲ್ಲ. ನಾನು ಅಧಿಕಾರದಲ್ಲಿದ್ದಾಗ ಎಂಟು ಖಾಸಗಿ ಪಶು ಆಹಾರ ಕಾರ್ಖಾನೆಗಳನ್ನು ಮುಚ್ಚಿಸಿದ್ದೆ. ಆದರೆ, ಈಗ ಪರಿಸ್ಥಿತಿ ಬದಲಾಗುತ್ತಿದೆ. ಹಾಸನ ಹಾಲು ಒಕ್ಕೂಟ ಅತಿ ಹೆಚ್ಚು ದರವನ್ನು ನೀಡುತ್ತಿದೆ. ಹಾಲು ಉತ್ಪಾದನೆ ಹೆಚ್ಚಳವಾಗಿದ್ದರಿಂದ ಅನಿವಾರ್ಯ ಕಾರಣಕ್ಕೆ ರೈತರಿಗೆ ನೀಡುತ್ತಿದ್ದ ಹಾಲಿನ ದರದಲ್ಲಿ ₹1 ಇಳಿಕೆ ಮಾಡಲಾಗಿದೆ

ಎಚ್.ಡಿ. ರೇವಣ್ಣ ಶಾಸಕ, ಹಾಸನ ಹಾಲು ಒಕ್ಕೂಟದ ಅಧ್ಯಕ್ಷ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 18-2-1999

ಭಂಡಾರಿ ರಾಜೀನಾಮೆ ಸಂಭವ ಬಿಜೆಪಿಯಲ್ಲಿ ತೀವ್ರ ಬಿಕ್ಕಟ್ಟು

ಪಟ್ನಾ, ಫೆ. 17 (ಪಿಟಿಐ)– ಬಿಹಾರದ ರಾಜ್ಯಪಾಲ ಸುಂದರ್ ಸಿಂಗ್ ಭಂಡಾರಿ ಅವರ ಮುಂದುವರಿಕೆ ಕುರಿತು ತಲೆದೋರಿರುವ ಅನಿಶ್ಚಯತೆ ನಡುವೆಯೇ ಅವರು ರಾಜ್ಯದ ಆಡಳಿತವನ್ನು ಅರ್ಧಕ್ಕೆ ಬಿಟ್ಟು ತಮ್ಮ ಸಾಮಾನು– ಸರಂಜಾಮು ಸಹಿತ ಇಂದು ದೆಹಲಿಗೆ ಪ್ರಯಾಣಿಸಿದರು.

ಭಂಡಾರಿ ಅವರು ಅಧಿಕಾರ ತ್ಯಜಿಸಲು ನಿರ್ಧರಿಸಿದ್ದಾರೆ ಎಂದು ರಾಜಭವನದ ಮೂಲಗಳು ತಿಳಿಸಿದರೆ, 'ರಾಜ್ಯಪಾಲರನ್ನು ಬದಲಿಸುವ ಪ್ರಶ್ನೆಯೇ ಇಲ್ಲ' ಎಂದು ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 18-2-1974

ಪಿಎಸ್‌ಸಿ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮಕ್ಕೆ ಒತ್ತಾಯ

ಬೆಂಗಳೂರು, ಫೆ. 17– ರಾಜ್ಯದ ಮತ್ತು ಕೇಂದ್ರ ಸರ್ಕಾರದ ಲೋಕ ಸೇವಾ ಆಯೋಗದ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಉತ್ತರ ಬರೆಯಲು ಅವಕಾಶವಿರಬೇಕೆಂದು ಅಖಿಲ ಕರ್ನಾಟಕ ಕನ್ನಡ ಮಾಧ್ಯಮವಿದ್ಯಾರ್ಥಿಗಳ ಸಮ್ಮೇಳನ ಇಂದು ಇಲ್ಲಿ ಆಗ್ರಹಿಸಿದೆ.

ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾದರೆ ರಾಷ್ಟ್ರವು ಹರಿದು ಹಂಚಿ ಹೋಗಲಿದೆ ಎಂಬ ಆಂಗ್ಲಭಾಷಾ ಪ್ರೇಮಿಗಳ ವಾದ ಅರ್ಥವಿಲ್ಲ. ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಕನಿಷ್ಠ ಐದು ವರ್ಷಗಳ ಕಾಲ ಶಿಕ್ಷಣ ಶುಲ್ಕ ವಿನಾಯಿತಿ ನೀಡಲು ಅದು ಒತ್ತಾಯಪಡಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 18, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ನವಮಿ ಗಂ. 08-16 ನಕ್ಷತ್ರ: ರೋಹಿಣಿ ಗಂ. 09-23 ಯೋಗ: ವೈಧೃತಿ ಗಂ. 12-39 ಕರಣ: ಕೌಲವ ಗಂ. 08-16, ಕುಂಭ ಮಾಸದ 05 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 4.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-56 **ಸೂರ್ಯಾಸ್ತ:** 06-33
ಮುಸ್ಲಿಂ ದಿನಾಂಕ: 07 ಶಬನ್
ಅದೃಷ್ಟ ಸಂಖ್ಯೆ: 6, 9

ಮೇಷ: ವಾಹನಗಳ ಬಿಡಿ ಭಾಗ ಮಾರಾಟಗಾರರು ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನ. ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆ ಆಗಲಿದೆ. ದೈವಾನುಗ್ರಹದಿಂದಾಗಿ ಹಿಡಿದ ಕೆಲಸಗಳು ದಡ ಸೇರುವುದು.

ವೃಷಭ: ವಾಣಿಜ್ಯೋದ್ಯಮ ಮಂದಿಗೆ ಇಂದು ವ್ಯವಹಾರದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಲು ಉತ್ತಮ ದಿನವಾಗಿದೆ. ವ್ಯಾಪಾರ ಕ್ಷೇತ್ರದಲ್ಲಿನ ನಿಮ್ಮ ಪೈಪೋಟಿಗಾರರಿಗೆ ಬಹಳ ಹಿಂದುಳಿಕೆಯ ದಿನವಾಗಲಿದೆ.

ಮಿಥುನ: ಗಂಭೀರ ಹಂತದಲ್ಲಿರುವ ನಿಮ್ಮ ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿಪಡಿಸಿಕೊಳ್ಳಲು ಈ ದಿನ ಯಶಸ್ವಿಯಾಗುವಿರಿ. ಅನಗತ್ಯ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕುವುದು ಒಳ್ಳೆಯದು.

ಕರ್ಕಾಟಕ: ಈ ದಿನದ ಪರಿಸ್ಥಿತಿಗಳನ್ನು ನೀವು ನಿಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಸರಳ ಸ್ವಭಾವದಿಂದ ಹೆಚ್ಚಿನ ಮೆಚ್ಚುಗೆ ಪಡೆಯಬಹುದು. ಪಾಲುದಾರಿಕೆ ಒಪ್ಪಂದ ಏರ್ಪಡಲಿದೆ.

ಸಿಂಹ: ನಿಮ್ಮ ವಿಶಾಲ ಮನೋಭಾವದ ಗುಣದಿಂದಾಗಿ ನಿಮಗೆ ದೇವರ ರಕ್ಷಣೆ ಪ್ರಾಪ್ತಿಯಾಗಲಿದೆ. ನಿಮ್ಮ ಆಹಾರ ಶೈಲಿಯಿಂದ ಆರೋಗ್ಯ ಹದಗೆಡುವ ಸಂಭವವಿದೆ. ಕೆಲಸದ ನಿಮಿತ್ತ ಮಗಳನ್ನು ವಿದೇಶಕ್ಕೆ ಕಳುಹಿಸುವಿರಿ.

ಕನ್ಯಾ: ಗೃಹ ನಿರ್ಮಾಣ ಮತ್ತು ಸ್ವತ್ತು ಸಂಪಾದನೆಯಂತಹ ಕಾರ್ಯಗಳ ಸಂಭವವಿದೆ. ಈ ತರಹದ ವಿಷಯದಲ್ಲಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಕಾಲ ಕೂಡಿಬಂದಿದೆ. ಮಾಡುವ ಕೆಲಸದಲ್ಲಿ ಶ್ರದ್ಧೆ ಇರಲಿ.

ತುಲಾ: ಸಹೋದ್ಯೋಗಿಗಳಲ್ಲಿ ಪ್ರೀತಿಯಿಂದ ವರ್ತಿಸುವುದರಿಂದ ನಿಮ್ಮ ಕೆಲಸ ಸರಾಗವಾಗಿ ಸಾಗಲಿದೆ. ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರೂ ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ವೃದ್ಧಿಯಾಗಲಿದೆ.

ವೃಶ್ಚಿಕ: ಸ್ನೇಹಿತನ ಹಣವನ್ನು ದಿನದಾಂತ್ಯಕ್ಕೆ ಹಿಂದಿರುಗಿಸುವಿರಿ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು, ನವ ಉಲ್ಲಾಸ ಕಾಣಲಿದ್ದೀರಿ. ಕಟ್ಟಡ ಗುತ್ತಿಗೆದಾರರಿಗೆ ಆರ್ಥಿಕವಾಗಿ ನಷ್ಟ ಮತ್ತು ಕಾರ್ಮಿಕರ ಕೊರತೆಯು ಉಂಟಾಗಲಿದೆ.

ಧನು: ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆ ಬರಲಿದೆ. ಆದರೆ ಯಾವುದೇ ತರಹದ ತೀರ್ಮಾನ ತೆಗೆದುಕೊಳ್ಳಬೇಡಿ. ಹಲವು ದಿನಗಳ ಬಳಿಕ ಹಣಕಾಸು ಪರಿಸ್ಥಿತಿ ಸುಧಾರಣೆಗೊಳ್ಳುವುದು.

ಮಕರ: ಬಂದ ಅವಕಾಶವನ್ನು ವಿವೇಚನೆಯಿಂದ ಸದುಪಯೋಗಪಡಿಸಿಕೊಳ್ಳಿ. ನಿಮ್ಮಲ್ಲಿರುವ ಸಹಾಯ ಮನೋಭಾವ ನಿಮ್ಮನ್ನು ಮಿಕ್ಕವರೆಲ್ಲರಿಗಿಂತ ವಿಭಿನ್ನವಾದ ಸ್ಥಾನದಲ್ಲಿ ನಿಲ್ಲಿಸಲಿದೆ. ಸಂಬಂಧಿಕರೆಲ್ಲ ಹತ್ತಿರವಾಗುತ್ತಾರೆ.

ಕುಂಭ: ಕಾರ್ಯಕ್ಷೇತ್ರದಲ್ಲಿ ಆಗಾಗ ಪ್ರಯತ್ನ ಬಲಕ್ಕೆ ಅಡ್ಡಿ ಆತಂಕಗಳಿದ್ದರೂ ಈ ದಿನ ನಿಮ್ಮ ಕಾರ್ಯ ಸಾಧನೆಯಲ್ಲಿ ಜಯ ಕಾಣುವುದರ ಬಗ್ಗೆ ಸಂದೇಹವಿಲ್ಲ. ಪೊಲೀಸರಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ.


ಮೀನ: ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗಲಿದೆ. ಗುತ್ತಿಗೆ ಕೆಲಸಗಾರರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಸಾಲ ಮಾಡುವ ಯೋಚನೆ ಕೈ ಬಿಡುವುದು ಉತ್ತಮ.

ಪದಬಂಧ 5595

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಈತ ಸುತ್ತಾಡುವ ಸ್ವಭಾವದವನು (4)
3. ಹೀಗೆ ವಾಸನೆ ನೋಡು (4)
5. ಜನನಿ ನುಡಿದಿರುವ ಸತ್ಯ (2)
7. ಈತ ತಿರುಪೆ ಬೇಡುವವನು (3)
8. ಹಂತಕನೇರಿದ ಮೆಟ್ಟಿಲು (2)
9. ಜವಾನನ ಸುತ್ತ ನೆರೆದ ಮಂದಿ (2)
10. ಸುರನ ಹತ್ತಿರ ರಾಕ್ಷಸನಿದ್ದಾನಲ್ಲಾ (3)
12. ಕರ್ತಾರನ ಕೈಯಿದು (2)
14. ಮನುಷ್ಯನ ಆಕಾರ (4)
15. ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ
1. ಸ್ಮರಣ ಶಕ್ತಿ ಚನ್ನಾಗಿರುವವನು (4)
2. ಕನ್ನಡಿಗ ಪಡೆದುಕೊಂಡಿರುವ ರಿಬೇಟ್ (4)
3. ಪರಲೋಕಕ್ಕೆ ಸಂಬಂಧಿಸಿದ್ದು (4)
4. ಚೆನ್ನಾಗಿ ಕಾಪಾಡಿದುದು (4)
6. ಜನರ ಹತ್ತಿರ ನಿಂತಿರುವ ಸೇವಕ (3)
8. ಆತಂಕ ಹುಟ್ಟಿಸಿದ ಕೊಲೆಗಾರ (3)
9. ದಪ್ಪ ನೂಲಿರುವ ನೆಲ ಹಾಸು (4)
10. ಬುದ್ಧಿ ಇಟ್ಟುಕೊಂಡೇ ನೀಡಿದ ಒಪ್ಪಿಗೆ (4)
11. ರಾತ್ರಿಯ ಒಡೆಯನಿವನು (4)
13. ಬೆಲೆ ಬಾಳುವ ಮಣಿಗಳನ್ನಿರಿಸಿಕೊಂಡಿರುವ ಸಮುದ್ರ (4)



5594ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮಾರ್ಗದರ್ಶಕ 4.ಅಧಮ
5.ಪಿಶಾಚಿ 7.ವರ
10.ಯತ್ನ 11.ದಬ್ಬಣ
12.ಕೂಪ 13.ಹಣೆ
15.ನನಸು 17.ರುಗಟ
18.ಮರ್ಮಭೇದಕ

ಮೇಲಿಂದ ಕೆಳಕ್ಕೆ:
1.ಸ್ವಾದ 2.ಮಾಮರ
3.ಕಪಿ 4.ಅಭಯದಾನ
6.ಚಿತ್ತಪಲ್ಲಟ 8.ವದನ
9.ತೆಣಹ 14.ಣೆರುಕ
16.ಸುಮ 19.ಭೇಟಿ

ಸುಡೊಕು 5980

	4				9	6		1
9						2	7	
	7							8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5979 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಫೆ.24, 25ರಂದು 'ಐಕ್ಯತಾ ಸಮಾವೇಶ': ಮುಖ್ಯಮಂತ್ರಿ

ಬೆಂಗಳೂರು: ಸಂವಿಧಾನ ಜಾರಿಯಾಗಿ 75 ವರ್ಷ ಪೂರೈಸಿರುವ ಪ್ರಯುಕ್ತ ರಾಜ್ಯ ಸರ್ಕಾರದ ವತಿಯಿಂದ ಫೆಬ್ರುವರಿ 24 ಮತ್ತು 25ರಂದು ಬೆಂಗಳೂರಿನಲ್ಲಿ 'ರಾಷ್ಟ್ರೀಯ ಐಕ್ಯತಾ ಸಮಾವೇಶ' ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, 'ಸಂವಿಧಾನದ ಕುರಿತು ಜಾಗೃತಿ ಮೂಡಿಸಲು ಜನವರಿ 26 ರಿಂದ ರಾಜ್ಯಾದ್ಯಂತ ಸಂವಿಧಾನ ಜಾಥಾ ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನವು ಫೆ.23ಕ್ಕೆ ಕೊನೆಗೊಳ್ಳಲಿದೆ. ಫೆ. 24ರಂದು ಐಕ್ಯತಾ ಸಮಾವೇಶದ ಉದ್ಘಾಟನೆ ಹಾಗೂ 26ರಂದು ಬೃಹತ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ' ಎಂದರು.

ಚಿಂತಕರಾದ ಆಶುತೋಶ್ ವರ್ಶನಿ, ಜಿ.ಎನ್.ದೇವಿ, ಪ್ರೊ. ಜಯಂತಿ ಘೋಷ್, ಪ್ರೊ. ಸುಖದೇವ್ ಥೋರಟ್, ಪ್ರೊ. ಕಾಂಚಾ ಐಲಯ್ಯ, ವಕೀಲ ಪ್ರಶಾಂತ್ ಭೂಷಣ್, ಸಫಾಯಿ ಕರ್ಮಚಾರಿ ಆಂದೋಲನದ ನಾಯಕ ಬೆಜವಾಡ ವಿಲ್ಸನ್, ಹೋರಾಟಗಾರ್ತಿ ಮೇಧಾ ಪಾಟ್ಕರ್ ಸೇರಿದಂತೆ ಹಲವರು ಸಮಾವೇಶದಲ್ಲಿ ಮಾತನಾಡಲಿದ್ದಾರೆ ಎಂದು ತಿಳಿಸಿದರು.

ಜಾತ್ಯತೀತತೆ, ಸಮಾನತೆ, ಭ್ರಾತೃತ್ವ ತತ್ವಗಳು ಸಂವಿಧಾನದ ತಳಹದಿ. ಅವುಗಳಿಗೆ ಧಕ್ಕೆ ತರುವ ಪ್ರಯತ್ನಗಳನ್ನು ವಿಫಲಗೊಳಿಸಬೇಕಾಗಿರುವುದು ಎಲ್ಲ ನಾಗರಿಕರ ಜವಾಬ್ದಾರಿ. ದೇಶದಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಬೇಕಿದೆ. ಇದಕ್ಕಾಗಿ ಸಂವಿಧಾನದ ಕುರಿತು ಜನರಲ್ಲಿ ಜಾಗೃತಿ ಮೂಡಬೇಕಿದೆ. ಜಾಗೃತಿ ಮೂಡಿಸುವುದಕ್ಕಾಗಿಯೇ ಇಂತಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಪತ್ರಿಕಾಗೋಷ್ಠಿಯಲ್ಲಿದ್ದರು.

ಗುರುಲಿಂಗೇಶ್ವರ ಮಠದ ಶ್ರೀಗಳ ಆಯ್ಕೆ ವಿವಾದ • ರಂಭಾಪುರಿ ಶ್ರೀ ವಿರುದ್ಧ ಬೇಸರ

ಸ್ವಾಮೀಜಿ ಕಾರಿಗೆ ಚಪ್ಪಲಿ ಎಸೆತ

ಪ್ರಜಾವಾಣಿ ವಾರ್ತೆ

ಕಲಾದಗಿ (ಬಾಗಲಕೋಟೆ ಜಿಲ್ಲೆ): ಗ್ರಾಮದ ಗುರುಲಿಂಗೇಶ್ವರ ಪಂಚಗ್ರಹ ಸಂಸ್ಥಾನ ಮಠದ ಪೀಠಾಧಿಪತಿ ಆಯ್ಕೆ ವಿಷಯಕ್ಕೆ ಸಂಬಂಧಿಸಿದಂತೆ ವಿವಾದ ತಾರಕಕ್ಕೇರಿದ್ದು, ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ವಿರುದ್ಧ ಮಠದ ಭಕ್ತರು ಶನಿವಾರ ಪ್ರತಿಭಟನೆ ನಡೆಸಿದರು.



ಕಲಾದಗಿ ಗ್ರಾಮದಲ್ಲಿ ಭಕ್ತರು ರಂಭಾಪುರಿ ಶ್ರೀಗಳ ಕಾರು ಅಡ್ಡಗಟ್ಟಿ ಪ್ರತಿಭಟಿಸಿದರು

'ಗುರುಲಿಂಗೇಶ್ವರ ಮಠ ರಂಭಾಪುರಿ ಪೀಠದ ಶಾಖಾಮಠ. ಉತ್ತರಾಧಿಕಾರಿ ನೇಮಕ ಸಂಬಂಧಿಸಿದ ವಿಷಯ ನ್ಯಾಯಾಲಯದಲ್ಲಿದ್ದು, ಇತ್ಯರ್ಥವಾಗಿಲ್ಲ. ಆದರೂ ಗಂಗಾಧರ ಸ್ವಾಮೀಜಿ ಅವರು ಮಠದ ದುರಸ್ತಿಗೆ ಮುಂದಾಗಿದ್ದಾರೆ ಮತ್ತು ಮಠದ ಹೊಲ ಉಳುಮೆ ಮಾಡಿದ್ದಾರೆ' ಎಂದು ಭಕ್ತರು ಆರೋಪಿಸಿದರು.

'ರಂಭಾಪುರಿ ಶ್ರೀಗಳಿದ್ದ ಕಾರಿಗೆ ಭಕ್ತರು ಮುತ್ತಿಗೆ ಹಾಕಿದ ಸಂದರ್ಭದಲ್ಲಿ ತಳ್ಳಾಟ ಆಯಿತು. ಆಗ ಮಧ್ಯ ಪ್ರವೇಶಿಸಿದ ಪೊಲೀಸರು ಶ್ರೀಗಳಿದ್ದ ವಾಹನ ಹೋಗಲು ಅನುವು ಮಾಡಿಕೊಟ್ಟರು. ಆಗ ಕಾರಿಗೆ ಮಹಿಳೆಯೊಬ್ಬರು ಚಪ್ಪಲಿ ತೂರಿ ಆಕ್ರೋಶ ವ್ಯಕ್ತಪಡಿಸಿದರು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಚಪ್ಪಲಿ ಎಸೆತ ಮತ್ತು ಧಿಕ್ಕಾರ ಕೂಗಿದ ಘಟನೆ ನಡೆದಿಲ್ಲ. ಗುರುಲಿಂಗೇಶ್ವರ ಪಂಚಗ್ರಹ ಸಂಸ್ಥಾನ ಮಠದ ವಿಷಯ ನ್ಯಾಯಾಲಯದಲ್ಲಿದೆ. ಹೀಗಾಗಿ ಅದರ ಬಗ್ಗೆ ಎಲ್ಲಿಯೂ ಮಾತನಾಡಿಲ್ಲ' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಮಠದ ಎದುರು ಪ್ರತಿಭಟನೆ

ನಂತರ ಮಠಕ್ಕೆ ತೆರಳಿದ ಭಕ್ತರು, ಗಂಗಾಧರ ಸ್ವಾಮೀಜಿ ವಿರುದ್ಧ ಪ್ರತಿಭಟನೆ ನಡೆಸಿದರು. ಮಠದ ಬಾಗಿಲಿಗೆ ಬೀಗ ಹಾಕಿದರು. ಇದರ ಹಿನ್ನೆಲೆಯಲ್ಲಿ ಪೊಲೀಸರು ಗ್ರಾಮದಲ್ಲಿ ಬಿಗಿ ಬಂದೋಬಸ್ತ್ ಮಾಡಿದ್ದಾರೆ.

ಶಂಕಿತ ನಕ್ಸಲ್ ಸುರೇಶ್ ಬಂಧನ: ಐಸಿಯುನಲ್ಲಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು/ಉಡುಪಿ: ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಅಂಗಡಿ ಗ್ರಾಮದ ಶಂಕಿತ ನಕ್ಸಲ್ ಸುರೇಶ್ ಅಲಿಯಾಸ್ ಪ್ರದೀಪ್‌ನನ್ನು ಕೇರಳದ ಕಣ್ಣೂರಿನ ಕಂಚಿಕೊಲ್ಲಿ ಅರಣ್ಯದಲ್ಲಿ ಅಲ್ಲಿಯ ಪೊಲೀಸರು ಬಂಧಿಸಿದ್ದಾರೆ.

ಕಾಡಾನೆ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದ ಸುರೇಶ್‌ಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಚಿಕ್ಕಮಗಳೂರು, ಉಡುಪಿ ಸೇರಿ ರಾಜ್ಯದ ಹಲವೆಡೆ ಸುರೇಶ್ ವಿರುದ್ಧ 35ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಆರೋಪಿ ಚೇತರಿಸಿಕೊಂಡ ಬಳಿಕ ಬಾಡಿ ವಾರಂಟ್ ಪಡೆದು ರಾಜ್ಯಕ್ಕೆ ಕರೆತಂದು ವಿಚಾರಣೆ ನಡೆಸಲಾಗುವುದು ಎಂದು ನಕ್ಸಲ್ ನಿಗ್ರಹ ದಳದ ಎಸ್ಪಿ ಜಿತೇಂದ್ರ ಕುಮಾರ್ ದಯಂ ತಿಳಿಸಿದರು.

'ಸುರೇಶ್ ಬಂಧನದ ಬಗ್ಗೆ ಕೇರಳ ಪೊಲೀಸರಿಂದ ಅಧಿಕೃತ ಮಾಹಿತಿ ಬಂದಿಲ್ಲ. ಆತನ ವಿರುದ್ಧ ಯಾವ ಠಾಣೆಯಲ್ಲಿ ಪ್ರಕರಣ ದಾಖಲಾಗಿವೆ ಎಂಬ ಮಾಹಿತಿ ಕಲೆಹಾಕಲಾಗುತ್ತಿದೆ. ಅಧಿಕೃತ ಮಾಹಿತಿ ಬಂದ ಬಳಿಕ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಎಸ್ಪಿ ವಿಕ್ರಮ ಅಮಟೆ 'ಪ್ರಜಾವಾಣಿ'ಗೆ ತಿಳಿಸಿದರು.

ರೈತ ವಿದ್ಯಾನಿಧಿ: ಫೆ.29ರ ಗಡುವು

ಬೆಂಗಳೂರು: ಮುಖ್ಯಮಂತ್ರಿ ರೈತ ವಿದ್ಯಾನಿಧಿ ಹಾಗೂ ಭೂರಹಿತ ಕೃಷಿ ಕಾರ್ಮಿಕರ ವಿದ್ಯಾನಿಧಿ ಯೋಜನೆಯಲ್ಲಿ 2023-24ನೇ ಸಾಲಿನ ವಿದ್ಯಾರ್ಥಿ ವೇತನಕ್ಕಾಗಿ ಅಭ್ಯರ್ಥಿಗಳು ಫೆ.29ರ ಒಳಗೆ ಆದಾಯ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಕೃಷಿ ಇಲಾಖೆ ಸೂಚಿಸಿದೆ.

ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಪೋಷಕರ ಆದಾಯವು ₹2.50 ಲಕ್ಷ ಮೀರಿರಬಾರದು. ಯೋಜನೆಯಡಿ ಸೌಲಭ್ಯ ಪಡೆಯುವ ರೈತರು ಹಾಗೂ ಕೃಷಿ ಕಾರ್ಮಿಕರ ಮಕ್ಕಳು ತಮ್ಮ ಪೋಷಕರ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ವಿಭಾಗಕ್ಕೆ (ಎಸ್‌ಎಸ್‌ಪಿ) ಸಲ್ಲಿಸಬೇಕು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಇನ್‌ಸ್ಯಾಟ್–3ಡಿಎಸ್ ಉಡ್ಡಯನ ಯಶಸ್ವಿ

ಒಂದನೇ ಪುಟದಿಂದ

ಉದ್ದೇಶ: ಪ್ರಸ್ತುತ, ಇನ್‌ಸ್ಯಾಟ್-3ಡಿ (2013ರಲ್ಲಿ ಉಡ್ಡಯನ) ಹಾಗೂ ಇನ್‌ಸ್ಯಾಟ್-3ಡಿಆರ್ (2016) ಉಪಗ್ರಹಗಳು ಹವಾಮಾನಕ್ಕೆ ಸಂಬಂಧಿಸಿ ಮಾಹಿತಿ ನೀಡುತ್ತಿವೆ. ಇವುಗಳ ಜೊತೆಗೆ, ಭೂಮಿಯ ಮೇಲ್ಮೈ ವಾತಾವರಣ ಹಾಗೂ ಸಾಗರದಲ್ಲಿ ಕಂಡುಬರುವ ವಿದ್ಯಮಾನಗಳ ಕುರಿತು ವಿಸ್ತೃತ ಅಧ್ಯಯನ, ನೈಸರ್ಗಿಕ ವಿಕೋಪಗಳ ಕುರಿತು ಮುನ್ಸೂಚನೆ ನೀಡುವ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವುದು 'ಇನ್‌ಸ್ಯಾಟ್-3ಡಿಎಸ್' ಉಡ್ಡಯನದ ಉದ್ದೇಶವಾಗಿದೆ.

ಈ ವರ್ಷ, ಇಸ್ರೊ ಕೈಗೊಂಡಿರುವ ಯಶಸ್ವಿ ಎರಡನೇ ಕಾರ್ಯಕ್ರಮ ಇದಾಗಿದೆ. ಜನವರಿ 1ರಂದು 'ಎಕ್ಸ್‌ಪೊಸ್ಯಾಟ್' ಗಗನನೌಕೆಯನ್ನು ಉಡ್ಡಯನ ಮಾಡಲಾಗಿತ್ತು.

ಚೆಂಗಲಮ್ಮ ದೇವಿ ಪೂಜೆ(ತಿರುಪತಿ ವರದಿ): ಇದಕ್ಕೂ ಮುನ್ನ, ಉಪಗ್ರಹ ('ಇನ್‌ಸ್ಯಾಟ್-3ಡಿಎಸ್') ಉಡ್ಡಯನ ಯಶಸ್ವಿಗಾಗಿ ಪ್ರಾರ್ಥಿಸಿ, ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು ನೆಲ್ಲೂರು ಜಿಲ್ಲೆಯ ಚೆಂಗಲಮ್ಮ ಪರಮೇಶ್ವರಿ ದೇವಸ್ಥಾನಕ್ಕೆ ತೆರಳಿ, ಪೂಜೆ ಸಲ್ಲಿಸಿದರು.

ಸೂಳ್ಳೂರುಪೇಟದಲ್ಲಿರುವ ದೇವಸ್ಥಾನದಲ್ಲಿ ನಡೆದ ಪೂಜೆ ಕಾರ್ಯಕ್ರಮದಲ್ಲಿ ಸಂಸ್ಥೆಯ ಇತರ ಅಧಿಕಾರಿಗಳು ಕೂಡ ಪಾಲ್ಗೊಂಡಿದ್ದರು.



ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನದ ರಥೋತ್ಸವದ ಮರುದಿನವಾದ ಶನಿವಾರ ಭಕ್ತರು ರಥಪೂಜೆ ಓಕುಳಿಯಾಡಿ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಪುರವಣಿ ಓದಿರಿ

ಲಂಚ ಪ್ರಕರಣ: ಸಿಡಿಪಿಒ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಹಿರೇಕೆರೂರಿನ ಸ್ಫೂರ್ತಿ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಮಹಿಳಾ ಸಾಂತ್ವನ ಕೇಂದ್ರಕ್ಕೆ ಅನುದಾನ ಬಿಡುಗಡೆ ಮಾಡಿಕೊಟ್ಟಿದ್ದಕ್ಕೆ ₹10 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಒ) ಜಯಶ್ರೀ ಪಾಟೀಲ ಮತ್ತು ಡಾಟಾ ಎಂಟ್ರಿ ಆಪರೇಟರ್ ರಾಜು ಎಂಬವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಮಹಿಳಾ ಸಾಂತ್ವನ ಕೇಂದ್ರಕ್ಕೆ ಕೇಂದ್ರ ಸರ್ಕಾರದಿಂದ ನೀಡುವ 2023–24ನೇ ಸಾಲಿನ ಎರಡನೇ ಕಂತಿನ ₹1.97 ಲಕ್ಷ ಅನುದಾನ ಬಿಡುಗಡೆಗೊಳಿಸಿದ್ದಕ್ಕೆ ₹10 ಸಾವಿರ ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಸಂತೋಷ ಠಾಕೂರಪ್ಪ ಎಂಬವರು ನೀಡಿದ ದೂರಿನ ಮೇರೆಗೆ ಡಿವೈಎಸ್ಪಿ ಬಿ.ಪಿ.ಚಂದ್ರಶೇಖರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.



ಜಯಶ್ರೀ



ರಾಜು

ಗುಲ್ಜಾರ್, ರಾಮಭದ್ರಾಚಾರ್ಯರಿಗೆ ಜ್ಞಾನಪೀಠ

ಒಂದನೇ ಪುಟದಿಂದ

ಗುಲ್ಜಾರ್ ಅವರಿಗೆ ಈಗಾಗಲೇ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2002), ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ (2013), ಪದ್ಮ ಭೂಷಣ (2004) ಹಾಗೂ ಐದು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಸಂದಿವೆ.

2009ರಲ್ಲಿ ಆಸ್ಕರ್ ಮತ್ತು 2010ರಲ್ಲಿ ಗ್ರ್ಯಾಮಿ ಪ್ರಶಸ್ತಿ ಪಡೆದ 'ಸ್ಲಮ್‌ಡಾಗ್ ಮಿಲಿಯನೇರ್' ಚಿತ್ರದ 'ಜೈ ಹೋ...' ಸೇರಿದಂತೆ ಗುಲ್ಜಾರ್ ಅವರು ಹಲವು ಗೀತೆಗಳನ್ನು ರಚಿಸಿದ್ದಾರೆ. ಅಲ್ಲದೆ 'ಮಾಚಿಸ್' (1996), 'ಓಂಕಾರ' (2006), 'ದಿಲ್ ಸೇ...' (1998) ಮತ್ತು 'ಗುರು' (2007) ಸೇರಿ ಹಲವು ಸಿನಿಮಾಗಳಲ್ಲಿನ ಅವರ ಗೀತೆಗಳು ಮೆಚ್ಚುಗೆ ಗಳಿಸಿವೆ.

ನಿರ್ದೇಶಕರಾಗಿಯೂ ಹೆಸರು ಮಾಡಿರುವ ಗುಲ್ಜಾರ್ ಅವರು, 'ಕೋಶಿಶ್' (1972), 'ಪರಿಚಯ್' (1972), 'ಇಜಾಜತ್' (1977) ಮತ್ತು ದೂರದರ್ಶನ ಧಾರಾವಾಹಿ 'ಮಿರ್ಜಾ ಗಾಲಿಬ್' (1988) ನಿರ್ದೇಶಿಸಿ ಕೆಲ ಪ್ರಶಸ್ತಿಗಳನ್ನು ಪಡೆದಿದ್ದಾರೆ.

'ಗುಲ್ಜಾರ್ ಅವರು ತಮ್ಮ ಸುದೀರ್ಘ ಚಲನಚಿತ್ರ ಪಯಣದ ಜತೆಗೆ ಸಾಹಿತ್ಯ ಕ್ಷೇತ್ರದಲ್ಲೂ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಅವರು ಕಾವ್ಯದಲ್ಲಿ 'ತ್ರಿವೇಣಿ' ಎಂಬ ಮೂರು ಸಾಲುಗಳ ಹೊಸ ಪ್ರಕಾರವನ್ನು ಪರಿಚಯಿಸಿದ್ದಾರೆ. ಕೆಲ ಸಮಯದಿಂದ ಅವರು ಮಕ್ಕಳ ಕಾವ್ಯದ ಬಗ್ಗೆಯೂ ಗಂಭೀರವಾಗಿ ಗಮನ ಹರಿಸಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

22 ಭಾಷೆ ಬಲ್ಲವರು: ರಮಾನಂದ ಪಂಥದ ನಾಲ್ವರು ಜಗದ್ಗುರು ರಮಾನಂದಾಚಾರ್ಯರಲ್ಲಿ ರಾಮಭದ್ರಾಚಾರ್ಯರೂ ಒಬ್ಬರು. ಅವರು 1982ರಿಂದಲೂ ಈ ಸ್ಥಾನದಲ್ಲಿದ್ದಾರೆ. ಸುಮಾರು 22 ಭಾಷೆಗಳಲ್ಲಿ ಮಾತನಾಡ ಬಲ್ಲವರಾದ ರಾಮಭದ್ರಾಚಾರ್ಯರು, ಸಂಸ್ಕೃತ, ಹಿಂದಿ, ಅವಧಿ, ಮೈಥಿಲಿ ಸೇರಿದಂತೆ ಹಲವು ಭಾರತೀಯ ಭಾಷೆಗಳ ಬರಹಗಾರರು. 2015ರಲ್ಲಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಸಂದಿದೆ.

ರಾಮಭದ್ರಾಚಾರ್ಯ ಅವರು ಎರಡು ತಿಂಗಳ ಮಗುವಾಗಿದ್ದಾಗಲೇ ದೃಷ್ಟಿ ಕಳೆದುಕೊಂಡವರು. ತಮ್ಮ ಐದನೇ ವಯಸ್ಸಿನಲ್ಲಿಯೇ ಅವರು ಭಗವದ್ಗೀತೆ ಮತ್ತು ಎಂಟನೇ ವಯಸ್ಸಿನ ವೇಳೆಗೆ ಸಂಪೂರ್ಣ 'ರಾಮಚರಿತಮಾನಸ'ವನ್ನು ಕಂಠಪಾಠ ಮಾಡಿದ್ದರು.

ಜ್ಞಾನಪೀಠ ಪ್ರಶಸ್ತಿಯನ್ನು ಭಾರತೀಯ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆ ನೀಡಿದವರಿಗೆ ಕೊಡಲಾಗುತ್ತದೆ. ಸಂಸ್ಕೃತ ಭಾಷಾ ಸಾಹಿತ್ಯಕ್ಕೆ ಎರಡನೇ ಬಾರಿ ಮತ್ತು ಉರ್ದು ಭಾಷಾ ಸಾಹಿತ್ಯಕ್ಕೆ ಐದನೇ ಬಾರಿ ಪ್ರಶಸ್ತಿ ನೀಡಲಾಗುತ್ತಿದೆ.

ಪ್ರಶಸ್ತಿಯು ₹21 ಲಕ್ಷ ನಗದು ಮತ್ತು ವಾಗ್ದೇವಿಯ ಪ್ರತಿಮೆ ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿದೆ.

ಕಾಂಗ್ರೆಸ್ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶದಲ್ಲಿ ಪ್ರಜಾಪ್ರಭುತ್ವ ಉಳಿಸುವಂತೆ ಕೋರಿದ ಎಐಸಿಸಿ ಅಧ್ಯಕ್ಷ

ಮೋದಿ ಮತ್ತೆ ಗೆದ್ದರೆ ಸರ್ವಾಧಿಕಾರಿ: ಖರ್ಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಈ ಬಾರಿಯೂ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಪ್ರಧಾನಿ ನರೇಂದ್ರ ಮೋದಿ ಮತ್ತಷ್ಟು ಸರ್ವಾಧಿಕಾರಿ ಆಗುತ್ತಾನೆ. ಭವಿಷ್ಯದಲ್ಲಿ ದೇಶದಲ್ಲಿ ಚುನಾವಣೆಗಳೇ ನಡೆಯುವುದಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಶನಿವಾರ ಇಲ್ಲಿ ಏರ್ಪಡಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

'ಎಲ್ಲ ಸಂಸ್ಥೆಗಳ ಮೇಲೆ ಹತೋಟಿ ಸಾಧಿಸಿ ದೇಶವನ್ನೇ ನಿಯಂತ್ರಿಸಲು ಮೋದಿ ಹೊರಟಿದ್ದಾನೆ. ಅವನನ್ನು ಇನ್ನಷ್ಟು ಶಕ್ತಿಶಾಲಿ ಮಾಡಬೇಡಿ' ಎಂದು ಕೋರಿದರು.

'ಸ್ವಾತಂತ್ರ್ಯಪೂರ್ವದಲ್ಲಿ ಡಿಪ್ರೆಸ್ಡ್ ಕ್ಲಾಸ್ ಮಿಷನ್ ಆರಂಭಿಸಿ ಶೋಷಿತರಿಗೆ, ಅಸ್ಪೃಶ್ಯರಿಗೆ, ಶಿಕ್ಷಣ, ಉತ್ತಮ ರಸ್ತೆ, ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲು ಶ್ರಮಿಸಿದ ಇಲ್ಲಿನ ಕುದ್ಮುಲ್ ರಂಗರಾವ್ ಅವರನ್ನೇ ಜನ ನೆನಪಿಟ್ಟುಕೊಂಡಿಲ್ಲ. ಇಲ್ಲಿ ಏನೇನೋ ಬೆಳವಣಿಗೆ ಗಳನ್ನು ನೋಡುತ್ತಿದ್ದೇವೆ. ಕಾಂಗ್ರೆಸ್ ಪಕ್ಷ ಜಾರಿಗೆ ತಂದ ಭೂಸುಧಾರಣೆ ಕಾನೂನಿನಿಂದ ಉಡುಪಿ ಮಂಗಳೂರು ಪ್ರದೇಶದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಬಡವರು ಭೂಮಾಲೀಕರಾದರು. ಕನಿಷ್ಠ ಪಕ್ಷ ನಿಮ್ಮ ತಂದೆ ತಾಯಿ ಎಂತಹ ಸ್ಥಿತಿಯಲ್ಲಿದ್ದರು. ಅವರನ್ನು ಭೂಮಾಲೀಕರನ್ನಾಗಿ ಮಾಡಿದ್ದು ಯಾರು ಎಂಬುದನ್ನು ನೆನಪಿಸಿಕೊಳ್ಳಬೇಕು. ನಮ್ಮ ಕಾರ್ಯಕ್ರಮಗಳಿಂದ ಜಮೀನು ಪಡೆದವರು, ಅನ್ನ ಉಂಡವರೂ, ಶಿಕ್ಷಣ ಹೊಂದಿದವರೂ ನಮ್ಮನ್ನೇ ಬೈಯುತ್ತಾರೆ. ಇದು ಯಾವ ನ್ಯಾಯ. ಈ ಪ್ರದೇಶದಲ್ಲಿ ಮೋದಿ ಅವರಿಗೆ ಜೈಕಾರ ಕೇಳುತ್ತಿದ್ದೇವೆ. ಅವರೇನಾದರೂ ಜಮೀನು ಕೊಟ್ಟರೇ, ಆಹಾರ ಭದ್ರತಾ ಕಾಯ್ದೆ ಜಾರಿಗೊಳಿಸಿದ್ದಾರೆಯೇ? 2 ಕೋಟಿ ನೌಕರಿ ಕೊಟ್ಟರೇ? ಆದರೂ ಇಲ್ಲಿ ಬಿಜೆಪಿಯ ಬಾವುಟ ಹಾರಾಡುತ್ತಿರುವುದೇಕೆ?' ಎಂದರು.

'ಬಿಜೆಪಿಯವರು ಚುನಾವಣಾ ಬಾಂಡ್‌ನಿಂದ ₹ 6 ಸಾವಿರ ಕೋಟಿ ಕಪ್ಪುಹಣವನ್ನು ಉಳ್ಳವರಿಂದ ಗಳಿಸಿದ್ದಾರೆ. ಆದರೆ, ನಮ್ಮ ಪಕ್ಷವನ್ನು ಪೂರ್ತಿ ಮುಗಿಸಲು ಹೊರಟಿದ್ದಾರೆ. ಕಾಂಗ್ರೆಸ್‌ನ ವಿವಿಧ ಬ್ಯಾಂಕ್ ಖಾತೆಗಳನ್ನೂ ಸ್ಥಗಿತಗೊಳಿಸಿದರು. ಜನ ರೊಚ್ಚಿಗೆದ್ದಿದ್ದರಿಂದ ಅವುಗಳನ್ನು ಈಗ ಮತ್ತೆ ಚಾಲ್ತಿಗೊಳಿಸಿದರು. ಜನರು ಕೊಟ್ಟ ದುಡ್ಡೂ ವಿರೋಧ ಪಕ್ಷಗಳ ಬಳಿ ಇರಬಾರದು ಎಂಬ ಧೋರಣೆ ಅವರದು. ಸದಸ್ಯತ್ವದಿಂದ ಗಳಿಸಿದ ಹಣಕ್ಕೂ ಅವರು ಕೈ ಹಾಕಿದ್ದಾರೆ' ಎಂದು ಬೇಸರ ತೋಡಿಕೊಂಡರು.

'ಬಿಜೆಪಿಯವರು ಬರೇ ಜಗಳ ಹಚ್ಚುತ್ತಾರೆ. ಧರ್ಮದ ಹೆಸರಿನಲ್ಲಿ ರಾಜಕೀಯಮಾಡಿ, ಕಡುಬಡವರನ್ನು ತುಳಿಯುವುದೇ ಅವರ ಉದ್ದೇಶ. ಈ ಸಲ ಮತ್ತೆ ಆರು ಗ್ಯಾರಂಟಿ ಯೋಜನೆಗಳೊಂದಿಗೆ ನಿಮ್ಮ ಮನೆ ಬಾಗಿಲಿಗೆ ಬಂದಿದ್ದೇವೆ. ಆಶೀರ್ವಾದ ಮಾಡಿ' ಎಂದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, 'ನರೇಂದ್ರ ಮೋದಿಯವರದ್ದು ಸುಳ್ಳುಗಳ ಮಾದರಿ. ನುಡಿದಂತೆ ನಡೆದ ಕರ್ನಾಟಕ ಸರ್ಕಾರವೇ ದೇಶಕ್ಕೆ ಮಾದರಿ' ಎಂದರು.





ಮಂಗಳೂರಿನಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಜನರತ್ತ ಕೈಬೀಸಿದರು. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಹರೀಶ್ ಕುಮಾರ್, ಗೃಹಸಚಿವ ಜಿ.ಪರಮೇಶ್ವರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ರಮಾನಾಥ ರೈ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮುಖ್ಯಮಂತ್ರಿ ಸಿದ್ದರಾಮಯ್ಯ, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಪಕ್ಷದ ಮುಖಂಡ ಎಂ.ವೀರಪ್ಪ ಮೊಯಿಲಿ, ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್ ಮತ್ತಿತರರು ಭಾಗವಹಿಸಿದ್ದರು (ಎಡಚಿತ್ರ) ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು —ಪ್ರಜಾವಾಣಿ ಚಿತ್ರಗಳು

ನರೇಂದ್ರ ಮೋದಿಯವರದ್ದು ಸುಳ್ಳುಗಳ ಮಾದರಿ. ನುಡಿದಂತೆ ನಡೆದ ಕರ್ನಾಟಕ ಸರ್ಕಾರವೇ ದೇಶಕ್ಕೆ ಮಾದರಿ

ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಲೋಕಸಭಾ ಚುನಾವಣೆಯ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧವಾಗಿದೆ. ಇನ್ನೊಂದು ಸುತ್ತಿನ ಸಮೀಕ್ಷೆ ಬಳಿಕ ಅಭ್ಯರ್ಥಿಗಳ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ನಮ್ಮ ಗ್ಯಾರಂಟಿ ಪದವನ್ನೂ ಕದ್ದಿದ್ದಾರೆ: ಸಿದ್ದರಾಮಯ್ಯ

'ಬಿಜೆಪಿಯವರು ನಮ್ಮ ಕಾರ್ಯಕ್ರಮಗಳನ್ನಷ್ಟೇ ಅಲ್ಲ, ನಾವು ಬಳಸಿದ 'ಗ್ಯಾರಂಟಿ' ಪದವನ್ನೂ ಕದ್ದು 'ಮೋದಿ ಗ್ಯಾರಂಟಿ' ಎಂದು ಪ್ರಚಾರ ಮಾಡಲಾರಂಭಿಸಿದ್ದಾರೆ. ನಮ್ಮ ಗ್ಯಾರಂಟಿ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಬಿಜೆಪಿಯವರು ಇದನ್ನೆಲ್ಲ ಮೋದಿಯವರೇ ಮಾಡಿದ್ದು ಹೇಳುವಂತಹ ನೀಚ ಮನಸ್ಥಿತಿ ಹೊಂದಿದ್ದಾರೆ. ಉತ್ತಮ ಆಡಳಿತ ನೀಡಿಯೂ 2018ರಲ್ಲಿ ನಾವು ಸೋತಿದ್ದು ಪ್ರಚಾರಕ್ಕೆ ಮಹತ್ವ ನೀಡದ ಕಾರಣಕ್ಕೆ. ನಮ್ಮ ಕಾರ್ಯಕರ್ತರು ಎಚ್ಚರವಾಗಿರಬೇಕು. ಸರ್ಕಾರದ ಯೋಜನೆಗಳ ಮಾಹಿತಿಯನ್ನು ಮನೆ ಮನೆಗೆ ತಲುಪಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ಬಿಜೆಪಿಯ 25 ಸಂಸದರು ಯಾವತ್ತಾದರೂ ಪ್ರಶ್ನೆ ಮಾಡಿದ್ದಾರೆಯೇ. ಮಿಸ್ಟರ್ ನಳಿನ್ ಕುಮಾರ್ ಕಟೀಲ್, ತಾಯಿ ಸಚಿವೆ ಶೋಭಾ ಕರಂದ್ಲಾಜೆ ಯಾವತ್ತಾದರೂ ಬಾಯಿ ಬಿಟ್ಟಿದ್ದೀರಾ? ನಿಮ್ಮನ್ನು ಮತ್ತೆ ಗೆಲ್ಲಿಸಬೇಕಾ' ಎಂದು ಅವರು ಪ್ರಶ್ನಿಸಿದರು.

'ಮೋದಿಯವರು ವಿಧಾನ ಸಭಾ ಚುನಾವಣೆಯಲ್ಲಿ, ರಸ್ತೆ ರಸ್ತೆಯಲ್ಲಿ ತಿರುಗಿದರೂ ಜನ ನಮಗೆ 136 ಸ್ಥಾನಗಳನ್ನು ಕೊಟ್ಟಿದ್ದಾರೆ. ಈ ಸಲವೂ ನಾವು ರಾಜ್ಯದಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆದ್ದೇ ಗೆಲ್ಲುತ್ತೇವೆ. ಇಲ್ಲಿನ ಎರಡು ಸ್ಥಾನ ಗೆಲ್ಲಿಸಿಕೊಡಿ' ಎಂದು ಮನವಿ ಮಾಡಿದರು.

ಕಾರ್ಯಕರ್ತರು ಎದೆಗುಂದಬೇಕಿಲ್ಲ: ಡಿ.ಕೆ. ಶಿವಕುಮಾರ್

'ಮಂಗಳೂರು ಮತ್ತು ಉಡುಪಿಯ ಕಾರ್ಯಕರ್ತರು ಆತ್ಮವಿಶ್ವಾಸ ಕಳೆದುಕೊಳ್ಳಬೇಕಾಗಿಲ್ಲ. ವಿಧಾನ ಸಭಾ ಚುನಾವಣೆಯಲ್ಲಿ ಕರಾವಳಿಯಲ್ಲಿ ಎರಡೇ ಸೀಟು ಗೆದ್ದಿದ್ದಕ್ಕೆ ಕುಗ್ಗಬೇಕಿಲ್ಲ. ಈ ಹಿಂದೆ ಉಡುಪಿ– ಚಿಕ್ಕಮಗಳೂರು ಕ್ಷೇತ್ರದ ಉಪಚುನಾವಣೆಯನ್ನು ನಾವು ಗೆದ್ದು ತೋರಿಸಿದ್ದೆವು. ಮೋದಿ ಗೆದ್ದರೆ ದೇಶ ತೊರೆಯುತ್ತೇನೆ ಎಂದಿದ್ದ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಈಗ ಮಗನನ್ನು ಬಿಜೆಪಿಗೆ ಕಳುಹಿಸಿದ್ದು ನಾನೇ ಎನ್ನುತ್ತಿದ್ದಾರೆ. ಇದು ನಮ್ಮ ಗ್ಯಾರಂಟಿಗಳ ಶಕ್ತಿ. ಈ ಸಲ ಗ್ಯಾರಂಟಿಯ ಬಲ ನಮ್ಮ ಜೊತೆಗಿದೆ. ರಾಜ್ಯದಲ್ಲಿ ಕನಿಷ್ಠ 20 ಸೀಟುಗಳನ್ನು ಗೆಲ್ಲುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಬೆಳಗಾವಿಯಿಂದ ಸ್ಪರ್ಧೆ ತೀರ್ಮಾನವಿಲ್ಲ: ಶೆಟ್ಟರ್

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಬೆಳಗಾವಿ ಕ್ಷೇತ್ರದಿಂದ ಸ್ಪರ್ಧಿಸುವ ಕುರಿತು ಯಾವುದೇ ನಿರ್ಧಾರ ಮಾಡಿಲ್ಲ ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಹೇಳಿದರು.

ಬಿಜೆಪಿಯ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಲು ಬಂದಿರುವ ಅವರು ಸುದ್ದಿಗಾರರ ಜತೆಗೆ ಮಾತನಾಡಿ, 'ಬೆಳಗಾವಿ ಕ್ಷೇತ್ರಕ್ಕೆ ನನ್ನ ಹೆಸರು ಕೇಳಿ ಬರುತ್ತಿದೆ. ಯಾವ ಉದ್ದೇಶದಿಂದ ನನ್ನ ಹೆಸರು ಬರುತ್ತಿದೆ ಎಂಬುದು ಗೊತ್ತಿಲ್ಲ. ಪಕ್ಷದ ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ' ಎಂದು ಹೇಳಿದರು.

ಉದಾಸಿ ಮನವೊಲಿಕೆ ಯತ್ನ: 'ಹಾವೇರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ಸಂಸದ ಶಿವಕುಮಾರ್ ಉದಾಸಿ ಅವರನ್ನು ಮತ್ತೊಮ್ಮೆ ಮನವೊಲಿಸುವ ಕೆಲಸ ಮಾಡುತ್ತೇವೆ. ಆದರೆ, ಅವರು ಈ ಬಾರಿ ಗಟ್ಟಿಯಾಗಿ ನಿಂತಿದ್ದಾರೆ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಉದಾಸಿ ಈ ಹಿಂದೆ ಸ್ಪಷ್ಟಪಡಿಸಿದ್ದರು. ಬೊಮ್ಮಾಯಿ ಸುದ್ದಿಗಾರರ ಜತೆಗೆ ಮಾತನಾಡಿ. 'ಹಾವೇರಿ ಕ್ಷೇತ್ರಕ್ಕೆ ನಾನು ಆಕಾಂಕ್ಷಿ ಅಲ್ಲ. ನಾನು ಯಾವುದೇ ಆಕಾಂಕ್ಷೆ ಇಟ್ಟುಕೊಂಡಿಲ್ಲ. ಈ ಬಗ್ಗೆ ಹಲವು ಬಾರಿ ಸ್ಪಷ್ಟಪಡಿಸಿದ್ದೇನೆ' ಎಂದರು.



ಸಿದ್ದರಾಮಯ್ಯಗೆ 'ಸಾಲ' ಪ್ರಶಸ್ತಿ: ಅಶೋಕ ವ್ಯಂಗ್ಯ


ನವದೆಹಲಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಿನ ಆರ್ಥಿಕ ವರ್ಷದಲ್ಲಿ ₹1 ಲಕ್ಷ ಕೋಟಿ ಸಾಲ ಮಾಡುವುದಾಗಿ ಪ್ರಸ್ತಾಪಿಸಿದ್ದಾರೆ. ರಾಜ್ಯದ ಜನರ ಮೇಲೆ ತಲಾ ₹45 ಸಾವಿರ ಸಾಲದ ಭಾರ ಹೊರೆಸಿದ್ದಾರೆ. ಈ ವಿಷಯದಲ್ಲಿ ಅವರಿಗೆ ಪ್ರಶಸ್ತಿ ನೀಡಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ವ್ಯಂಗ್ಯವಾಡಿದರು.

ಶನಿವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅಹಂಕಾರದಿಂದ ಕೇಂದ್ರ ಸರ್ಕಾರವನ್ನು ಎದುರು ಹಾಕಿಕೊಳ್ಳುತ್ತಿದ್ದಾರೆ. ಇದರಿಂದ ರಾಜ್ಯದ ಜನರಿಗೆ ಅನ್ಯಾಯವಾಗಲಿದೆ. ಕೇಂದ್ರವನ್ನು ಓಲೈಕೆ ಮಾಡಿ ಹೆಚ್ಚು ಅನುದಾನ ತರಬೇಕು. ಸಚಿವನಾಗಿದ್ದಾಗ ಈ ರೀತಿ ಮಾಡಿ ಹೆಚ್ಚು ಅನುದಾನ ತಂದಿದ್ದೇನೆ' ಎಂದರು.

'ಲೋಕಸಭೆ: ಸಿ.ಎಂ, ಡಿಸಿಎಂ ಸಮರ್ಥ ಅಭ್ಯರ್ಥಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥ ಅಭ್ಯರ್ಥಿಗಳು. ಅದರಲ್ಲೂ ಶಿವಕುಮಾರ್ ಅತ್ಯುತ್ತಮ ಆಯ್ಕೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರು ಹೇಳಿದರು.



ಮಹದೇವಪ್ಪ

ವಿಧಾನಸೌಧದಲ್ಲಿ ಶನಿವಾರ ಪತ್ರಿಕಾಗೋಷ್ಠಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕುರಿತು ಪತ್ರಕರ್ತರು ಪ್ರಶ್ನಿಸಿದರು.

'ಇಲ್ಲೇ ಮಹದೇವಪ್ಪ ಇದ್ದಾರಲ್ಲಾ, ಅವರನ್ನೇ ಕೇಳಿ' ಎಂದು ಹೇಳಿ ಮುಖ್ಯಮಂತ್ರಿ ನಿರ್ಗಮಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, 'ಚಾಮರಾಜನಗರ ಕ್ಷೇತ್ರದಲ್ಲಿ ನನ್ನನ್ನು ಅಥವಾ ನನ್ನ ಮಗನನ್ನು ಅಭ್ಯರ್ಥಿಯಾಗಿ ಮಾಡಿ ಎಂದು ಸ್ಥಳೀಯ ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ, ಸ್ಪಷ್ಟವಾಗಿ ಹೇಳುತ್ತೇನೆ. ನಾನೂ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವುದಿಲ್ಲ' ಎಂದರು.

'ಪಕ್ಷದ ಹೈಕಮಾಂಡ್ ಈವರೆಗೆ ನನಗೆ ಸ್ಪರ್ಧೆ ಕುರಿತು ಸೂಚನೆ ನೀಡಿಲ್ಲ. ಪಕ್ಷದ ಯಾರಿಂದಲೂ ಸೂಚನೆ ಇಲ್ಲ. ನನ್ನ ಮಗ ಟಿಕೆಟ್ ಆಕಾಂಕ್ಷಿ. ಮಗ ಎಂಬ ಕಾರಣಕ್ಕಾಗಿ ಅಲ್ಲ, ಆತ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತ. ಮೂರು ಬಾರಿ ವಿಧಾನಸಭೆ ಚುನಾವಣೆಗೆ ಟಿಕೆಟ್ ತಪ್ಪಿದೆ. ಆದರೂ, ಬೇಸರಿಸಿಕೊಳ್ಳದೆ ಪಕ್ಷದ ಕೆಲಸ ಮಾಡುತ್ತಿದ್ದಾನೆ' ಎಂದರು.

'ಪಕ್ಷಕ್ಕಾಗಿ ಸಚಿವರೂ ತ್ಯಾಗಕ್ಕೆ ಸಿದ್ಧರಾಗಿರಬೇಕು' ಎಂಬ ಶಿವಕುಮಾರ್ ಹೇಳಿಕೆ ಕುರಿತು ಪ್ರಶ್ನಿಸಿದಾಗ, 'ಅಧ್ಯಕ್ಷರಾಗಿ ಅವರು ಹೇಳುತ್ತಾರೆ. ನಾನು ಸಾಕಷ್ಟು ತ್ಯಾಗ ಮಾಡಿದ್ದೇನೆ. ಸಿದ್ಧಾಂತಕ್ಕಾಗಿ ಹೋರಾಡುವವನು ನಾನು' ಎಂದರು.

ಗ್ಯಾರಂಟಿ ಯೋಜನೆಗಳ ಪರವಾಗಿ ಜನರು ಇದ್ದಾರೆ. ರಾಜ್ಯದಲ್ಲಿ 20 ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ತುಮಕೂರು ಟಿಕೆಟ್ ಕೇಳಿರುವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತುಮಕೂರು ಲೋಕಸಭಾ ಕ್ಷೇತ್ರದ ಟಿಕೆಟ್ ಕೊಡುವಂತೆ ಬಿಜೆಪಿ ರಾಷ್ಟ್ರೀಯ ನಾಯಕರಿಗೆ ಮನವಿ ಮಾಡಿದ್ದೇನೆ. ವರಿಷ್ಠರು ಒಪ್ಪಿದರೆ ಸ್ಪರ್ಧಿಸುತ್ತೇನೆ' ಎಂದು ಮಾಜಿ ಸಚಿವ ವಿ.ಸೋಮಣ್ಣ ತಿಳಿಸಿದರು.



ವಿ. ಸೋಮಣ್ಣ

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ನರೇಂದ್ರ ಮೋದಿಯವರು ಮತ್ತೆ ಪ್ರಧಾನಿ ಆಗಲು ಅಳಿಲು ಸೇವೆ ಮಾಡುವ ಆಸೆ ನನ್ನದು. ವರಿಷ್ಠರು ಯಾವುದೇ ಕ್ಷೇತ್ರದಲ್ಲಿ ಸ್ಪರ್ಧೆಗೆ ಸೂಚಿಸಿದರೂ ಕಣಕ್ಕಿಳಿಯಲು ಸಿದ್ಧ' ಎಂದರು.

ತುಮಕೂರು ಟಿಕೆಟ್ ಕೊಡುವ ಬಗ್ಗೆ ತಮಗೆ ಮಾಹಿತಿ ಇಲ್ಲ. ಹತ್ತಿರದ ಜಿಲ್ಲೆಯಾದ್ದರಿಂದ ಬೆಂಗಳೂರಿನಿಂದ ಓಡಾಟ ಮಾಡಬಹುದು. ತುಮಕೂರಿನ ಜತೆ ಸಂಬಂಧವು ಚೆನ್ನಾಗಿದೆ' ಎಂದರು.

'ನಾನು ವರ್ಷದ 365ದಿನವೂ ರಾಜಕಾರಣ ಮಾಡುತ್ತೇನೆ. ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಈ ಬಾರಿ ಚುನಾವಣೆಯಲ್ಲಿ ಸೋತ ಕಾರಣದಿಂದ ಸ್ವಲ್ಪ ಸೋಂಬೇರಿ ಆಗಿದ್ದೇನೆ' ಎಂದರು.

'ಅಂಬೇಡ್ಕರ್ ಭವನಗಳಂತೆ ಬಸವ ಭವನ ನಿರ್ಮಿಸಬೇಕು'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಅಂಬೇಡ್ಕರ್ ಭವನಗಳ ಹಾಗೆ ಎಲ್ಲಾ ಜಿಲ್ಲೆಗಳಲ್ಲೂ ಬಸವ ಭವನಗಳನ್ನು ನಿರ್ಮಿಸಬೇಕು' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಆಗ್ರಹಿಸಿದರು.

ನಗರದಲ್ಲಿ ಶನಿವಾರ ನಡೆದ 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಬಸವಣ್ಣನವರ ಭಾವಚಿತ್ರ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪ್ರತಿ ಜಿಲ್ಲೆಯಲ್ಲೂ ಬಸವ ಭವನ ನಿರ್ಮಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದೇವೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸದ್ಯದಲ್ಲೇ ಬೇಡಿಕೆ ಈಡೇರುವ ವಿಶ್ವಾಸವಿದೆ' ಎಂದರು.

'ಬಸವಣ್ಣ ಅವರನ್ನು 'ಸಾಂಸ್ಕೃತಿಕ ನಾಯಕ' ಎಂದು ಘೋಷಿಸುವಂತೆ ದಾವಣಗೆರೆಯಲ್ಲಿ ನಡೆದ ಮಹಾಸಭಾದ ರಾಷ್ಟ್ರೀಯ ಅಧಿವೇಶನದಲ್ಲಿ ಒತ್ತಾಯಿಸಲಾಗಿತ್ತು. ಸರ್ಕಾರ ನಮ್ಮ ಬೇಡಿಕೆ ಈಡೇರಿಸಿದೆ. ಇದಕ್ಕಾಗಿ ಶೀಘ್ರವೇ ಬಸವಕಲ್ಯಾಣದಲ್ಲಿ ಕಾರ್ಯಕ್ರಮ ನಡೆಸಿ ಮುಖ್ಯಮಂತ್ರಿಯವರನ್ನು ಗೌರವಿಸಲಾಗುವುದು' ಎಂದು ಹೇಳಿದರು.

ಆಶಾಕಿರಣ: ಇಂದು ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಎಲ್ಲ ವಯಸ್ಸಿನವರಿಗೆ ಕಣ್ಣಿನ ತಪಾಸಣೆ ಮಾಡುವ 'ಆಶಾಕಿರಣ' 2ನೇ ಹಂತದ ಕಾರ್ಯಕ್ರಮಕ್ಕೆ ಫೆ. 18ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾವೇರಿಯಲ್ಲಿ ಚಾಲನೆ ನೀಡಲಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡನೇ ಹಂತದಲ್ಲಿ ಚಿತ್ರದುರ್ಗ, ಮಂಡ್ಯ, ರಾಯಚೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಪಾಸಣಾ ಅಭಿಯಾನ ನಡೆಯಲಿದೆ ಎಂದರು.

'ಮೊದಲ ಹಂತದಲ್ಲಿ ಚಿಕ್ಕಬಳ್ಳಾಪುರ, ಕಲಬುರಗಿ, ಹಾವೇರಿ, ಚಾಮರಾಜನಗರ ಜಿಲ್ಲೆಗಳಲ್ಲಿ ಒಟ್ಟು 56.59 ಲಕ್ಷ ಜನರನ್ನು ತಪಾಸಣೆ ಮಾಡಲಾಗಿದ್ದು, ಇವರಲ್ಲಿ 8.28 ಲಕ್ಷ ಜನರಿಗೆ ನೇತ್ರ ಸಂಬಂಧಿ ತೊಂದರೆ ಇರುವುದು ಗಮನಕ್ಕೆ ಬಂದಿದೆ. ದ್ವಿತೀಯ ಹಂತದ ತಪಾಸಣೆಗೆ ಒಳಪಡಿಸಿದಾಗ 2.45 ಲಕ್ಷ ಮಂದಿಗೆ ದೃಷ್ಟಿದೋಷ ಕಂಡುಬಂದಿದ್ದು, ಅವರಿಗೆ ಉಚಿತವಾಗಿ ಕನ್ನಡಕಗಳನ್ನು ಒದಗಿಸಲಾಗುತ್ತದೆ. 39,336 ಜನರಿಗೆ ಕಣ್ಣಿನ ಪೊರೆ ಸಮಸ್ಯೆ ಇರುವುದು ಕಂಡುಬಂದಿದ್ದು, ಅವರಿಗೆ ಸರ್ಕಾರಿ ಆಸ್ಪತ್ರೆ ಅಥವಾ ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳ ಆಸ್ಪತ್ರೆಗಳಲ್ಲಿ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಿಸಲಾಗುತ್ತದೆ. ಬರುವ ದಿನಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಈ ಯೋಜನೆ ವಿಸ್ತರಿಸಲಾಗುವುದು' ಎಂದು ಹೇಳಿದರು.

ಜೆರೋಸಾ: ತನಿಖೆಗೆ ಐಎಎಸ್ ಅಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಸೇಂಟ್ ಜೆರೋಸಾ ಶಾಲೆಯಲ್ಲಿ ಶಿಕ್ಷಕಿಯೊಬ್ಬರು ಧರ್ಮ ನಿಂದನೆ ಮಾಡಿದ್ದಾರೆ ಎನ್ನಲಾದ ಪ್ರಕರಣ ಹಾಗೂ ಅದರ ನಂತರದ ಬೆಳವಣಿಗೆಗಳ ಕುರಿತು ಸಮಗ್ರ ತನಿಖೆ ನಡೆಸಲು ಐಎಎಸ್ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ವಿಭಾಗದ ಹೆಚ್ಚುವರಿ ಆಯುಕ್ತ ಆಕಾಶ್ ಎಸ್. ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ. ಈ ಸಂಬಂಧ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದ್ದು, ಶೀಘ್ರ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ' ಎಂದು ಅವರು ತಿಳಿಸಿದರು.

'ಶಿಕ್ಷಕಿ ಪಾಠ ಮಾಡುವಾಗ ಹಿಂದೂ ಧರ್ಮದ ಬಗ್ಗೆ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ ಇಲ್ಲಿನ ಶಾಸಕರು, ಮಕ್ಕಳನ್ನು ಬೀದಿಯಲ್ಲಿ ನಿಲ್ಲಿಸಿ ಪ್ರತಿಭಟನೆ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ಕೆಟ್ಟ ಹೆಸರು ತರುವ ಇದು ಒಳ್ಳೆಯ ಬೆಳವಣಿಗೆ ಅಲ್ಲ. ಘಟನೆ ಸಂಬಂಧ ದೂರು ಬಂದ ಹಿನ್ನೆಲೆಯಲ್ಲಿ ಶಾಸಕರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಬಿಜೆಪಿಯವರು ಹೇಳಿದಾಕ್ಷಣ ಪ್ರಕರಣ ಹಿಂಪಡೆಯಲಾಗದು. ತನಿಖೆ ನಡೆಯುತ್ತಿದ್ದು, ತಪ್ಪು ಎಸಗಿದ್ದು ದೃಢಪಟ್ಟರೆ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ' ಎಂದು ಸಚಿವರು ಪ್ರತಿಕ್ರಿಯಿಸಿದರು.

ಶಿಕ್ಷಕಿಗೆ ಸಿಆರ್‌ಐ ಬೆಂಬಲ

ಮಂಗಳೂರು: ಕಾನ್ಫರೆನ್ಸ್ ಆಫ್ ರಿಲೀಜಿಯಸ್ ಇಂಡಿಯಾ (ಸಿಆರ್‌ಐ) ಮಂಗಳೂರು ಘಟಕದ ಅಡಿಯಲ್ಲಿ ಬರುವ ಎಲ್ಲ ಕಥೋಲಿಕ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಸಿಸ್ಟರ್‌ಗಳು ಸೇರಿದಂತೆ 300ಕ್ಕೂ ಹೆಚ್ಚು ಜನರು ಸೇಂಟ್ ಜೆರೋಸಾ ಶಾಲೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕಿಯ ಜೊತೆಗಿರುವುದಾಗಿ ಹೇಳಿದ್ದಾರೆ.

ಶನಿವಾರ ಇಲ್ಲಿನ ಸೇಂಟ್ ಅಲೋಶಿಯಸ್ ಪ್ರೌಢಶಾಲೆಯ ಸಭಾಭವನದಲ್ಲಿ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಆರ್‌ಐ ಮಂಗಳೂರು ಘಟಕದ ಅಧ್ಯಕ್ಷೆ ಸಿಸ್ಟರ್ ಸೆವರಿನ್ ಅವರು, 'ಶಾಲೆಯ ಇಂಗ್ಲಿಷ್ ಶಿಕ್ಷಕಿ ವಿರುದ್ಧ ಆಧಾರರಹಿತ ಆರೋಪ ಮಾಡಲಾಗಿದೆ. ಶಿಕ್ಷಕಿ ವಿರುದ್ಧ ಪ್ರತಿಭಟನೆ ನಡೆಸುವ ವೇಳೆ ಸ್ಥಳೀಯ ಶಾಸಕ ವೇದವ್ಯಾಸ ಕಾಮತ್ ಅವರು ಜನಪ್ರತಿನಿಧಿಯಾಗಿ, ದ್ವೇಷದ ವಾತಾವರಣ ಸೃಷ್ಟಿಸಿದ್ದು ಖಂಡನೀಯ' ಎಂದರು.

'ವಿನಾಕಾರಣ ಆರೋಪದಿಂದ ನೊಂದಿರುವ ಶಾಲೆಯ ಶಿಕ್ಷಕಿ, ಮಕ್ಕಳು, ಶಾಲೆಯ ಆಡಳಿತ ಮಂಡಳಿ ಜೊತೆ ಸಿಆರ್‌ಐ ನಿಲ್ಲುತ್ತದೆ. ನ್ಯಾಯದ ಪರ ನಿಂತ ಶಾಲೆಯ ಬದ್ಧತೆಯನ್ನು ಬೆಂಬಲಿಸುತ್ತದೆ. ಘಟನೆ ಬಗ್ಗೆ ಸಮಗ್ರ ತನಿಖೆ ನಡೆದು, ಸತ್ಯಾಂಶ ಹೊರಬರಬೇಕು. ಈ ಕುರಿತು ಮುಖ್ಯಮಂತ್ರಿ ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು' ಎಂದರು.

'ಸಮಾಜದ ಉದ್ಧಾರಕ್ಕಾಗಿ ಕೆಲಸ ಮಾಡುವ ನಮಗೆ ಸಮಾಜವೇ ಕುಟುಂಬವಿದ್ದಂತೆ. ಜೊತೆಗಿರುವ ಸಮಾಜವೇ ನಮ್ಮ ಬೆನ್ನಿಗೆ ಚೂರಿ ಚುಚ್ಚಿದ್ದು ತುಂಬಾ ನೋವುಂಟು ಮಾಡಿದೆ. ತಪ್ಪುದಾರಿಗೆಳೆಯುವ ಸಂದೇಶವನ್ನು ಸಾಮಾಜಿಕ ಮಾಧ್ಯಮದ ಮೂಲಕ ಹರಿಯಬಿಡುವುದರಿಂದ ಪ್ರಕರಣ ಆರಂಭವಾಯಿತು. ಜೆರೋಸಾ ಶಾಲೆಯ ಇಂಗ್ಲಿಷ್ ಶಿಕ್ಷಕಿ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂಬ ಆರೋಪ ಬಂದಾಗ, ವಿಚಾರಣೆ ನಡೆಸುವುದಾಗಿ ಮುಖ್ಯ ಶಿಕ್ಷಕಿ ಪೋಷಕರಿಗೆ ಭರವಸೆ ನೀಡಿದರೂ ಫೆ.12ರಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದಾಗ ಪರಿಸ್ಥಿತಿ ವಿಕೋಪಕ್ಕೆ ಹೋಯಿತು' ಎಂದು ತಿಳಿಸಿದರು.

ಸಿಆರ್‌ಐ ಕಾರ್ಯದರ್ಶಿ ನಾನ್ಸಿ, ಪ್ರಮುಖರಾದ ಮೆಲ್ವಿನ್ ಪಿಂಟೊ, ಜೆ.ಬಿ. ಸಲ್ಡಾನ, ರಾಯ್ ಕ್ಯಾಸ್ತಲಿನೊ, ಸಂದೀಪ್ ಪೌಲ್, ವಿನೋದ್ ಮಸ್ಕರೇನಸ್ ಇದ್ದರು

ರಾಜಕೀಯ ಭಾಷಣ: ವಸಂತಕುಮಾರ್ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕೀಯ, ಚುನಾವಣಾ ಫಲಿತಾಂಶದ ಬಗ್ಗೆ ಮಾತನಾಡಿದ ಆರೋಪದ ಮೇಲೆ ಮೈಸೂರು ಮಹಾರಾಣಿ ಮಹಿಳಾ ಕಾಲೇಜು ಪ್ರಾಂಶುಪಾಲರಾಗಿದ್ದ ಬಿ.ವಿ.ವಸಂತಕುಮಾರ್ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ.



ಈ ಕುರಿತು ಮೈಸೂರು ಪ್ರಾದೇಶಿಕ ಕಚೇರಿ ಜಂಟಿ ನಿರ್ದೇಶಕರಿಗೆ ಲಿಖಿತ ಸೂಚನೆ ನೀಡಿರುವ ಕಾಲೇಜು ಶಿಕ್ಷಣ ಇಲಾಖೆ ಮುಖ್ಯ ಆಡಳಿತಾಧಿಕಾರಿ, ತಕ್ಷಣ ಅವರನ್ನು ಪ್ರಾಂಶುಪಾಲರ ಜವಾಬ್ದಾರಿಯಿಂದ ಬಿಡುಗಡೆ ಮಾಡಬೇಕು. ಅವರ ಸ್ಥಾನಕ್ಕೆ ಕಾಲೇಜಿನಲ್ಲಿ ಸೇವಾ ಜ್ಯೇಷ್ಠತೆ ಹೊಂದಿರುವ ಹಿರಿಯ ಪ್ರಾಧ್ಯಾಪಕರಿಗೆ ಪ್ರಭಾರ ವಹಿಸಬೇಕು ಎಂದು ಸೂಚಿಸಿದ್ದಾರೆ.

ಕಾಲೇಜಿನ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಹಾಗೂ ಹಾಸ್ಟೆಲ್‌ನ ₹10 ಲಕ್ಷಕ್ಕೂ ಹೆಚ್ಚು ಹಣ ದುರುಪಯೋಗ ಮಾಡಲಾಗಿದೆ ಎಂಬ ಆರೋಪವು ಅವರ ಮೇಲಿದೆ.

'ವಿದ್ಯಾರ್ಥಿವೇತನದ ಹಣ ದುರುಪಯೋಗವಾಗಿಲ್ಲ. 2014–15ರಿಂದ 2018–19ನೇ ಸಾಲಿನವರೆಗೆ 472 ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆದಿರಲಿಲ್ಲ.ತಾವು ಪ್ರಾಂಶುಪಾಲರಾದ ನಂತರ ವಿದ್ಯಾರ್ಥಿ ವೇತನ ಪಡೆಯದ ವಿದ್ಯಾರ್ಥಿಗಳಿಗೆ ಪತ್ರ ಬರೆಯಲಾಗಿತ್ತು. ಅವರಲ್ಲಿ 51 ವಿದ್ಯಾರ್ಥಿಗಳಿಗೆ ₹72,386 ಪಾವತಿಸಲಾಗಿದೆ. ಬಾಕಿ ₹11.50 ಲಕ್ಷ ಖಾತೆಯಲ್ಲೇ ಇದೆ' ಎಂದು ವಸಂತಕುಮಾರ್ ಅವರು ಇಲಾಖೆ ಆಯುಕ್ತರಿಗೆ ಉತ್ತರ ನೀಡಿದ್ದರು.

ಬಿಜೆಪಿಯ ವಿದ್ಯಾರ್ಥಿ ಸಂಘಟನೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷರೂ ಆಗಿದ್ದ ವಸಂತಕುಮಾರ್, ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು.

21ರಂದು ಕಾನೂನು ತಜ್ಞರ ಜೊತೆ ಸಭೆ: ಸಿ.ಎಂ ಶಿಂದೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಪ್ರಕರಣ ಸಂಬಂಧ ಮುಂಬೈನಲ್ಲಿ ಫೆಬ್ರುವರಿ 21ರಂದು ಕಾನೂನು ಪರಿಣತರ ತಂಡದೊಂದಿಗೆ ಸಭೆ ನಡೆಸಲು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನಿರ್ಧರಿಸಿದ್ದಾರೆ. ಕೊಲ್ಹಾಪುರದಲ್ಲಿ ಅವರನ್ನು ಶುಕ್ರವಾರ ಬೆಳಗಾವಿಯ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಿಯೋಗ ಭೇಟಿಯಾಗಿದೆ.

'ಗಡಿ ತಕರಾರು ಈಗಾಗಲೇ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಗಡಿ ಪ್ರದೇಶ ಗಳಲ್ಲಿ ಕನ್ನಡ ಭಾಷೆ ಹೇರುತ್ತಿರುವ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವ ಸಂಬಂಧ ಪರಿಶೀಲಿಸುವುದಾಗಿ ಶಿಂದೆ ತಿಳಿಸಿದ್ದಾರೆ' ಎಂದು ಎಂಇಎಸ್ ಮುಖಂಡರು ಹೇಳಿದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2022ರ ಡಿಸೆಂಬರ್ 22ರಂದು ಅಂದಿನ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರೊಂದಿಗೆ ಸಭೆ ನಡೆಸಿದ್ದರು. ಪ್ರತಿ ರಾಜ್ಯದಿಂದ ಮೂವರು ಸಚಿವರ ಸಮಿತಿ ರಚಿಸಿ, ನ್ಯಾಯಾಲಯದಲ್ಲಿರುವ ಮೊಕದ್ದಮೆ ಇತ್ಯರ್ಥ ಆಗುವವರೆಗೆ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಿ ಎಂದು ಸೂಚಿಸಿದ್ದರು. ಆದರೆ, ಯಾವುದೇ ಪ್ರಗತಿಯಾಗಿಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಫೆಬ್ರುವರಿ 21ರಂದು ನಡೆಯುವ ಸಭೆಯಲ್ಲಿ ಮುಖ್ಯಮಂತ್ರಿ ಶಿಂದೆ ಅವರು ವಕೀಲರಾದ ವೈದ್ಯನಾಥನ್ ಮತ್ತು ಶಿವಾಜಿ ಜಾಧವ್ ಅವರೊಂದಿಗೆ ಚರ್ಚಿಸುವರು. ಎಂಇಎಸ್ ನಿಯೋಗವೂ ಹಾಜರಾಗಬಹುದು. ಹಿರಿಯ ವಕೀಲ ಹರೀಶ್ ಸಾಳ್ವೆ ಅವರಿಂದ ಮಾರ್ಗದರ್ಶನ ಪಡೆಯಲು ಪ್ರಯತ್ನಿಸುತ್ತೇವೆ' ಎಂದರು.

ಗಡಿ ಸಮನ್ವಯ ಸಚಿವ ಶಂಭುರಾಜ ದೇಸಾಯಿ, ಎಂಇಎಸ್ ಪ್ರಧಾನ ಕಾರ್ಯದರ್ಶಿ ಮಾಲೋಜಿ ಅಷ್ಟೇಕರ, ಖಜಾಂಚಿ ಪ್ರಕಾಶ ಮರಗಾಲೆ, ಎಂ.ಜಿ. ಪಾಟೀಲ, ಗೋಪಾಲ ದೇಸಾಯಿ, ವಿಲಾಸ ಬೆಳಗಾಂವಕರ ಇದ್ದರು.

ವಿರಳ ಬಾಂಬೆ ರಕ್ತ ಗುಂಪಿನ ದಾನಿ

• ಚಂದ್ರಶೇಖರ ಕೋಳೇಕರ

ನಿಡಗುಂದಿ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಯಲಗೂರ ಗ್ರಾಮದ ವಾಹನ ಚಾಲಕ ಮಹಾಂತೇಶ ತುಂಬರಮಟ್ಟಿ (26) ಎಂಬುವರು ವಿಶ್ವದಲ್ಲೇ ವಿರಳವಾದ ಬಾಂಬೆ ರಕ್ತದ ಗುಂಪನ್ನು ಹೊಂದಿದ್ದಾರೆ.

5 ಲಕ್ಷ ಜನರಲ್ಲಿ 10 ಜನರಲ್ಲಿ ಮಾತ್ರ ಈ ರೀತಿ ಬಾಂಬೆ ರಕ್ತ ಇರುತ್ತದೆ. ಈ ಗುಂಪಿನ ರಕ್ತದವರಿಗೆ ಬೇರೆ ಗುಂಪಿನ ರಕ್ತ ಹೊಂದಾಣಿಕೆ ಆಗುವುದಿಲ್ಲ. ಹೀಗಾಗಿ ಈ ಗುಂಪು ಸಿಗುವುದು ಅಪರೂಪ.

ಗೊತ್ತಾಗಿದ್ದು ಹೇಗೆ?: ಒಂದು ವರ್ಷದ ಹಿಂದೆ ಬಾಗಲಕೋಟೆಯ ಕುಮಾರೇಶ್ವರ ಆಸ್ಪತ್ರೆಗೆ ತೆರಳಿ ಸಂಬಂಧಿಕರೊಬ್ಬರಿಗೆ ಮಹಾಂತೇಶ ರಕ್ತದಾನ ಮಾಡಿದ್ದರು. ರಕ್ತ ಪರೀಕ್ಷಿಸಿದ್ದ ವೈದ್ಯರು 'ನಿಮ್ಮ ರಕ್ತ ವಿಶೇಷವಾಗಿದೆ' ಎಂದಿದ್ದರು.



ಮಹಾಂತೇಶ ತುಂಬರಮಟ್ಟಿ

'ಬಾಗಲಕೋಟೆಯ ಕುಮಾರೇಶ್ವರ ಆಸ್ಪತ್ರೆಯಲ್ಲಿ ಈಚೆಗೆ ದಾಖಲಾಗಿದ್ದ 15 ವರ್ಷದ ಬಾಲಕಿಗೆ ಬಾಂಬೆ ರಕ್ತ ಗುಂಪಿನ ರಕ್ತದ ಅವಶ್ಯಕತೆ ಉಂಟಾದಾಗ, ತಕ್ಷಣ ಮಹಾಂತೇಶ ಅವರಿಗೆ ಕರೆ ಮಾಡಲಾಗಿದೆ. ಆಗ ತಕ್ಷಣವೇ ಅವರು ಆಸ್ಪತ್ರೆಗೆ ಬಂದು ರಕ್ತದಾನ ಮಾಡಿದ್ದಾರೆ. ಒಂದು ವೇಳೆ ಬಾಂಬೆ ರಕ್ತ ಗುಂಪಿನ ದಾನಿ ಸಿಕ್ಕಿರದಿದ್ದರೆ, ಆ ಬಾಲಕಿಗೆ ತುಂಬಾ ಕಷ್ಟವಾಗುತಿತ್ತು' ಎಂದು ಗ್ರಾಮಸ್ಥರು ತಿಳಿಸಿದರು.

ಬಾಂಬೆ ರಕ್ತದ ಗುಂಪು: ರಕ್ತದಲ್ಲಿ 'ಎ', 'ಬಿ', 'ಎಬಿ' ಮತ್ತು 'ಒ' ಎಂಬ ನಾಲ್ಕು ಗುಂಪುಗಳಿವೆ. 'ಎಚ್ –ಆಂಟಿಜನ್' ಎಂಬುದು ಎಲ್ಲದರಲ್ಲೂ ಬಾಂಬೆ ರಕ್ತ ಗುಂಪಿನಲ್ಲಿ 'ಎಚ್-ಪ್ರತಿಜನಕ' ಇರುವುದಿಲ್ಲ. ಆದರೆ, 'ಎಚ್' ವಿರೋಧಿ ಪ್ರತಿಕಾಯಗಳು ಇರುತ್ತವೆ. ಈ ರಕ್ತವು 'ಒ' ರಕ್ತದ ಗುಂಪಿನ ವ್ಯಾಪ್ತಿಯೊಳಗೆ ಬರುತ್ತದೆ. ಆದರೆ, 'ಒ' ಗುಂಪಿನ ರಕ್ತದೊಂದಿಗೆ ಹೊಂದಾಣಿಕೆ ಆಗುವುದಿಲ್ಲ. ಹೀಗಾಗಿ ಇದು ತುಂಬಾ ಅಪರೂಪ' ಎಂದು ಕುಮಾರೇಶ್ವರ ರಕ್ತ ಭಂಡಾರದ ಮುಖ್ಯಸ್ಥ ಡಾ. ಕೇಶವ ಕುಲಕರ್ಣಿ 'ಪ್ರಜಾವಾಣಿ'ಗೆ ತಿಳಿಸಿದರು.

ಮಹಾಂತೇಶ ತುಂಬರಮಟ್ಟಿ ಅವರ ದೂರವಾಣಿ ಸಂಖ್ಯೆ: 9901516100

ಸ್ಮಶಾನ ವಿವಾದ: ಬೆಳಗಾವಿಯ ಕವಳೇವಾಡಿ ಗ್ರಾಮದಲ್ಲಿ ಘಟನೆ


ಮಹಿಳೆಯರಿಂದಲೇ ಶವದ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಕವಳೇವಾಡಿ ಗ್ರಾಮದಲ್ಲಿ ಶನಿವಾರ ಮಹಿಳೆಯರೇ ವ್ಯಕ್ತಿಯೊಬ್ಬರ ಅಂತ್ಯಕ್ರಿಯೆ ನೆರವೇರಿಸಿದ್ದಾರೆ. ಸ್ಮಶಾನದ ಜಮೀನು ವಿವಾದಕ್ಕೆ ಒಳಪಟ್ಟಿದ್ದರಿಂದ ಪುರುಷರು ಹಿಂಜರಿದರು.

ಕವಳೇವಾಡಿಯ ತುಕಾರಾಮ್ ಮೋರೆ ಅವರು ಅನಾರೋಗ್ಯದ ಕಾರಣ ಶುಕ್ರವಾರ ರಾತ್ರಿ ನಿಧನರಾದರು. ಸ್ಮಶಾನ ಭೂಮಿ ಇಲ್ಲದ ಕಾರಣ ಗ್ರಾಮಸ್ಥರು ಓಮನಿ ಗಾವಡೆ ಎಂಬುವರ ಜಾಗದಲ್ಲಿ ಅಂತ್ಯಕ್ರಿಯೆ ನೆರವೇರಿಸಲು ಮುಂದಾದರು. ಆದರೆ, ಓಮನಿ ಗಾವಡೆ ಇದಕ್ಕೆ ವಿರೋಧ ವ್ಯಕ್ತಪಡಿಸಿದರು.

ಇದರಿಂದ ಸಿಟ್ಟಿಗೆದ್ದ ಗ್ರಾಮಸ್ಥರು ಅಲ್ಲಿಯೇ ಶವ ಇಟ್ಟು ಪ್ರತಿಭಟನೆ ನಡೆಸಿದರು. ಗ್ರಾಮದ ಹಿರಿಯರು ಮತ್ತು ಪೊಲೀಸರು ಸಂಧಾನ ನಡೆಸಿದರೂ ಫಲಕಾರಿ ಆಗಲಿಲ್ಲ. ಇದರಿಂದ ಬೇಸತ್ತ ಗ್ರಾಮಸ್ಥರು ಶವವನ್ನು ಅಲ್ಲೇ ಬಿಟ್ಟು ಮನೆಗೆ ತೆರಳಿದರು.



ಬೆಳಗಾವಿ ತಾಲ್ಲೂಕಿನ ಕವಳೇವಾಡಿ ಗ್ರಾಮದಲ್ಲಿ ಶನಿವಾರ ಮಹಿಳೆಯರೇ ವ್ಯಕ್ತಿಯ ಶವದ ಅಂತ್ಯಕ್ರಿಯೆ ನೆರವೇರಿಸಿದರು

ಆದರೆ, ಊರಿನ ಮಹಿಳೆಯರೆಲ್ಲ ಒಂದಾಗಿ ಮಂತ್ರಗಳನ್ನು ಹೇಳಿ, ಪೂಜೆ ಸಲ್ಲಿಸುವ ಮೂಲಕ ಅಂತ್ಯಕ್ರಿಯೆಗೆ ಮುಂದಾದರು. ಚಿತೆಯ ಮೇಲೆ ಶವ ಇಟ್ಟು ಅಗ್ನಿಸ್ಪರ್ಶ ಮಾಡಿದರು. ಆಗಲೂ ಓಮನಿ ಗಾವಡೆ ತೀವ್ರ ಆಕ್ಷೇಪಿಸಿದರು. ಆದರೆ, ಶವ ಸಂಪೂರ್ಣ ಭಸ್ಮ ಆಗುವವರೆಗೂ ಮಹಿಳೆಯರು ಸ್ಥಳದಲ್ಲೇ ಉಳಿದರು. ಮೃತ ವ್ಯಕ್ತಿಯ ಪುತ್ರಿ ಕೂಡ ಇದ್ದರು.

ನಂತರ ಸುದ್ದಿಗಾರರ ಜೊತೆ ಲಕ್ಷ್ಮಿ ಯಶವಂತಪುರಿ ಮಾತನಾಡಿ, 'ಹಿರಿಯರ ಕಾಲದಿಂದ ಇದೇ ಜಾಗದಲ್ಲಿ ಅಂತ್ಯಕ್ರಿಯೆ ಮಾಡುತ್ತಿದ್ದೇವೆ. ಊರಲ್ಲಿ ಯಾರೇ ನಿಧನರಾದರೂ ಒಂದೇ ಜಾಗದಲ್ಲಿ ಹೂಳುವುದು, ಸುಡುವುದು ನಡೆದಿದೆ. ಈಗ ಓಮನಿ ಗಾವಡೆ ಅವರ ಅದು ತಮ್ಮ ಜಮೀನು, ಅಲ್ಲಿ ಅಂತ್ಯಕ್ರಿಯೆ ಮಾಡುವಂತಿಲ್ಲ ಎನ್ನುತ್ತಾರೆ. ಹೀಗೆ ಏಕಾಏಕಿ ವಿರೋಧಿಸಿದರೆ, ಶವಗಳನ್ನು ಮನೆಯಲ್ಲಿ ಇಟ್ಟುಕೊಳ್ಳಬೇಕೇ? ಜಿಲ್ಲಾಧಿಕಾರಿ ಇದಕ್ಕೆ ಪರಿಹಾರ ಹುಡುಕಬೇಕು' ಎಂದರು.

'ಹಲವು ವರ್ಷಗಳಿಂದ ಗಾವಡೆ ಅವರ ಜಮೀನಿನಲ್ಲೇ ಅಂತ್ಯಕ್ರಿಯೆ ನೆರವೇರಿಸಲಾಗುತ್ತಿದೆ. ಇದನ್ನು ವಿರೋಧಿಸಿ ಗಾವಡೆ ಅವರು ನ್ಯಾಯಾಲಯ ಮೊರೆ ಹೋಗಿದ್ದರು. ಸ್ಮಶಾನದ ಜಮೀನು ಗಾವಡೆ ಅವರಿಗೆ ಸೇರಿದೆ ಎಂದು ನ್ಯಾಯಾಲಯ ಈಚೆಗೆ ಆದೇಶ ನೀಡಿದೆ. ಹೀಗಾಗಿ, ವಿವಾದವಾಗಿದೆ' ಎಂದು ಗ್ರಾಮಸ್ಥರು ತಿಳಿಸಿದರು.

ಪುತ್ರ ನಕುಲ್‌ನಾಥ್ ಜೊತೆ ದೆಹಲಿಯಲ್ಲಿರುವ ಕಾಂಗ್ರೆಸ್‌ನ ಹಿರಿಯ ನಾಯಕ

ಕೇಸರಿ ಪಾಳಯಕ್ಕೆ ಕಮಲ್‌ನಾಥ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್‌ನ ಹಿರಿಯ ನಾಯಕ ಕಮಲ್‌ನಾಥ್ ಮತ್ತು ಸಂಸದರಾದ ಅವರ ಪುತ್ರ ನಕುಲ್‌ನಾಥ್ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂಬ ಊಹಾಪೋಹಗಳು ದಟ್ಟವಾಗಿವೆ.

ಕಮಲ್‌ನಾಥ್ ಅವರು ಶನಿವಾರ ನವದೆಹಲಿಗೆ ಬಂದಿರುವುದು ಹಾಗೂ ನಕುಲ್ ಅವರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಿಂದ ಕಾಂಗ್ರೆಸ್ ಉಲ್ಲೇಖವನ್ನು ಕೈಬಿಟ್ಟಿರುವುದು ಇದಕ್ಕೆ ಇನ್ನಷ್ಟು ಪುಷ್ಟಿ ನೀಡಿದೆ.

ಕಾಂಗ್ರೆಸ್‌ನ 66 ಮಂದಿ ಶಾಸಕರಲ್ಲಿ ಕನಿಷ್ಠ 12 ಮಂದಿ ತಮ್ಮ ಜೊತೆಗಿದ್ದಾರೆ ಎಂದು ಕಮಲ್‌ನಾಥ್ ಹೇಳಿದ್ದಾರೆ.

ಒಂದು ವೇಳೆ ಕಮಲ್‌ನಾಥ್ ಅವರು ಬಿಜೆಪಿಗೆ ಸೇರ್ಪಡೆಗೊಂಡರೆ, ಒಂದು ತಿಂಗಳಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರಿದ ಎರಡನೇ ಮಾಜಿ ಮುಖ್ಯಮಂತ್ರಿಯಾಗಲಿದ್ದಾರೆ. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಶೋಕ್ ಚವ್ಹಾಣ್ ಅವರು ಈಚೆಗೆ ಬಿಜೆಪಿಗೆ ಸೇರ್ಪಡೆಯಾಗಿದ್ದು ಅವರಿಗೆ ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಲಾಗಿದೆ.



ಕಮಲನಾಥ್

ಬಿಜೆಪಿಗೆ ಸೇರುವ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕಮಲ್‌ನಾಥ್, 'ಹಾಗೇನಾದರೂ ಇದ್ದರೆ ನಾನು ಮೊದಲು ನಿಮಗೆ (ಮಾಧ್ಯಮದವರಿಗೆ) ತಿಳಿಸುತ್ತೇನೆ' ಎಂದರು.

ಕಮಲ್‌ನಾಥ್ ಬಿಜೆಪಿಗೆ ಸೇರುತ್ತಾರೆ ಎಂಬುದು ಸುಳ್ಳು ಸುದ್ದಿ ಎಂದು ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಕಾರ್ಯದರ್ಶಿ ತೇಜಿಂದರ್ ಬಗ್ಗಾ ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.

'ಕಮಲ್‌ನಾಥ್ ಬಿಜೆಪಿಗೆ ಸೇರಲಿದ್ದಾರೆ ಎಂಬ ಸುದ್ದಿ ಆಧಾರ ರಹಿತವಾದುದು' ಎಂದು ಮಧ್ಯಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಜಿತು ಪಟ್ವಾರಿ ತಿಳಿಸಿದ್ದಾರೆ.

ಕಮಲ್‌ನಾಥ್ ಮೊದಲ ಬಾರಿ ಚುನಾವಣೆಗೆ ಸ್ಪರ್ಧಿಸಿದ್ದ ವೇಳೆ ಇಂದಿರಾ ಗಾಂಧಿ ಅವರು, ಕಮಲ್‌ನಾಥ್ ನನ್ನ ಮೂರನೇ ಮಗನಿದ್ದಂತೆ ಎಂದು ಹೇಳಿದ್ದರು. ಇಂದಿರಾ ಗಾಂಧಿ ಅವರ ಮೂರನೇ ಮಗ ಕಾಂಗ್ರೆಸ್ ತೊರೆಯುತ್ತಾರೆಂದು ನಿಮಗೆ ಅನ್ನಿಸುತ್ತಿದೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

'ಕಮಲ್‌ನಾಥ್ ಅವರೊಂದಿಗೆ ನಾನು ಮಾತನಾಡಿದ್ದೇನೆ. ನೆಹರೂ–ಗಾಂಧಿ ಕುಟುಂಬದ ಜೊತೆಗೆ ರಾಜಕೀಯ ಪಯಣ ಆರಂಭಿಸಿರುವ ಅವರು ಪಕ್ಷ ಬಿಡಲು ಸಾಧ್ಯವೇ?' ಎಂದು ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ.

ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ಬಳಿಕ ಕಮಲ್‌ನಾಥ್ ಮೇಲೆ ಪಕ್ಷದ ನಾಯಕತ್ವ ಅಸಮಾಧಾನಗೊಂಡಿತ್ತು. ಸೋಲಿಗೆ ಅವರನ್ನೇ ಹೊಣೆಗಾರರನ್ನಾಗಿ ಮಾಡಲಾಗಿತ್ತು.

ಚುನಾವಣೆಯ ವೇಳೆ, ಚುನಾವಣಾ ಕಾರ್ಯತಂತ್ರ ನಿಪುಣ ಸುನೀಲ್ ಕನುಗೋಲು ಅವರ ತಂಡವನ್ನು ದೂರವಿರಿಸಿದ್ದಾರೆ ಎಂಬ ಆರೋಪವೂ ಅವರ ವಿರುದ್ಧ ಕೇಳಿ ಬಂದಿತ್ತು.

2020ರಲ್ಲಿ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ಅವರ ಆಪ್ತ ಶಾಸಕರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡ ಕಾರಣ ಮಧ್ಯಪ್ರದೇಶದಲ್ಲಿ ಕಮಲ್‌ನಾಥ್ ಅವರ ಸರ್ಕಾರ ಪತನಗೊಂಡಿತ್ತು.

ಸಂತ್ರಸ್ತರಿಗೆ ಆಶ್ರಯ: ರಾಜ್ಯಪಾಲ

ಕೋಲ್ಕತ್ತ (ಪಿಟಿಐ): ಸಂದೇಶ್‌ಖಾಲಿ ದೌರ್ಜನ್ಯ ಪ್ರಕರಣದ ಸಂತ್ರಸ್ತ ಮಹಿಳೆಯರಿಗೆ ರಾಜಭವನದ ಬಾಗಿಲು ಸದಾ ತೆರೆದಿರುತ್ತದೆ ಎಂದು ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಶನಿವಾರ ಹೇಳಿದರು.

ಮಹಿಳೆಯರ ರಕ್ಷಣೆಗಾಗಿ ತಮ್ಮ ಅಧಿಕಾರವನ್ನು ಬಳಸಿ ಏನು ಮಾಡಲು ಸಾಧ್ಯವೊ ಅದನ್ನು ಮಾಡಲು ಸಿದ್ಧ ಎಂದಿದ್ದಾರೆ.

ಸಂದೇಶ್‌ಖಾಲಿಯ ಮಹಿಳೆಯರು ಆಶ್ರಯ ಕೋರಿದರೆ ಅವರಿಗೆ ರಾಜಭವನದಲ್ಲಿ ಆಶ್ರಯ ನೀಡಲಾಗುವುದು ಮತ್ತು ಆಹಾರ, ರಕ್ಷಣೆ ಒದಗಿಸಲಾಗುವುದು ಎಂದು ತಿಳಿಸಿದರು.

ಸಂದೇಶ್‌ಖಾಲಿಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಯೋಗ ಭೇಟಿ

ಕೋಲ್ಕತ್ತ (ಪಿಟಿಐ): ಉತ್ತರ 24 ಪರಗಣ ಜಿಲ್ಲೆಯ ಸಂದೇಶ್ ಖಾಲಿಯಲ್ಲಿ ಮಕ್ಕಳ ಮೇಲೆ ದೌರ್ಜನ್ಯ ನಡೆದಿದೆ ಎಂಬ ದೂರುಗಳು ಬಂದಿರುವ ಕಾರಣ ಪಶ್ಚಿಮ ಬಂಗಾಳದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ (ಡಬ್ಲ್ಯುಬಿಸಿಪಿಸಿಆರ್) ಆರು ಮಂದಿ ಸದಸ್ಯರ ನಿಯೋಗವು ಶನಿವಾರ ಅಲ್ಲಿಗೆ ಭೇಟಿ ನೀಡಿದೆ.

ದುಷ್ಕರ್ಮಿಗಳು ಏಳು ತಿಂಗಳ ಹಸುಳೆಯನ್ನು ತಾಯಿಯ ಮಡಿಲಿನಿಂದ ಎಳೆದು ದೂರ ಎಸೆದಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದರು.

ಆಯೋಗದ ಅಧ್ಯಕ್ಷೆ ತೂಲಿಕಾ ದಾಸ್ ಅವರ ನೇತೃತ್ವದಲ್ಲಿ ನಿಯೋಗವು ಸಂದೇಶ್‌ಖಾಲಿಗೆ ಭೇಟಿ ನೀಡಿದೆ.

'ಸಂದೇಶ್‌ಖಾಲಿಗೆ ಸ್ವಯಂಪ್ರೇರಿತವಾಗಿ ಭೇಟಿ ನೀಡಿದ್ದೇವೆ. ದೌರ್ಜನ್ಯ ಎಸಗಲಾಗಿದೆ ಎನ್ನಲಾದ ಮಗುವಿನ ತಾಯಿಯ ಜೊತೆಗೆ ಮಾತನಾಡಿದ್ದೇವೆ. ಅವರಿಗೆ ಅಗತ್ಯವಿರುವ ವೈದ್ಯಕೀಯ ಸಹಾಯ, ಆಹಾರ ಮತ್ತು ರಕ್ಷಣೆಯನ್ನು ಒದಗಿಸಿದ್ದೇವೆ' ಎಂದು ತೂಲಿಕಾ ದಾಸ್ ಸುದ್ದಿಗಾರರಿಗೆ ತಿಳಿಸಿದರು.

ಟಿಎಂಸಿ ನಾಯಕ ಶಹಜಹಾನ್ ಶೇಖ್ ಹಾಗೂ ಬೆಂಬಲಿಗರು ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಇಲ್ಲಿನ ಮಹಿಳೆಯರು ಪ್ರತಿಭಟನೆ ನಡೆಸುತ್ತಿದ್ದಾರೆ.

ಅತ್ಯಾಚಾರ, ಗರ್ಭಿಣಿಗೆ ಬೆಂಕಿ ಹಚ್ಚಿದ ದುರುಳರು

ಮುರೆನಾ (ಮಧ್ಯಪ್ರದೇಶ, ಪಿಟಿಐ): ಮಧ್ಯಪ್ರದೇಶದ ಮುರೆನಾ ಜಿಲ್ಲೆಯಲ್ಲಿ 34 ವರ್ಷದ ಗರ್ಭಿಣಿಯೊಬ್ಬರ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಎಸಗಿದ ಮೂವರು ದುರುಳರು, ಆಕೆಗೆ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಶೇ 80ರಷ್ಟು ಸುಟ್ಟ ಗಾಯಗಳಿಗೆ ಒಳಗಾದ ಸಂತ್ರಸ್ತೆಯು ಗ್ವಾಲಿಯರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಜೀವನ್ಮರಣದ ಹೋರಾಟ ನಡೆಸಿದ್ದಾರೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ತನ್ನ ಪತಿಯು ಅತ್ಯಾಚಾರ ಎಸಗಿದ್ದ ಮಹಿಳೆ ಜೊತೆ ರಾಜಿ ಮಾಡಿಕೊಳ್ಳಲಿಕ್ಕಾಗಿ, ಸಂತ್ರಸ್ತೆಯು ಆಕೆಯ ಗ್ರಾಮಕ್ಕೆ ಹೋಗಿದ್ದಾಗ ಈ ಘಟನೆ ನಡೆದಿದೆ' ಎಂದು ಅಂಬಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅಲೋಕ್ ಪರಿಹಾರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಮಹಿಳೆಯ ಮನೆಯಲ್ಲಿದ್ದ ಮೂವರು ಪುರುಷರು ಸಂತ್ರಸ್ತೆ ಮೇಲೆ ಅತ್ಯಾಚಾರ ಎಸಗಿದ್ದಾರೆ. ನಂತರ ಎಲ್ಲರೂ ಸೇರಿಕೊಂಡು ಸಂತ್ರಸ್ತೆಗೆ ಇಂಧನ ಸುರಿದು ಬೆಂಕಿ ಹಚ್ಚಿದ್ದಾರೆ' ಎಂದು ಹೇಳಿದ್ದಾರೆ.

ಸಂತ್ರಸ್ತೆಯ ಪತಿ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ.

ಮ್ಯಾಜಿಸ್ಟ್ರೇಟ್ ಬಳಿ ಸಂತ್ರಸ್ತೆಯು ಹೇಳಿಕೆಯನ್ನು ದಾಖಲಿಸಿದ್ದಾರೆ.

'ಆರ್‌ಜೆಡಿ ಅಕ್ರಮಗಳ ತನಿಖೆ'

ವಿಪಕ್ಷಗಳ ನಾಯಕರೊಂದಿಗೆ ಉತ್ತಮ ಸಂಬಂಧ: ನಿತೀಶ್

ಪಟ್ನಾ(ಪಿಟಿಐ): ಆರ್‌ಜೆಡಿ ಜತೆ ಜೆಡಿಯು ಅಧಿಕಾರ ಹಂಚಿಕೊಂಡಿದ್ದಾಗ ನಡೆದಿರುವ ಹಲವು ಅಕ್ರಮಗಳ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶನಿವಾರ ತಿಳಿಸಿದರು.

ಹಿಂದಿನ ಮಹಾಘಟಬಂಧನ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ತೇಜಸ್ವಿ ಯಾದವ್ ಮತ್ತು ಆರ್‌ಜೆಡಿಯ ಸಚಿವರಾಗಿದ್ದ ಲಲಿತ್ ಯಾದವ್, ರಮಾನಂದ್ ಯಾದವ್ ನೋಡಿಕೊಳ್ಳುತ್ತಿದ್ದ ಇಲಾಖೆಗಳು ಕೈಗೊಂಡ ಎಲ್ಲ ನಿರ್ಧಾರಗಳನ್ನು ಪರಿಶೀಲಿಸಲು ಆದೇಶ ಹೊರಡಿಸಲಾಗಿದೆ ಎಂದು ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಕೆಲ ಅಕ್ರಮಗಳು ನಡೆದಿವೆ. ನಾವು ಅದನ್ನೆಲ್ಲ ಸಹಿಸುವುದಿಲ್ಲ. ಹೀಗಾಗಿ ಅವುಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದರು.



ನಿತೀಶ್

ತೇಜಸ್ವಿ ಯಾದವ್ ಉಪಮುಖ್ಯಮಂತ್ರಿ ಆಗಿದ್ದಾಗ ಅವರು ಹೊಂದಿದ್ದ ಖಾತೆಗಳಾದ ಆರೋಗ್ಯ, ರಸ್ತೆ ನಿರ್ಮಾಣ, ನಗರಾಭಿವೃದ್ಧಿ ಮತ್ತು ವಸತಿ, ಗ್ರಾಮಿಣಾಭಿವೃದ್ಧಿ ಇಲಾಖೆಯಲ್ಲಿ ತೆಗೆದುಕೊಂಡಿರುವ ಕ್ರಮಗಳನ್ನು ಪರಿಶೀಲಿಸುವಂತೆ ಮುಖ್ಯಮಂತ್ರಿ ನೇತೃತ್ವದ ಸಂಪುಟ ಸಚಿವಾಲಯ ಫೆ. 16 (ಶುಕ್ರವಾರ)ರಂದು ಪತ್ರ ಬರೆದು ತಿಳಿಸಿದೆ.

ಇದರ ಜತೆಗೆ ಲಲಿತ್ ಯಾದವ್ ಮತ್ತು ರಮಾನಂದ ಯಾದವ್ ಅವರು ಹೊಂದಿದ್ದ ಸಾರ್ವಜನಿಕ ಆರೋಗ್ಯ, ಎಂಜಿನಿಯರಿಂಗ್ ಇಲಾಖೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳಲ್ಲಿ ತೆಗೆದುಕೊಂಡಿರುವ ನಿರ್ಧಾರಗಳನ್ನು ಪರಿಶೀಲಿಸುವಂತೆಯೂ ಹಿರಿಯ ಅಧಿಕಾರಿಗಳಿಗೆ ಸರ್ಕಾರ ಸೂಚಿಸಿದೆ.

ಉತ್ತಮ ಸಂಬಂಧ: 'ಮಿತ್ರಪಕ್ಷಗಳು ಮತ್ತು ವಿರೋಧ ಪಕ್ಷಗಳ ನಾಯಕರ ಜತೆ ನಾನು ಉತ್ತಮ ಸಂಬಂಧ ಹೊಂದಿದ್ದೇನೆ. ಆ ನಾಯಕರನ್ನು ಭೇಟಿಯಾದಾಗ ಹಸ್ತಲಾಘವ ಮಾಡುತ್ತೇನೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಗುರುವಾರವಷ್ಟೇ ನಿತೀಶ್ ವಿಧಾನಸಭೆ ಆವರಣದಲ್ಲಿ ಲಾಲು ಪ್ರಸಾದ್ ಅವರೊಂದಿಗೆ ಕೈಕುಲುಕಿದ್ದರು. ಇದಾದ ಮರು ದಿನ ಲಾಲು ಪ್ರಸಾದ್ ಅವರು, 'ನಿತೀಶ್‌ಗಾಗಿ ನಮ್ಮ ಬಾಗಿಲು ಸದಾ ತೆರೆದಿರುತ್ತದೆ' ಎಂದು ಪ್ರತಿಕ್ರಿಯಿಸಿದ್ದರು.

ವಾಯುಪಡೆ ದಾಳಿ ಸಾಮರ್ಥ್ಯ ಅನಾವರಣ

ಪೋಖರಣ್(ರಾಜಸ್ಥಾನ): ಮರುಭೂಮಿಯಿಂದ ಕೂಡಿದ ಈ ಪ್ರದೇಶದ ಆಗಸವು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸಾಮರ್ಥ್ಯ ಪರೀಕ್ಷೆ–ಪ್ರದರ್ಶನದ ಅಂಗಳವೇ ಆಗಿತ್ತು. ಭಾರತೀಯ ವಾಯುಪಡೆಯ ಅತ್ಯಾಧುನಿಕ ಯುದ್ಧವಿಮಾನ ರಫೇಲ್‌ನಿಂದ ವಿಶಾಲ ವ್ಯಾಪ್ತಿ ಸಾಮರ್ಥ್ಯದ 'ಎಂಐಸಿಎ' ಕ್ಷಿಪಣಿ ಚಿಮ್ಮಿದರೆ, ಮತ್ತೊಂದು ಯುದ್ಧವಿಮಾನ 'ಅಪಾಚೆ'ಯಿಂದ 'ಹೆಲ್‌ಫೈರ್' ಕ್ಷಿಪಣಿಗಳು ಬಾನಂಗಳದಲ್ಲಿ ಶನಿವಾರ ಗರ್ಜಿಸಿದವು.

'ವಾಯು ಶಕ್ತಿ 2024' ಹೆಸರಿನ ತಾಲೀಮಿನ ಮೂಲಕ, ವಾಯುಪಡೆಯ ಮಾರಕ ಮತ್ತು ನಿಖರ ದಾಳಿ ಸಾಮರ್ಥ್ಯ ಅನಾವರಣಗೊಂಡಿತು.

ರಫೇಲ್ ಹಾಗೂ ಅಪಾಚೆ ಯುದ್ಧವಿಮಾನಗಳಿಂದ ಚಿಮ್ಮಿದ ಕ್ಷಿಪಣಿಗಳು ದೃಷ್ಟಿಗೆ ಗೋಚರವಾಗದಷ್ಟು ದೂರಕ್ಕೆ ಮಿಂಚಿನ ವೇಗದಲ್ಲಿ ಸಾಗಿ, ನಿರ್ದಿಷ್ಟ ಗುರಿಯನ್ನು ನಾಶಪಡಿಸುವ ಕ್ಷಮತೆ ಹೊಂದಿವೆ.

ಬೆಳಿಗ್ಗೆಯಿಂದ ಸಂಜೆವರೆಗೆ ನಡೆದ ಈ ಸಮರಾಭ್ಯಾಸದಲ್ಲಿ 77 ಫೈಟರ್‌ಗಳು ಸೇರಿದಂತೆ 120 ಯುದ್ಧ ವಿಮಾನಗಳ ಶಕ್ತಿ ಪ್ರದರ್ಶನಕ್ಕೆ ಸಿಡಿಎಸ್ ಜನರಲ್ ಅನಿಲ್ ಚೌಹಾಣ್, ಸೇನಾಧಿಕಾರಿಗಳು ಸಾಕ್ಷಿಯಾದರು.

ಯುದ್ಧವಿಮಾನಗಳಾದ ರಫೇಲ್, ತೇಜಸ್, ಸು–30ಎಂಕೆಐ, ಮಿಗ್–29, ಜಾಗ್ವಾರ್ ಹಾಗೂ ಚಿನೂಕ್ ಹೆಲಿಕಾಪ್ಟರ್‌ಗಳಿಂದಲೂ ತಾಲೀಮು ನಡೆಯಿತು. ಉಗ್ರರ ಅಡಗುತಾಣಗಳ ಮೇಲೆ ವಾಯುಪಡೆಯ ಗರುಡ ಕಮಾಂಡೋಗಳು ಕ್ಷಿಪ್ರವಾಗಿ ಎರಗಿ, ಅವರನ್ನು ಹೊಡೆದುರುಳಿಸುವ ಕಾರ್ಯಾಚರಣೆಯ ತಾಲೀಮು ಸಹ ನಡೆಯಿತು.

ಲಘು ಯುದ್ಧ ಹೆಲಕಾಪ್ಟರ್ 'ಪ್ರಚಂಡ'ವನ್ನು ಬಳಸಿ ರಾತ್ರಿ ವೇಳೆ ನಡೆಸುವ ಕಾರ್ಯಾಚರಣೆಯನ್ನು ಇದೇ ಮೊದಲ ಬಾರಿಗೆ ಪ್ರದರ್ಶಿಸಿದ್ದು ವಿಶೇಷ.

'ರಾಯ್‌ಬರೇಲಿ ಗಾಂಧಿ ಕುಟುಂಬದೊಂದಿಗೆ'

ವಾರಾಣಸಿ (ಪಿಟಿಐ): 'ರಾಯ್‌ಬರೇಲಿ ಲೋಕಸಭಾ ಕ್ಷೇತ್ರವು ಗಾಂಧಿ ಕುಟುಂಬದೊಂದಿಗೆ ಉಳಿಯಲಿದೆ' ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ರಾಯ್ ಶನಿವಾರ ಇಲ್ಲಿ ತಿಳಿಸಿದರು.

'ತಲೆತಲಾಂತರದಿಂದಲೂ ರಾಯ್‌ಬರೇಲಿಯ ಜನರು ಗಾಂಧಿ ಕುಟುಂಬದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ' ಎಂದರು.

ಕಾಂಗ್ರೆಸ್ ಬೆಂಬಲಿತ ಸಂಸ್ಥೆ ಆರೋಪ • ಡಿ.ಕೆ.ಶಿವಕುಮಾರ್ ಹೂಡಿಕೆ ಬಗ್ಗೆ ಮಾಹಿತಿ ಕೇಳಿದ್ದ ಸಿಬಿಐ

'ಜೈಹಿಂದ್' ಚಾನೆಲ್ ಬ್ಯಾಂಕ್ ಖಾತೆ ಸ್ಥಗಿತ

ಮುಖ್ಯಾಂಶಗಳು

- ತೆರಿಗೆ ಪಾವತಿ ಬಾಕಿ ವಿಚಾರ
- ಕೇಂದ್ರ ಜಿಎಸ್‌ಟಿ, ಎಕ್ಸೈಸ್ ಕಚೇರಿಯ ಸಹಾಯಕ ಆಯುಕ್ತರಿಂದ ಇತ್ತೀಚೆಗೆ ನೋಟಿಸ್
- ರಾಜಕೀಯ ದ್ವೇಷದಿಂದ ಈ ಕ್ರಮ: ಶಿಜು

ತಿರುವನಂತಪುರ(ಪಿಟಿಐ): ಬಾಕಿ ಇರುವ ತೆರಿಗೆಗೆ ಸಂಬಂಧಿಸಿ, ಆದಾಯ ತೆರಿಗೆ ಇಲಾಖೆಯು ತನ್ನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದೆ ಎಂದು 'ಜೈಹಿಂದ್ ಟಿವಿ' ವಾಹಿನಿಯನ್ನು ಮುನ್ನಡೆಸುತ್ತಿರುವ ಕಾಂಗ್ರೆಸ್ ಬೆಂಬಲಿತ ಸಂಸ್ಥೆ ಶನಿವಾರ ಆರೋಪಿಸಿದೆ.

ಜೈಹಿಂದ್ ಟಿವಿಯ ಮಾತೃ ಸಂಸ್ಥೆಯಾದ ಭಾರತ್ ಬ್ರಾಡ್‌ಕಾಸ್ಟಿಂಗ್ ಕಂಪನಿಯಿಂದ ಬಾಕಿ ಇರುವ ತೆರಿಗೆ ಮೊತ್ತವನ್ನು ವಸೂಲಿ ಮಾಡುವಂತೆ ಎರಡು ಪ್ರಮುಖ ಖಾಸಗಿ ಬ್ಯಾಂಕುಗಳಿಗೆ ಇಲ್ಲಿನ ಕೇಂದ್ರ ಜಿಎಸ್‌ಟಿ ಮತ್ತು ಎಕ್ಸೈಸ್ ಕಚೇರಿಯ ಸಹಾಯಕ ಆಯುಕ್ತರು ಇತ್ತೀಚೆಗೆ ನೋಟಿಸ್ ನೀಡಿದ್ದರು.

ಇದರ ಬೆನ್ನಲ್ಲೇ ಈಗ ಸಂಸ್ಥೆಯ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸಂಸ್ಥೆಯ ಖಾತೆಗಳನ್ನು ಸ್ಥಗಿತಗೊಳಿಸಿ ಕೈಗೊಂಡಿರುವ ಕ್ರಮಕ್ಕೂ, 7 ವರ್ಷಗಳ ಹಿಂದಿನ ಸೇವಾ ತೆರಿಗೆ ಬಾಕಿಗೆ ಸಂಬಂಧಿಸಿದ ಇದೇ ಸಂಸ್ಥೆಗೆ ಸಂಬಂಧಿಸಿದ ಪ್ರಕರಣಕ್ಕೂ ನಂಟಿದೆ. ಸೇವಾ ತೆರಿಗೆ ಬಾಕಿ ಕುರಿತ ಪ್ರಕರಣದ ವಿಚಾರಣೆ ಸದ್ಯ ಕೇರಳ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ ಎಂದು ಇವೇ ಮೂಲಗಳು ಹೇಳಿವೆ.

ಆದಾಯ ಮೀರಿ ಆಸ್ತಿ ಗಳಿಕೆ ಆರೋಪ ಎದುರಿಸುತ್ತಿರುವ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಸಂಸ್ಥೆಯಲ್ಲಿ ಹೂಡಿಕೆ ಮಾಡಿದ್ದಾರೆ ಎನ್ನಲಾಗಿದ್ದು, ಈ ಕುರಿತು ವಿವರ ನೀಡುವಂತೆ ಸಂಸ್ಥೆಗೆ ಸಿಬಿಐ ನೋಟಿಸ್ ನೀಡಿತ್ತು. ಈ ಕಾರಣದಿಂದಾಗಿ ಜೈಹಿಂದ್ ಟಿವಿ ಇತ್ತೀಚೆಗೆ ಗಮನ ಸೆಳೆದಿತ್ತು.

'ತೆರಿಗೆ ಬಾಕಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ಹೈಕೋರ್ಟ್‌ನಲ್ಲಿ ಬಾಕಿ ಇದೆ. ಹೀಗಾಗಿ ತೆರಿಗೆ ಅಧಿಕಾರಿಗಳು ಕೈಗೊಂಡಿರುವ ಕ್ರಮ ಅಚ್ಚರಿ ಮೂಡಿಸಿದೆ' ಎಂದು ಚಾನೆಲ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಶಿಜು ಪ್ರತಿಕ್ರಿಯಿಸಿದ್ದಾರೆ.

'ಇಲಾಖೆ ಕೈಗೊಂಡಿರುವ ಈ ದಿಢೀರ್ ಕ್ರಮ ದುರದೃಷ್ಟಕರ ಮಾತ್ರವಲ್ಲ, ಇದರಿಂದ ಚಾನೆಲ್ ಸಂಕಷ್ಟಕ್ಕೆ ಸಿಲುಕಿದೆ' ಎಂದೂ ಹೇಳಿದ್ದಾರೆ.

'ಡಿ.ಕೆ.ಶಿವಕುಮಾರ್ ಮತ್ತು ಅವರ ಕುಟುಂಬದ ಸದಸ್ಯರು ಸಂಸ್ಥೆಯಲ್ಲಿ ಮಾಡಿರುವ ಹೂಡಿಕೆ ಕುರಿತು ಮಾಹಿತಿ ನೀಡುವಂತೆ ಕಳೆದ ಡಿಸೆಂಬರ್ 22ರಂದು ನೋಟಿಸ್ ನೀಡಲಾಗಿತ್ತು. ಈ ವಿಚಾರವಾಗಿ ನಾವು ತನಿಖಾ ಸಂಸ್ಥೆಗೆ ಸಹಕಾರ ನೀಡುತ್ತಿದ್ದೇವೆ. ಇದಾದ ನಂತರ, ನಾವು ಕೇಂದ್ರದ ವಿವಿಧ ಇಲಾಖೆಗಳಿಂದ 10ಕ್ಕೂ ಹೆಚ್ಚು ನೋಟಿಸ್‌ಗಳನ್ನು ಪಡೆದಿದ್ದೇವೆ' ಎಂದು ಶಿಜು ಹೇಳಿದ್ದಾರೆ.

'ರಾಜಕೀಯ ದ್ವೇಷದಿಂದಾಗಿ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದು ಸ್ಪಷ್ಟ' ಎಂದು ಕಾಂಗ್ರೆಸ್ ಮುಖಂಡರೂ ಆಗಿರುವ ಶಿಜು ಹೇಳಿದ್ದಾರೆ.

'ಸವಾಲಾದ ಕಾರಣ ಎಎಪಿ ಮೇಲೆ ದಾಳಿ'

ನವದೆಹಲಿ(ಪಿಟಿಐ): ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ದೆಹಲಿ ಸರ್ಕಾರ, ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಶನಿವಾರ ಮಂಡಿಸಲಾಗಿದ್ದ ವಿಶ್ವಾಸ ಮತ ಗೆದ್ದಿತು.

ಧ್ವನಿ ಮತದ ಮೂಲಕ ವಿಶ್ವಾಸ ಮತ ನಿರ್ಣಯವನ್ನು ಸದನ ಅಂಗೀಕರಿಸಿತು. ಆಡಳಿತಾರೂಢ ಎಎಪಿಯ 62 ಶಾಸಕರ ಪೈಕಿ 54 ಮಂದಿ ಉಪಸ್ಥಿತರಿದ್ದರು.

ವಿಶ್ವಾಸ ಮತ ನಿರ್ಣಯ ಮಂಡಿಸಿ ಮಾತನಾಡಿದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ನನ್ನ ಸರ್ಕಾರಕ್ಕೆ ಪೂರ್ಣ ಬಹುಮತ ಇದೆ. ಆದರೆ, ಬಿಜೆಪಿಯು ಪಕ್ಷದ ಶಾಸಕರನ್ನು ಖರೀದಿ ಮಾಡುವ ಮೂಲಕ ಸರ್ಕಾರವನ್ನು ಉರುಳಿಸುವ ಪ್ರಯತ್ನ ನಡೆಸಿತ್ತು. ಈ ಕಾರಣಕ್ಕೆ ವಿಶ್ವಾಸ ಮತ ಕೋರಬೇಕಾಯಿತು' ಎಂದರು.

'ಎಎಪಿಯ ಯಾವೊಬ್ಬ ಶಾಸಕ ಪಕ್ಷಾಂತರ ಮಾಡುವುದಿಲ್ಲ' ಎಂದು ಹೇಳಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಜೊತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿಗೊಳಿಸಿರುವ ಸಮನ್ಸ್‌ಗಳಿಗೆ ಪ್ರತಿಕ್ರಿಯಿಸುತ್ತಿಲ್ಲ ಎಂದು ಆರೋಪಿಸಿ, ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಇಲ್ಲಿನ ನ್ಯಾಯಾಲಯಕ್ಕೆ ನೀಡಿರುವ ದೂರಿನ ವಿಚಾರಣೆಗೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾದರು.

ಬಜೆಟ್ ಅಧಿವೇಶನ ನಡೆಯುತ್ತಿರುವ ಕಾರಣ ನ್ಯಾಯಾಲಯಕ್ಕೆ ಖುದ್ದು ಹಾಜರಾಗಲು ಸಾಧ್ಯವಾಗಿಲ್ಲ. ಶನಿವಾರದ ಮಟ್ಟಿಗೆ ವಿನಾಯಿತಿ ನೀಡಬೇಕೆಂದು ಕೇಜ್ರಿವಾಲ್ ಅವರು ಮನವಿ ಮಾಡಿದರು. ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ದಿವ್ಯಾ ಮಲ್ಹೋತ್ರಾ ಅವರು ಇದಕ್ಕೆ ಸಮ್ಮತಿ ಸೂಚಿಸಿದರು.

ಮುಂದಿನ ವಿಚಾರಣೆಗೆ ಕೇಜ್ರಿವಾಲ್ ಅವರು ಖುದ್ದು ಹಾಜರಾಗಲಿದ್ದಾರೆ ಎಂದು ಅವರ ಪರ ವಕೀಲ ರಮೇಶ್ ಗುಪ್ತಾ ಅವರು ನ್ಯಾಯಾಲಯಕ್ಕೆ ತಿಳಿಸಿದರು. ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯವು ಮಾರ್ಚ್ 16ಕ್ಕೆ ಮುಂದೂಡಿದೆ. 'ಕೇಜ್ರಿವಾಲ್ ಸಮನ್ಸ್‌ಗಳಿಗೆ ಪ್ರತಿಕ್ರಿಯಿಸುತ್ತಿಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಕಾನೂನನ್ನು ಉಲ್ಲಂಘಿಸಿದರೆ ಅದರಿಂದ ಸಾಮಾನ್ಯ ಜನರಿಗೆ ಕೆಟ್ಟ ಸಂದೇಶ ರವಾನೆಯಾಗುತ್ತದೆ' ಎಂದು ಇ.ಡಿ ದೂರಿನಲ್ಲಿ ಹೇಳಿದೆ.

ಉತ್ಪನ್ನಗಳ ಗುಣಮಟ್ಟದ ಮೇಲೆ ನಿಗಾ ಇಡುವ ಉದ್ದೇಶ

ಕಾಸ್ಮೆಟಿಕ್, ಔಷಧಗಳ ಮಾದರಿ ಸಂಗ್ರಹ: ಹೊಸ ಮಾರ್ಗಸೂಚಿ

ನವದೆಹಲಿ(ಪಿಟಿಐ): ಮಾರುಕಟ್ಟೆಯಲ್ಲಿ ಲಭ್ಯವಿರುವ ಔಷಧಗಳು, ಕಾಸ್ಮೆಟಿಕ್ ಹಾಗೂ ವೈದ್ಯಕೀಯ ಉಪಕರಣಗಳ ಗುಣಮಟ್ಟ ಪರಿಶೀಲನೆಗಾಗಿ ಏಕರೂಪ ಮಾದರಿ ಸಂಗ್ರಹ ಪದ್ಧತಿ ಅನುಸರಿಸಬೇಕು ಎಂದು ತಿಳಿಸಿರುವ ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ (ಸಿಡಿಎಸ್‌ಸಿಒ), ಈ ಕುರಿತು ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಈ ಹೊಸ ಮಾರ್ಗಸೂಚಿಗಳ ಕುರಿತು ಕಳೆದ ವಾರ ಅಧಿಸೂಚನೆ ಪ್ರಕಟಿಸಲಾಗಿದೆ.

ಪ್ರಸ್ತುತ ನಗರ ಹಾಗೂ ಪಟ್ಟಣ ಪ್ರದೇಶಗಳಿಂದ ಮಾತ್ರ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ. ಜೊತೆಗೆ, ದೊಡ್ಡ ಬ್ರ್ಯಾಂಡ್‌ಗಳ ಉತ್ಪನ್ನಗಳ ಮಾದರಿ ಮಾತ್ರ ಸಂಗ್ರಹಿಸಲಾಗುತ್ತಿದೆ. ಇದರಿಂದ, ಗ್ರಾಮೀಣ ಪ್ರದೇಶಗಳ ಗ್ರಾಹಕರು ಅಥವಾ ನಗರ ಪ್ರದೇಶದಿಂದ ದೂರ ಇರುವ ಬಳಕೆದಾರರು ಈ ಮಾದರಿ ಸಂಗ್ರಹ ವ್ಯವಸ್ಥೆಯಿಂದ ಹೊರಗುಳಿಯುತ್ತಿದ್ದಾರೆ. ಹೀಗಾಗಿ, ಗುಣಮಟ್ಟ ಪರಿಶೀಲನೆಯಲ್ಲಿ ಇಂತಹ ಬಳಕೆದಾರರ ಅಭಿಪ್ರಾಯವನ್ನು ಪರಿಗಣಿಸಲಾಗುತ್ತಿಲ್ಲ ಎಂದು ಸಿಡಿಎಸ್‌ಸಿಒ ಹೇಳಿದೆ.

ಮಾದರಿಗಳ ಸಂಗ್ರಹ ಮತ್ತು ಸ್ಥಳಕ್ಕೆ ಸಂಬಂಧಿಸಿ ಯಾವುದೇ ನಿರ್ದಿಷ್ಟ ವಿಧಾನ ಈ ವರೆಗೆ ಇರಲಿಲ್ಲ. ಔಷಧ ಪರಿವೀಕ್ಷಕರು ತಮಗೆ ತೋಚಿದಂತೆ ಮಾದರಿಗಳನ್ನು ಸಂಗ್ರಹಿಸುತ್ತಿದ್ದರು ಎಂಬ ಬಗ್ಗೆಯೂ ಈ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಕೆಲ ಅಂಗಡಿಗಳಲ್ಲಿ ಗುಣಮಟ್ಟ ಇಲ್ಲದ (ಎನ್‌ಎಸ್‌ಕ್ಯೂ) ಅಥವಾ ನಕಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದುದು ಮಾದರಿಗಳ ಸಂಗ್ರಹದಿಂದ ಗೊತ್ತಾಗಿದೆ. ಇಂತಹ ಅಂಗಡಿಗಳ ಮೇಲೆ ನಿಯಮಿತವಾಗಿ ಕಣ್ಗಾವಲು ಅಗತ್ಯ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಗುಣಮಟ್ಟವಿರದ ಔಷಧಗಳು/ಕಾಸ್ಮೆಟಿಕ್‌ಗಳ ಕುರಿತು ಕೇಂದ್ರೀಕೃತ ದತ್ತಾಂಶವನ್ನು ನಿರ್ವಹಣೆ ಮಾಡುವುದು ಹಾಗೂ ಇಂತಹ ಉತ್ಪನ್ನಗಳ ಪಟ್ಟಿಯನ್ನು ಸಂಘಟನೆಯ ಜಾಲತಾಣದಲ್ಲಿ ಪ್ರತಿ ತಿಂಗಳು ಪ್ರಕಟಿಸಬೇಕು. ಇದರಿಂದ, ನಕಲಿ/ಗುಣಮಟ್ಟವಿರದ ಉತ್ಪನ್ನಗಳ ಬಳಕೆಯನ್ನು ನಿಲ್ಲಿಸಲು ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

ಕಾಶಿಯಲ್ಲಿ 12 ಕಿ.ಮೀ ರೋಡ್ ಶೋ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ

'ದೇಶವನ್ನು ಒಗ್ಗೂಡಿಸುವುದೇ ನೈಜ ದೇಶಭಕ್ತಿ'

ಪ್ರಜಾವಾಣಿ ವಾರ್ತೆ/ಪಿಟಿಐ

ವಾರಾಣಸಿ/ಲಖನೌ (ಉತ್ತರ ಪ್ರದೇಶ): 'ದೇಶದಲ್ಲಿ ಎರಡು ಭಾರತಗಳಿವೆ. ಅದರಲ್ಲಿ ಒಂದು ಶ್ರೀಮಂತರದ್ದಾಗಿದ್ದರೆ, ಇನ್ನೊಂದು ಬಡವರದ್ದಾಗಿದೆ' ಎಂದು ಹೇಳಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ದೇಶವನ್ನು ಒಗ್ಗೂಡಿಸುವುದೇ ನಿಜವಾದ ದೇಶಭಕ್ತಿಯಾಗಿದೆ' ಎಂದರು.

ಉತ್ತರ ಪ್ರದೇಶದಲ್ಲಿ 'ಭಾರತ ಜೋಡೊ ನ್ಯಾಯ ಯಾತ್ರೆ'ಯ ಎರಡನೇ ದಿನವಾದ ಶನಿವಾರ ಮಾತನಾಡಿದ ಅವರು, 'ಭಾರತವು ಪ್ರೀತಿ ಹಂಚುವ ದೇಶವೇ ಹೊರತು, ದ್ವೇಷ ಹರಡುವ ದೇಶವಲ್ಲ' ಎಂದು ಹೇಳಿದರು.

ಉತ್ತರ ಪ್ರದೇಶ ರಾಜ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಜಯ್ ರಾಯ್ ಮತ್ತು ಇತರ ಕಾಂಗ್ರೆಸ್ ನಾಯಕರ ಜತೆಗೆ ಅವರು ತೆರೆದ ಜೀಪಿನಲ್ಲಿ ಇಲ್ಲಿನ ಜನನಿಬಿಡ ಗೊಡೌಲಿಯಾದಲ್ಲಿ ಯಾತ್ರೆಯೊಂದಿಗೆ ಸಾಗಿದರು.

'ಸಹೋದರರ ನಡುವಿನ ಸಂಘರ್ಷದಿಂದ ದೇಶ ದುರ್ಬಲವಾಗಿದೆ' ಎಂದ ಅವರು, 'ದೇಶವನ್ನು ಒಗ್ಗೂಡಿಸುವುದೇ ನಿಜವಾದ ದೇಶಭಕ್ತಿಯಾಗಿದೆ' ಎಂದು ಪುನರುಚ್ಚರಿಸಿದರು.

'ನಾನು ಗಂಗಾ ಮಾತೆಗೆ ತಲೆಬಾಗಿ ಬಂದಿದ್ದೇನೆ. ಈ ಯಾತ್ರೆಯಲ್ಲಿ ತಮ್ಮ ಸಹೋದರರನ್ನು ಭೇಟಿಯಾಗಲು ಬಂದಿದ್ದೇವೆ ಎಂಬ ಭಾವನೆ ಪ್ರತಿಯೊಬ್ಬರಲ್ಲಿ ಮೂಡಬೇಕು' ಎಂದು ರಾಹುಲ್ ಗಾಂಧಿ ಹೇಳಿದರು.

ಮಾಧ್ಯಮಗಳ ವಿರುದ್ಧ ವಾಗ್ದಾಳಿ: ದೇಶದ ರೈತರು ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಮಾಧ್ಯಮಗಳು ಸರಿಯಾಗಿ ಬಿತ್ತರಿಸುವುದಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು. ಪ್ರಧಾನಿ ಮೋದಿ ಅವರನ್ನು ಮಾಧ್ಯಮಗಳು ದಿನದ 24 ಗಂಟೆಯೂ ತೋರಿಸುತ್ತವೆ. ಐಶ್ವರ್ಯ ರೈ ಅವರನ್ನೂ ತೋರಿಸುತ್ತವೆ. ಆದರೆ ನಿಜವಾದ ಸಮಸ್ಯೆಗಳನ್ನು ಬಿತ್ತರಿಸುವುದಿಲ್ಲ ಎಂದು ಟೀಕಿಸಿದರು.

ಯಾತ್ರೆ ವೇಳೆ ಜನರ ಗುಂಪಿನಲ್ಲಿದ್ದ ಯುವಕನೊಬ್ಬನನ್ನು ಕರೆದ ಅವರು, ಶಿಕ್ಷಣಕ್ಕಾಗಿ ಎಷ್ಟು ಖರ್ಚಾಗಿದೆ ಎಂಬುದರ ಮಾಹಿತಿ ಪಡೆದರು. ಅಲ್ಲದೆ ನಿರುದ್ಯೋಗದ ಕುರಿತೂ ಆ ಯುವಕನ ಬಳಿ ಕೇಳಿದರು. ಬಳಿಕ ಅವರು ನಿರುದ್ಯೋಗ ಮತ್ತು ಹಣದುಬ್ಬರವು ದೇಶದ ಎರಡು ಪ್ರಮುಖ ಸಮಸ್ಯೆಗಳಾಗಿವೆ ಎಂದರು.

ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕೆಲ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಕಾಂಗ್ರೆಸ್ ನಾಯಕರು ಭೇಟಿ ಮಾಡಿದರು. ಕೆಲ ದಿನಗಳ ಹಿಂದೆ ವಿಶ್ವವಿದ್ಯಾಲಯದ ಆವರಣದಲ್ಲಿ ಬಾಲಕಿಯ ಮೇಲೆ ನಡೆದ ಅತ್ಯಾಚಾರ ಘಟನೆ ಕುರಿತು ಅವರು ಕಳವಳ ವ್ಯಕ್ತಪಡಿಸಿದರು.

ವಾರಾಣಸಿ ಬಳಿಕ ಪಕ್ಷದ ಭದೋಹಿ ಜಿಲ್ಲೆಗೆ ಯಾತ್ರೆ ಮೂಲಕ ತೆರಳಬೇಕಿದ್ದ ರಾಹುಲ್ ಅವರು, ಕೆಲ ತುರ್ತು ಕೆಲಸಗಳ ನಿಮಿತ್ತ ತಮ್ಮ ಲೋಕ ಸಭಾ ಕ್ಷೇತ್ರವಾದ ವಯನಾಡ್‌ಗೆ ತೆರಳಿದರು. ಅವರು ಭಾನುವಾರ ಪ್ರಯಾಗ್‌ರಾಜ್‌ನಲ್ಲಿ ಯಾತ್ರೆಯಲ್ಲಿ ಪಾಲ್ಗೊಳ್ಳುವರು ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಅಪ್ನಾದಳ ನಾಯಕಿ ಪಲ್ಲವಿ ಪಟೇಲ್, ಸಮಾಜವಾದಿ ಪಕ್ಷದ ಕೆಲ ಶಾಸಕರೂ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಯಾತ್ರೆಯು ಬಿಹಾರದಿಂದ ಚಂದೌಲಿ ಮೂಲಕ ಶುಕ್ರವಾರ ಸಂಜೆ ಉತ್ತರ ಪ್ರದೇಶ ಪ್ರವೇಶಿಸಿತು. ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ರಾಯ್ ಬರೇಲಿಯಲ್ಲಿ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ.



ವಾರಾಣಸಿಯಲ್ಲಿ ಶನಿವಾರ ನಡೆದ 'ಭಾರತ ಜೋಡೊ ನ್ಯಾಯ ಯಾತ್ರೆ' ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತೆರೆದ ಜೀಪಿನಲ್ಲಿ ರೋಡ್‌ಶೋ ನಡೆಸಿದರು —ಎಎಫ್‌ಪಿ ಚಿತ್ರ

ದೇವಾಲಯ ಭೇಟಿ, ರೋಡ್ ಶೋ

ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರವಾದ ವಾರಾಣಸಿಯ ಪ್ರಸಿದ್ಧ ಕಾಶಿ ವಿಶ್ವನಾಥ ದೇವಾಲಯಕ್ಕೆ ಶನಿವಾರ ಭೇಟಿ ನೀಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪೂಜೆ ಸಲ್ಲಿಸಿದರು.

ಬಳಿಕ ರಾಹುಲ್ ಅವರು ಪಟ್ಟಣದಲ್ಲಿ 12 ಕಿ.ಮೀ ರೋಡ್ ಶೋ ನಡೆಸಿದರು. ಗೊಡೌಲಿಯಾ, ಮೈದಾಗಿನ್, ಜ್ಞಾನವಾಪಿ, ಗೋಲ್ಗಡ್ಡಾ ಮೂಲಕ ಸಾಗಿದ ಯಾತ್ರೆ ಮಾಂಡುವಾಡಿಹ್‌ನಲ್ಲಿ ಕೊನೆಗೊಂಡಿತು. ಮುಸ್ಲಿಂ ಸಮುದಾಯದವರ ಪ್ರಾಬಲ್ಯವಿರುವ ಹಲವು ಪ್ರದೇಶಗಳ ಮೂಲಕ ಯಾತ್ರೆ ಸಾಗಿತು.

ರಸ್ತೆ ಸ್ವಚ್ಛಗೊಳಿಸಿದ ಬಿಜೆಪಿ ಕಾರ್ಯಕರ್ತರು

ಲಖನೌ: ವಾರಾಣಸಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ 'ಭಾರತ ಜೋಡೊ ನ್ಯಾಯ ಯಾತ್ರೆ' ಸಾಗಿದ ಬೆನ್ನಲ್ಲೇ ಆ ರಸ್ತೆಗಳನ್ನು ಬಿಜೆಪಿ ಕಾರ್ಯಕರ್ತರು ಗಂಗಾನದಿಯ ಪವಿತ್ರ ನೀರಿನಿಂದ ಸ್ವಚ್ಛಗೊಳಿಸಿದರು.

ಗಂಗಾಜಲ ತುಂಬಿದ್ದ ಬಕೆಟ್‌ಗಳನ್ನು ಹೊತ್ತು ತಂದ ಕೇಸರಿ ಪಕ್ಷದ ನೂರಾರು ಕಾರ್ಯಕರ್ತರು, ರಾಹುಲ್ ಯಾತ್ರೆಯ ಬಳಿಕ ಆ ಮಾರ್ಗವನ್ನು ತೊಳೆದರು.


'ರಾಹುಲ್ ಅವರಿಗೆ ಸನಾತನ ಧರ್ಮದಲ್ಲಿ ನಂಬಿಕೆ ಇಲ್ಲ ಮತ್ತು ಅವರು ಮಾಂಸಾಹಾರಿ. ಅವರಿಂದ ಈ ಮಾರ್ಗ ಅಶುದ್ಧವಾಗಿದೆ' ಎಂದು ಬಿಜೆಪಿ ಕಾರ್ಯಕರ್ತರೊಬ್ಬರು ಹೇಳಿದರು. ಈ ವೇಳೆ ಕೇಸರಿ ಪಕ್ಷದ ಕಾರ್ಯಕರ್ತರು ಜೈ ಶ್ರೀರಾಮ್ ಘೋಷಣೆಗಳನ್ನು ಕೂಗಿದರು.

ನಟಿ ಸುಹಾನಿ ನಿಧನ

ನವದೆಹಲಿ (ಪಿಟಿಐ): ಅಮೀರ್ ಖಾನ್ ನಟನೆಯ 'ದಂಗಲ್' ಸಿನಿಮಾದಲ್ಲಿ ಕುಸ್ತಿಪಟು ಬಬಿತಾ ಫೋಗಟ್ ಪಾತ್ರದಲ್ಲಿ ನಟಿಸಿದ್ದ ಸುಹಾನಿ ಭಟ್ನಾಗರ್ (19) ನಿಧನರಾದರು.

ವಯನಾಡ್: ಮಾನವ–ವನ್ಯಜೀವಿ ಸಂಘರ್ಷ

ಹಿಂಸಾರೂಪ ತಾಳಿದ ಹರತಾಳ



ಪಿಣರಾಯಿ ವಿಜಯನ್

ವಯನಾಡ್ (ಪಿಟಿಐ): ಮಾನವ–ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಹುಡುಕಲು ಆಡಳಿತಾರೂಢ ಎಲ್‌ಡಿಎಫ್, ವಿರೋಧ ಪಕ್ಷಗಳಾದ ಯುಡಿಎಫ್ ಮತ್ತು ಬಿಜೆಪಿ ಜಿಲ್ಲಾದ್ಯಂತ ಕರೆ ನೀಡಿದ್ದ ಹರತಾಳವು ಪುಲ್‌ಪಳ್ಳಿಯಲ್ಲಿ ಶನಿವಾರ ಹಿಂಸಾತ್ಮಕ ರೂಪ ಪಡೆಯಿತು.

ಕೆಲ ದಿನಗಳಿಂದ ಆನೆಗಳ ದಾಳಿಯಿಂದ ಮೂವರು ಮೃತಪಟ್ಟ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಸ್ಥಳೀಯರು ವಿವಿಧೆಡೆ ರಸ್ತೆ ತಡೆ ನಡೆಸಿದರು. ಪುಲ್‌ಪಳ್ಳಿಯಲ್ಲಿ ಅರಣ್ಯ ಇಲಾಖೆಯ ವಾಹನವನ್ನು ಅಡ್ಡಗಟ್ಟಿ ಹಾನಿ ಮಾಡಿದರು.

ಆನೆ ದಾಳಿಯಿಂದ ಶುಕ್ರವಾರ ಮೃತಪಟ್ಟಿದ್ದ ಪ್ರವಾಸೋದ್ಯಮ ಮಾರ್ಗದರ್ಶಿ ವಿ.ಪಿ ಪೌಲ್ ಎಂಬವರ ಶವವನ್ನು ಇಲಾಖೆಯ ವಾಹನದಲ್ಲಿ ಇಟ್ಟು ಪ್ರತಿಭಟಿಸಿದರು. ಜನರ ಜೀವ ಮತ್ತು ವಸ್ತುಗಳಿಗೆ ರಕ್ಷಣೆ ನೀಡುವಲ್ಲಿ ಇಲಾಖೆಯು ವಿಫಲವಾಗಿದೆ ಎಂದು ಆರೋಪಿಸಿದರು.

ಮೃತರ ಕುಟುಂಬಸ್ಥರಿಗೆ ₹10 ಲಕ್ಷ ಪರಿಹಾರ ನೀಡುವುದಾಗಿ ಅಧಿಕಾರಿಗಳು ತಿಳಿಸಿದ ನಂತರ ಪ್ರತಿಭಟನಕಾರರು ಶವ ಸಂಸ್ಕಾರಕ್ಕೆ ಅವಕಾಶ ನೀಡಿದರು. ಬಳಿಕ ₹50 ಲಕ್ಷ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಇನ್ನೊಂದೆಡೆ, ಗುಂಪೊಂದು ಹುಲಿ ದಾಳಿಯಿಂದ ಮೃತಪಟ್ಟಿದೆ ಎನ್ನಲಾದ ಹಸುವಿನ ಕಳೇಬರವನ್ನು ಅರಣ್ಯ ಇಲಾಖೆಯ ಜೀಪಿನ ಬಾನೆಟ್‌ಗೆ ಕಟ್ಟಿ ಆಕ್ರೋಶ ಹೊರಹಾಕಿತು.

ಪರಿಸ್ಥಿತಿ ಉದ್ವಿಗ್ನಗೊಳ್ಳುತ್ತಿದ್ದಂತೆಯೇ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಮಧ್ಯಪ್ರವೇಶಿಸಿದರು. ಜಿಲ್ಲೆಯಲ್ಲಿನ ಮಾನವ–ಪ್ರಾಣಿ ಸಂಘರ್ಷದ ಕುರಿತು ಚರ್ಚಿಸಲು ಮುಖ್ಯಮಂತ್ರಿ ನೇತೃತ್ವದ ಉನ್ನತ ಮಟ್ಟದ ಸಭೆ ನಡೆಸಲಾಯಿತು.

ಅರಣ್ಯದ ಗಡಿಯುದ್ದಕ್ಕೂ 250 ಕಣ್ಗಾವಲು ಕ್ಯಾಮೆರಾಗಳನ್ನು ಇಡಲು ಮತ್ತು ವನ್ಯಪ್ರಾಣಿಗಳ ಹಾವಳಿ ಹೆಚ್ಚಿರುವ ಪ್ರದೇಶದಲ್ಲಿ ಅರಣ್ಯ ಮತ್ತು ಪೊಲೀಸ್ ಸಿಬ್ಬಂದಿ ನಿಯೋಜಿಸಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಜಿಲ್ಲೆಯಲ್ಲಿ ಕಳೆದ ಮೂರು ವಾರಗಳಲ್ಲಿ ಆನೆ ದಾಳಿಯಿಂದ ಮೂವರು ಮೃತಪಟ್ಟಿದ್ದಾರೆ.

ಸ್ಫೋಟ: 10 ಸಾವು

ವಿರುದುನಗರ: ತಮಿಳುನಾಡಿನ ವಿರುದುನಗರ ಜಿಲ್ಲೆಯ ಪಟಾಕಿ ಕಾರ್ಖಾನೆಯೊಂದರಲ್ಲಿ ಶನಿವಾರ ಸಂಭವಿಸಿದ ಸ್ಫೋಟದಲ್ಲಿ ನಾಲ್ವರು ಮಹಿಳೆಯರು ಸೇರಿದಂತೆ 10 ಮಂದಿ ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ ಗಾಯಗೊಂಡ ಏಳು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಟಾಕಿ ತಯಾರಿಕೆ ಘಟಕದಲ್ಲಿ ರಾಸಾಯನಿಕಗಳನ್ನು ಬೆರೆಸುವ ಕೋಣೆಯಲ್ಲಿ ಶನಿವಾರ ಮಧ್ಯಾಹ್ನ ಸ್ಫೋಟ ಸಂಭವಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಹಿರಿಯ ಅಧಿಕಾರಿಯೊಬ್ಬರು, 'ಕಾರ್ಮಿಕರ ಅಚಾತುರ್ಯದಿಂದ ಈ ಘಟನೆ ಸಂಭವಿಸಿದೆ. ನಿಯಮದ ಪ್ರಕಾರ ರಾಸಾಯನಿಕ ಮಿಶ್ರಣ ಮಾಡುವಾಗ ಕೊಠಡಿಯಲ್ಲಿ ಇಬ್ಬರಷ್ಟೇ ಕೆಲಸ ಮಾಡಬೇಕು. ಆದರೆ, ಇಲ್ಲಿ ಎಂಟಕ್ಕೂ ಹೆಚ್ಚು ಜನ ಕೋಣೆಯಲ್ಲಿ ಇರುವುದು ಕಂಡುಬಂದಿದೆ' ಎಂದು ಹೇಳಿದ್ದಾರೆ.

ರೈತ ನಾಯಕರು, ಕೇಂದ್ರ ಸಚಿವರ ನಡುವೆ ಇಂದು ಮತ್ತೆ ಮಾತುಕತೆ

ಬಿಜೆಪಿಗರ ನಿವಾಸದ ಎದುರು ಧರಣಿ


ಚಂಡೀಗಢ (ಪಿಟಿಐ): 'ದೆಹಲಿ ಚಲೋ' ಪ್ರತಿಭಟನೆಗೆ ಬೆಂಬಲ ಸೂಚಿಸಿ, ಭಾರತೀಯ ಕಿಸಾನ್ ಒಕ್ಕೂಟವು (ಬಿಕೆಯು) ಬಿಜೆಪಿಯ ಮೂವರು ಹಿರಿಯ ನಾಯಕರ ನಿವಾಸದ ಎದುರು ಶನಿವಾರ ಧರಣಿ ನಡೆಸಿತು. ಬಿಕೆಯು (ಚುರೂಣಿ ಬಣ) ಹರಿಯಾಣದಲ್ಲಿ ಟ್ರ್ಯಾಕ್ಟರ್ ಮೆರವಣಿಗೆ ನಡೆಸಿತು.

ಪಂಜಾಬ್ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಪಂಜಾಬ್ ಬಿಜೆಪಿ ಘಟಕದ ಮುಖ್ಯಸ್ಥ ಸುನಿಲ್ ಜಾಖಡ್ ಮತ್ತು ಹಿರಿಯ ನಾಯಕ ಕೇವಲ್ ಸಿಂಗ್ ಧಿಲ್ಲಾನ್ ಅವರ ನಿವಾಸದ ಎದುರು ರೈತರು ಧರಣಿ ನಡೆಸಿದರು. ಜೊತೆಗೆ ರಾಜ್ಯದ ಟೋಲ್ ಪ್ಲಾಜಾಗಳಲ್ಲಿ ಪ್ರತಿಭಟನೆ ನಡೆಸಿದರು.

ಚುರೂಣಿ ಬಣವು ಕುರುಕ್ಷೇತ್ರ, ಯಮುನಾನಗರ, ಸಿರ್ಸಾ ಮುಂತಾದೆಡೆ ಟ್ರ್ಯಾಕ್ಟರ್ ರ್‍ಯಾಲಿ ನಡೆಸಿತು. 150 ಟ್ರ್ಯಾಕ್ಟರ್‌ಗಳು ಮೆರವಣಿಗೆಯಲ್ಲಿ ಭಾಗಿಯಾಗಿದ್ದವು. ಈ ಸಂದರ್ಭದಲ್ಲಿ ರೈತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರು ನಡೆಸುತ್ತಿರುವ 'ದೆಹಲಿ ಚಲೋ' ಪ್ರತಿಭಟನೆಯು ಶನಿವಾರ ಐದನೇ ದಿನಕ್ಕೆ ಕಾಲಿಟ್ಟಿದೆ. ರೈತರು, ಪಂಜಾಬ್ ಮತ್ತು ಹರಿಯಾಣದ ಗಡಿಗಳಲ್ಲಿಯೇ ಉಳಿದಿದ್ದು ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಮಾತುಕತೆ: ಕೇಂದ್ರ ಸಚಿವ ಅರ್ಜುನ್ ಮುಂಡಾ, ಪೀಯೂಷ್ ಗೋಯಲ್ ಮತ್ತು ನಿತ್ಯಾನಂದ ರಾಯ್ ಅವರು ಭಾನುವಾರ ರೈತ ನಾಯಕರೊಂದಿಗೆ ನಾಲ್ಕನೇ ಸುತ್ತಿನ ಮಾತುಕತೆ ನಡೆಸಲಿದ್ದಾರೆ.



ಶಂಭು ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವುದರಿಂದ ಟ್ರ್ಯಾಕ್ಟರ್‌ಗಳನ್ನು ಹೆದ್ದಾರಿಯಲ್ಲಿಯೇ ನಿಲುಗಡೆ ಮಾಡಲಾಗಿದೆ —ಪಿಟಿಐ ಚಿತ್ರ

'ಕೇಂದ್ರ ಸುಗ್ರೀವಾಜ್ಞೆ ಹೊರಡಿಸಲಿ'

ರೈತರು ಬೆಳೆದ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಕಾನೂನು ಜಾರಿ ಮಾಡಲು ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಬೇಕು ಎಂದು ರೈತ ನಾಯಕ ಸರವನ್ ಸಿಂಗ್ ಪಂಧೇರ್ ಆಗ್ರಹಿಸಿದ್ದಾರೆ.

ಶಂಭು ಗಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೇಂದ್ರ ಸರ್ಕಾರಕ್ಕೆ 'ರಾಜಕೀಯ' ನಿರ್ಧಾರ ಕೈಗೊಳ್ಳುವ ಹಕ್ಕಿದೆ. ಸುಗ್ರೀವಾಜ್ಞೆ ತಂದಲ್ಲಿ ಎಂಎಸ್‌ಪಿಗೆ ಕಾನೂನಿನ ಖಾತ್ರಿ ದೊರಕಲಿದೆ. ಕೇಂದ್ರವು ರೈತರ ಏಳಿಗೆಯನ್ನು ಬಯಸುವುದಾದರೆ ತಕ್ಷಣವೇ ಸುಗ್ರೀವಾಜ್ಞೆ ಹೊರಡಿಸಲಿ' ಎಂದು ಹೇಳಿದ್ದಾರೆ.

'ಫೆ.21ರಂದು ಧರಣಿ'

ಮುಜಾಫ್ಫರ್‌ನಗರ (ಪಿಟಿಐ): ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈತರು ಉತ್ತರ ಪ್ರದೇಶ, ಹರಿಯಾಣ, ಪಂಜಾಬ್ ಮತ್ತು ಉತ್ತರಾಖಂಡದಲ್ಲಿ ಫೆ.21ರಂದು ಧರಣಿ ನಡೆಸಲಿದ್ದಾರೆ ಎಂದು ಭಾರತೀಯ ಕಿಸಾನ್ ಒಕ್ಕೂಟದ ನಾಯಕ ರಾಕೇಶ್ ಟಿಕಾಯತ್ ಶನಿವಾರ ತಿಳಿಸಿದರು.

ಇಲ್ಲಿ ನಡೆದ ಪಂಚಾಯತ್‌ನಲ್ಲಿ ಭಾಗವಹಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರವು ರೈತರ ಬೇಡಿಕೆಗಳಿಗೆ ಒಪ್ಪಿಗೆ ನೀಡದಿದ್ದಲ್ಲಿ ಫೆಬ್ರುವರಿ ಕೊನೆಯ ವಾರದಲ್ಲಿ ದೆಹಲಿವರೆಗೆ ಟ್ರ್ಯಾಕ್ಟರ್ ರ್‍ಯಾಲಿ ನಡೆಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ' ಎಂದರು.

ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಮಿಂಚಿದ ತ್ರಿಸಾ–ಗಾಯತ್ರಿ

ಚಾರಿತ್ರಿಕ ಚಿನ್ನದ ಮೇಲೆ ಭಾರತ ಕಣ್ಣು

ಶಾ ಆಲಂ, ಮಲೇಷ್ಯಾ (ಪಿಟಿಐ): ಭಾರತ ಮಹಿಳಾ ಬ್ಯಾಡ್ಮಿಂಟನ್ ತಂಡವು ಏಷ್ಯಾ ಟೀಮ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶಿಸಿತು. ಇದೇ ಮೊದಲ ಬಾರಿಗೆ ಭಾರತ ತಂಡವು ಈ ಚಾರಿತ್ರಿಕ ಸಾಧನೆ ಮಾಡಿತು.

ಶನಿವಾರ ನಡೆದ ರೋಚಕ ಸೆಮಿಫೈನಲ್ ನಲ್ಲಿ ಭಾರತ ತಂಡವು 3-2ರಿಂದ ಎರಡು ಬಾರಿಯ ಚಾಂಪಿಯನ್ ಜಪಾನ್ ಎದುರು ಜಯಭೇರಿ ಬಾರಿಸಿತು.

2016 ಮತ್ತು 2020ರಲ್ಲಿ ಭಾರತ ಪುರುಷರ ತಂಡಗಳು ಕಂಚಿನ ಪದಕಗಳನ್ನು ಜಯಿಸಿದ್ದವು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ಭಾರತದ ಜೋಡಿ ತ್ರಿಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್, 53ನೇ ರ‍್ಯಾಂಕಿಂಗ್ ಜೋಡಿ ಅಶ್ಮಿತಾ ಚಲಿಹಾ ಮತ್ತು 17 ವರ್ಷದ ಅನ್ಮೋಲ್ ಖರ್ಬ್ ಅವರು ಮೊದಲ ಹಾಗೂ ಎರಡನೇ ಡಬಲ್ಸ್‌ಗಳಲ್ಲಿ ಜಯಿಸಿದರು. ಇದರಿಂದಾಗಿ ತಂಡದ ಫೈನಲ್ ಹಾದಿ ಸುಗಮವಾಯಿತು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡವು ಥಾಯ್ಲೆಂಡ್ ಬಳಗವನ್ನು ಎದುರಿಸಲಿದೆ.



ಭಾರತದ ತ್ರಿಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ –ಪಿಟಿಐ ಚಿತ್ರ

ಜಪಾನ್ ತಂಡದಲ್ಲಿ ಒಲಿಂಪಿಯನ್ ಅಕಾನೆ ಯಮಗುಚಿ ಇರಲಿಲ್ಲ. ಆದರೂ ತಂಡವು ಪ್ರಬಲ ಪೈಪೋಟಿಯಡ್ಡಿತು. ಮೊದಲ ಡಬಲ್ಸ್‌ನಲ್ಲಿ ತ್ರಿಸಾ – ಗಾಯತ್ರಿ 21-17, 16-21, 22-20ರಿಂದ ನಮಿ ಮತ್ಸುಯಾಮಾ-ಚಿಹಾರು ಶಿಡಾ ವಿರುದ್ಧ 73 ನಿಮಿಷಗಳ ಪೈಪೋಟಿಯಲ್ಲಿ ಜಯಿಸಿದರು.

ಆದರೆ ಸಿಂಗಲ್ಸ್‌ನಲ್ಲಿ ಒಲಿಂಪಿಯನ್ ಪಿ.ವಿ. ಸಿಂಧು 13-21, 20-22 ರಿಂದ ಎಡಗೈ ಆಟಗಾರ್ತಿ ಅಯಾ ಒಹೊರಿ ವಿರುದ್ಧ ಮಣಿದರು. ಇದರಿಂದಾಗಿ 1-1ರ ಸಮಬಲವಾಯಿತು.

ಇನ್ನೊಂದು ಸಿಂಗಲ್ಸ್‌ನಲ್ಲಿ ಎಡಗೈ ಆಟಗಾರ್ತಿ ಅಶ್ಮಿತಾ 21-17, 21-14ರಿಂದ ಮಾಜಿ ವಿಶ್ವ ಚಾಂಪಿಯನ್ ನೊಜೊಮಿ ಒಕುಹರಾ ವಿರುದ್ಧ ಮೇಲುಗೈ ಸಾಧಿಸಿದರು. ಆಕರ್ಷಕ ಕ್ರಾಸ್ ಡ್ರಾಪ್, ಜಂಪ್ ಸ್ಮ್ಯಾಷ್‌ಗಳ ಮೂಲಕ ಎದುರಾಳಿಗೆ ಆಘಾತ ನೀಡಿದರು.

ಇನ್ನೊಂದು ಡಬಲ್ಸ್‌ನಲ್ಲಿ ತನಿಷಾ ಕ್ರಸ್ಟೊ ಗಾಯಗೊಂಡ ಕಾರಣ ಅಶ್ವಿನಿ ಪೊನ್ನಪ್ಪ ಅವರೊಂದಿಗೆ ಕಣಕ್ಕಿಳಿದ ಪಿ.ವಿ.ಸಿಂಧು 14-21, 11-21 ರಿಂದ ರೆನಾ ಮಿಯಾರಾ ಮತ್ತು ಅಯಾಕೊ ಸಕುರಾಮೊಟೊ ವಿರುದ್ಧ ಸೋತರು. ಇದರಿಂದಾಗಿ 2-2ರ ಸಮಬಲವಾಯಿತು. ಇನ್ನೊಂದು ಪಂದ್ಯದಲ್ಲಿ ಯುವ ಆಟಗಾರ್ತಿ ಅನ್ಮೋಲ್ 21-14, 21-18ರಿಂದ 29ನೇ ರ‍್ಯಾಂಕಿನ ಆಟಗಾರ್ತಿ ನತ್ಸುಕಿ ನಿದೈರಾ ವಿರುದ್ಧ ಜಯಿಸಿದರು.

ಮನೀಷ್ ಪಾಂಡೆ ಅಬ್ಬರದ ಆಟ

ರಣಜಿ; ಕರ್ನಾಟಕಕ್ಕೆ ಇನಿಂಗ್ಸ್ ಮುನ್ನಡೆ, ಹಾರ್ದಿಕ್ ರಾಜ್ ಆಲ್‌ರೌಂಡ್ ಆಟ

• ಸತೀಶ ಬಿ.

ಹುಬ್ಬಳ್ಳಿ: ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶನಿವಾರ ನೆತ್ತಿ ಸುಡುವ ಬಿಸಿಲಿನಲ್ಲೂ ಅಬ್ಬರಿಸಿದ ಮನೀಷ್ ಪಾಂಡೆ ಚುರುಕಾದ ಶತಕ ಸಿಡಿಸಿದರು.

ಪಾಂಡೆ (ಬ್ಯಾಟಿಂಗ್ 102; 101ಎ, 4X14, 6X3) ಗಳಿಸಿದ ಶತಕದ ನೆರವಿನಿಂದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 1 ರನ್ ಮುನ್ನಡೆ ಗಳಿಸಿತು. ಚಂಡೀಗಢ ತಂಡವು ಗಳಿಸಿದ್ದ 267 ರನ್‌ಗಳಿಗೆ ಉತ್ತರವಾಗಿ ಕರ್ನಾಟಕವು ಎರಡನೇ ದಿನದಾಟದ ಅಂತ್ಯಕ್ಕೆ 63 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 268 ರನ್ ಗಳಿಸಿತು.

71 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದ ಮನೀಷ್, ಶತಕ ಪೂರೈಸಲು ಕೇವಲ 24 ಎಸೆತ ತೆಗೆದುಕೊಂಡರು. ಇದು ಈ ಋತುವಿನಲ್ಲಿ ಅವರ 3ನೇ ಮತ್ತು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 25ನೇ ಶತಕ. ಅವರು ಮಧ್ಯಮವೇಗಿ ಹರತೇಜಸ್ವಿ ಕಪೂರ್ ಹಾಕಿದ ಇನಿಂಗ್ಸ್‌ನ 55 ಓವರ್‌ನಲ್ಲಿ ಎರಡು ಬೌಂಡರಿ, ಒಂದು ಸಿಕ್ಸರ್ ಸಹಿತ 17 ರನ್ ಚಚ್ಚಿದರು.

ನಾಲ್ಕನೇ ವಿಕೆಟ್‌ಗೆ ಹಾರ್ದಿಕ್ ರಾಜ್ ಪಾಲುದಾರಿಕೆಯಲ್ಲಿ 153 (188) ರನ್ ಗಳಿಸಿದರು. 17 ವರ್ಷದ ಹಾರ್ದಿಕ್ (ಬ್ಯಾಟಿಂಗ್ 49; 116ಎ, 4X4) ಎದುರಾಳಿ ಬೌಲರ್‌ಗಳ ಬೌನ್ಸ-ರ್‌ಗಳನ್ನು ಸಮರ್ಥವಾಗಿ ಎದುರಿಸಿ, ಮನೀಷ್‌ಗೆ ಬೆಂಬಲ ನೀಡಿದರು. ಚೆಂಡು ಹೆಲ್ಮೆಟ್, ಎಡಗೈ ತೋಳಿಗೆ ಬಡಿದರೂ ಎದೆಗುಂದದೆ ಆಟ ಮುಂದುವರಿಸಿದರು.



ಶತಕ ಗಳಿಸಿದ ಕರ್ನಾಟಕ ತಂಡದ ಮನಿಷ್ ಪಾಂಡೆ ಅವರ ಬ್ಯಾಟಿಂಗ್ ವೈಖರಿ -ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಇದಕ್ಕೂ ಮುನ್ನ ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡ ಆರಂಭಿಕ ಆಘಾತ ಅನುಭವಿಸಿತು. ತಂಡದ ಮೊತ್ತ 8 ರನ್‌ಗಳಾಗಿದ್ದಾಗ ಆರಂಭಿಕ ಆಟಗಾರ ಆರ್.ಸಮರ್ಥ್ (4) ನಿರ್ಗಮಿಸಿದರು.

ಈ ಹಂತದಲ್ಲಿ ತಂಡದ ನಾಯಕ ಮಯಂಕ್ ಅಗರವಾಲ್ ಮತ್ತು ಉಪನಾಯಕ ನಿಕಿನ್ ಜೋಸ್ ಎರಡನೇ ವಿಕೆಟ್‌ಗೆ 70 (105 ಎ) ರನ್ ಸೇರಿಸಿ, ವಿಕೆಟ್ ಪತನ ತಡೆದರು.

ಅರ್ಧಶತಕ ಗಳಿಸಿದ್ದ ಮಯಂಕ್ (57; 90ಎ, 4X9, 6X1) ಅವರನ್ನು ಕರಣ್ ಕೈಲಾ ಬೌಲ್ಡ್ ಮಾಡಿದರು. ಮಯಂಕ್ ಅವರಿಗೆ ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ನೂರನೇ ಪಂದ್ಯ. ನಿಕಿನ್ (37) ಹರತೇಜಸ್ವಿ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಮಯಂಕ್ ಸಿಧುಗೆ ಕ್ಯಾಚಿತ್ತರು. 6ಕ್ಕೆ 219 ರನ್‌ಗಳೊಂದಿಗೆ ಶನಿವಾರ ಎರಡನೇ ದಿನದಾಟ ಮುಂದುವರಿಸಿದ ಚಂಡೀಗಢ ತಂಡ ಅದಕ್ಕೆ 48 ರನ್ ಸೇರಿಸಿ, 106.4 ಓವರ್‌ಗಳಲ್ಲಿ 267 ರನ್‌ಗಳಿಸಿತು.

ವೈಶಾಖ ವಿಜಯಕುಮಾರ್ ಎಸೆತದಲ್ಲಿ ಗುರಿಂದರ್ ಸಿಂಗ್ (16) ಬೌಲ್ಡ್ ಆದರೆ, ಮಯಂಕ್ ಸಿಧು (31) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಬೆಳಿಗ್ಗೆ ಪಾನೀಯ ವಿರಾಮದ ನಂತರ ದಾಳಿಗಿಳಿದ ಹಾರ್ದಿಕ್ ರಾಜ್ ಕೊನೆಯ ಎರಡು ವಿಕೆಟ್ ಉರುಳಿಸಿದರು. ವೈಶಾಖ ವಿಜಯಕುಮಾರ್ ಮತ್ತು ಹಾರ್ದಿಕ್ ತಲಾ 4 ವಿಕೆಟ್ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಚಂಡೀಗಢಕ್ಕೆ 5 ರನ್ ದಂಡ: ವಿಕೆಟ್ ಕೀಪರ್ ಹಿಂದೆ ಇಟ್ಟಿದ್ದ ಹೆಲ್ಮೆಟ್‌ಗೆ ಚೆಂಡು ಬಡಿದಿದ್ದರಿಂದ ಚಂಡೀಗಢ ತಂಡಕ್ಕೆ ಐದು ರನ್‌ಗಳ ದಂಡ ವಿಧಿಸಲಾಯಿತು. ಇದರಿಂದ ಕರ್ನಾಟಕ ತಂಡದ ಖಾತೆಗೆ ಐದು ರನ್ ಸೇರ್ಪಡೆಯಾದವು.

ಶನಿವಾರ ಬ್ಯಾಟಿಂಗ್ ಮಾಡುತ್ತಿದ್ದ ಹಾರ್ದಿಕ್ ರಾಜ್, ರೋಹಿತ್ ಧಂಡಾ ಹಾಕಿದ ಎಸೆತವನ್ನು ಬಾರಿಸಿದರು. ಚೆಂಡು ವಿಕೆಟ್ ಕೀಪರ್ ಹಿಂದೆ ಇಟ್ಟಿದ್ದ ಹೆಲ್ಮೆಟ್‌ಗೆ ತಾಗಿತು. ಅಂಪೈರ್ ಸ್ವರೂಪಾನಂದ ಅವರು ಚಂಡೀಗಢ ತಂಡಕ್ಕೆ 5 ರನ್‌ಗಳ ದಂಡ ವಿಧಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಚಂಡೀಗಢ 267 (106.4 ಓವರ್) ಶುಕ್ರವಾರ 89 ಓವರ್‌ಗಳಲ್ಲಿ 6ಕ್ಕೆ 219 (ಸಿಧು 31, ಜಗಜೀತ್ 25, ವೈಶಾಖ 77ಕ್ಕೆ 4, ಹಾರ್ದಿಕ್ ರಾಜ್ 56ಕ್ಕೆ4) ಮೊದಲ ಇನಿಂಗ್ಸ್: ಕರ್ನಾಟಕ 3ಕ್ಕೆ 268 (63 ಓವರ್) (ಮಯಂಕ್ ಅಗರವಾಲ್ 57 , ನಿಕಿನ್ ಜೋಸ್ 37, ಹಾರ್ದಿಕ್ ಔಟಾಗದೆ 49, ಮನೀಷ್ ಪಾಂಡೆ ಔಟಾಗದೆ 102, ಜಗಜೀತ್ ಸಿಂಗ್ ಸಿಂಧು 34ಕ್ಕೆ 1, ಹರತೇಜಸ್ವಿ 43ಕ್ಕೆ 1)

ಬೆಂಗಳೂರು ಓಪನ್ ಟನಿಸ್: ಸೆಮಿಫೈನಲ್‌ನಲ್ಲಿ ಮುಗ್ಗರಿಸಿದ ನಗಾಲ್

ಸಾಕೇತ್-ರಾಮಕುಮಾರ್‌ಗೆ ಡಬಲ್ಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸಾಕೇತ್ ಮೈನೇನಿ ಮತ್ತು ರಾಮಕುಮಾರ್ ರಾಮನಾಥನ್ ಜೋಡಿ ಫ್ರಾನ್ಸ್‌ನ ಕಾನ್ಸ್ಟಾಂಟಿನ್ ಕೌಜ್ಮೈನ್ ಮತ್ತು ಮ್ಯಾಕ್ಸಿಮ್ ಜಾನ್ವಿಯರ್ ಅವರನ್ನು ಸೋಲಿಸಿ ಇಲ್ಲಿ ನಡೆಯುತ್ತಿರುವ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು. ಆದರೆ ಭಾರತದ ಅಗ್ರಗಣ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅಭಿಯಾನ ಸೆಮಿಫೈನಲ್‌ನಲ್ಲಿ ಕೊನೆಗೊಂಡಿತು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಂಗಣದಲ್ಲಿ ನಡೆದ ಡಬಲ್ಸ್ ಫೈನಲ್‌ನಲ್ಲಿ ಉತ್ತಮ ಆಟ ಪ್ರದರ್ಶಿಸಿದ ಮೈನೇನಿ- ರಾಮಕುಮಾರ್ 6-3, 6-4 ರಿಂದ ಗೆದ್ದು ಕಿರೀಟ ಮುಡಿಗೇರಿಸಿ-ಕೊಂಡರು. ಕಾನ್ಸ್ಟಾಂಟಿನ್- ಮ್ಯಾಕ್ಸಿಮ್ ರನ್ನರ್ಸ್ ಅಪ್ ಆದರು.



ಭಾರತದ ಸಾಕೇತ್ ಮೈನೇನಿ ಮತ್ತು ರಾಮಕುಮಾರ್ ರಾಮನಾಥನ್ ಜೋಡಿ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು. ಪ್ರಜಾವಾಣಿ ಚಿತ್ರ–ಎಸ್.ಕೆ.ದಿನೇಶ್

ನಾಲ್ಕರ ಘಟ್ಟದ ಪಂದ್ಯದಲ್ಲಿ ಇಟಲಿಯ ಸ್ಟಿಫಾನೊ ನೆಪೋಲಿಟಾನೊ 7-6 (2), 6-4ರಿಂದ ನಗಾಲ್ ಅವರನ್ನು ಸೋಲಿಸಿದರು. ಏಳನೇ ಶ್ರೇಯಾಂಕದ ಸ್ಟಿಫಾನೊ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಒಂಬತ್ತನೇ ಶ್ರೇಯಾಂಕದ ದಕ್ಷಿಣ ಕೊರಿಯಾ ಆಟಗಾರ ಸಿಯಾಂಗ್‌ಚಾನ್ ಹಾಂಗ್ ವಿರುದ್ಧ ಆಡುವರು. 26 ವರ್ಷದ ನಗಾಲ್ ಮೊದಲ ಸೆಟ್‌ನಲ್ಲಿ 4-1ರ ಆರಂಭಿಕ ಮುನ್ನಡೆ ಗಳಿಸಿದರು. ಈ ಹಂತದಲ್ಲಿ ಇಟಲಿ ಆಟಗಾರ ತಿರುಗೇಟು ನೀಡಲು ಆರಂಭಿಸಿದರು. ಅವರ ನಿಖರವಾದ ಸರ್ವ್‌ಗಳನ್ನು ಆಡಿದ ಅವರು ಒಂದೆರಡು ಬ್ರೇಕ್ ಪಾಯಿಂಟ್ ಕೂಡ ಉಳಿಸಿಕೊಂಡರು. ಇಬ್ಬರ ನಡುವೆಯೂ ತುರುಸಿನ ಪೈಪೋಟಿ ಕಂಡ ಈ ಸೆಟ್ ಟೈಬ್ರೇಕರ್‌ಗೆ ಹೋಯಿತು. ಕೆಲವು ತಪ್ಪುಗಳನ್ನು ಮಾಡಿದ ನಗಾಲ್ ಹಿನ್ನಡೆ ಅನುಭವಿಸಿರು. ತಮಗೆ ಸಿಕ್ಕ ಅವಕಾಶಗಳನ್ನು ಸ್ಟಿಫಾನೊ ಸಮರ್ಥವಾಗಿ ಬಳಸಿಕೊಂಡರು.

ಇದೇ ವೇಳೆ ನಗಾಲ್ ಅವರನ್ನು ಕೆಎಸ್‌ಎಲ್‌ಟಿಎ ಹಿರಿಯ ಉಪಾಧ್ಯಕ್ಷರೂ ಆಗಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು ₹5 ಲಕ್ಷ ನಗದು ನೀಡಿ ಸನ್ಮಾನಿಸಿದರು. ಕಾರ್ಯದರ್ಶಿ ಮಹೇಶ್ವರ್ ರಾವ್, ಟೂರ್ನಿ ನಿರ್ದೇಶಕ ಸುನಿಲ್ ಯಜಮಾನ್ ಹಾಜರಿದ್ದರು.

ಸಂತೋಷ್ ಟ್ರೋಫಿಗೆ ಕರ್ನಾಟಕ ತಂಡ: ಮನೋಜ್ ನಾಯಕ

ಬೆಂಗಳೂರು: ಮನೋಜ್ ಸ್ವಾಮಿ ಕಣ್ಣನ್ ಅವರು ಇದೇ 21 ರಿಂದ ಮಾರ್ಚ್ 9ರವರೆಗೆ ಅರುಣಾಚಲ ಪ್ರದೇಶದಲ್ಲಿ ಸಂತೋಷ್ ಟ್ರೋಫಿಗಾಗಿ ನಡೆಯಲಿರುವ 77ನೇ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡವನ್ನು ಮುನ್ನಡೆ-ಸಲಿದ್ದಾರೆ.

ಸೌದಿ ಅರೇಬಿಯಾದಲ್ಲಿ ನಡೆದಿದ್ದ ಕೊನೆಯ ಆವೃತ್ತಿಯ ಚಾಂಪಿಯನ್ ಆಗಿರುವ ಕರ್ನಾಟಕ ತಂಡ 'ಬಿ' ಗುಂಪಿನಲ್ಲಿದ್ದು ಫೆ. 22 ರಂದು ನಡೆಯುವ ಮೊದಲ ಪಂದ್ಯದಲ್ಲಿ ದೆಹಲಿಯನ್ನು ಎದುರಿಸಲಿದೆ. 24ರಂದು ಮಿಜೋರಾಂ, 26ರಂದು ಮಣಿಪುರ, 29ರಂದು ರೈಲ್ವೇಸ್ ಮತ್ತು ಅಂತಿಮ ಪಂದ್ಯದಲ್ಲಿಮ ಹಾರಾಷ್ಟ್ರ ವಿರುದ್ಧ ಆಡಲಿದೆ.

ಮಾರ್ಚ್ 4ರಿಂದ ಕ್ವಾರ್ಟರ್‌ಫೈನಲ್ ಪಂದ್ಯಗಳು ನಡೆಯಲಿವೆ.

ತಂಡ ಹೀಗಿದೆ: ಕಬೀರ್ ತೌಫಿಕ್, ಕ್ರಿಸ್ತರಾಜನ್, ಶ್ರೀಜಿತ್ ಆರ್, ನಿಖಿಲ್ ಜಿ., ಜಾನ್ ಪೀಟರ್, ಪ್ರಬಿನ್ ತಿಗ್ಗಾ, ಶಾನಿದ್ ವಲನ್, ಮನೋಜ್ ಸ್ವಾಮಿ ಕಣ್ಣನ್ (ನಾಯಕ), ವಿ.ಸುರೇಂದ್ರ ಪ್ರಸಾದ್, ಬಿ.ಎಸ್.ಮೃಣಾಲ್ ಮುತ್ತಣ್ಣ, ಪ್ರಶಾಂತ್ ಕಾಳಿಂಗ, ವಿಶಾಲ್ ಆರ್., ವಿನಿತ್ ವೆಂಕಟೇಶ್, ಎ. ಮೊಹಮ್ಮದ್ ಮೊಯಿನುದ್ದೀನ್, ಕಾರ್ತಿಕ್ ಗೋವಿಂದ್ ಸ್ವಾಮಿ, ಸತೀಶ್ ಕುಮಾರ್, ಗಾಡ್ವಿನ್ ಜಾನ್ಸನ್, ರಶೀದ್ ಸಿ.ಕೆ., ಅಪ್ಪು, ಡಿ ಶೆಲ್ಟೋನ್ ಪಾಲ್, ನಿಖಿಲ್ ರಾಜ್ ಮುರುಗೇಶ್ ಕುಮಾರ್ ಮತ್ತು ವಿಘ್ನೇಶ್ ವಿ. ಮುಖ್ಯ ಕೋಚ್: ಆರ್.ರವಿಬಾಬು, ಸಹಾಯಕ ಕೋಚ್: ಸುನಿಲ್ ಕುಮಾರ್. ಗೋಲ್‌ಕೀಪಿಂಗ್ ಕೋಚ್: ಎಸ್.ರಾಜನ್. ಮ್ಯಾನೇಜರ್: ಸರವಣ ಧರ್ಮನ್.

ಎಫ್‌ಸಿಐಗೆ ₹21 ಸಾವಿರ ಕೋಟಿ ಬಂಡವಾಳ ನಿಗದಿ

ನವದೆಹಲಿ (ಪಿಟಿಐ): ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಕಾರ್ಯಾಚರಣೆಯ ಸಾಮರ್ಥ್ಯ-ವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು, ನಿಗಮದ ಅಧಿಕೃತ ಬಂಡವಾಳವನ್ನು ₹10 ಸಾವಿರ ಕೋಟಿಯಿಂದ ₹21 ಸಾವಿರ ಕೋಟಿಗೆ ಹೆಚ್ಚಿಸಿದೆ ಎಂದು ಕೇಂದ್ರ ಆಹಾರ ಸಚಿವಾಲಯವು ಶನಿವಾರ ತಿಳಿಸಿದೆ.

ಆಹಾರ ನಿಗಮವು ರೈತರಿಂದ ಕನಿಷ್ಠ ಬೆಂಬಲ ಬೆಲೆಯಡಿ ಕೃಷಿ ಉತ್ಪನ್ನಗಳನ್ನು ಖರೀದಿಸುವ ಕೇಂದ್ರದ ಪ್ರಮುಖ ನೋಡೆಲ್ ಏಜೆನ್ಸಿಯಾಗಿದೆ. ಅಲ್ಲದೇ, ಸರ್ಕಾರದ ವಿವಿಧ ಕಲ್ಯಾಣ ಕಾರ್ಯಕ್ರಮಗಳಡಿ ವಿತರಿಸುವ ಆಹಾರ ಧಾನ್ಯಗಳನ್ನು ದಾಸ್ತಾನು ಮಾಡುತ್ತದೆ. ಇದರ ವೆಚ್ಚದ ನಿರ್ವಹಣೆಗಾಗಿ ನಿಗಮವು ಸಾಲಕ್ಕಾಗಿ ಬ್ಯಾಂಕ್‌ಗಳ ಮೊರೆ ಹೋಗುತ್ತದೆ. ಈಗ ಬಂಡವಾಳ ಹೆಚ್ಚಿಸಿರುವುದು ನಿಗಮದ ಕಾರ್ಯ ಚಟುವಟಿಕೆಗಳು ಸುಗಮವಾಗಿ ಸಾಗಲು ಸಹಕಾರಿಯಾಗಲಿದೆ ಎಂದು ಸಚಿವಾಲಯ ಹೇಳಿದೆ.

ಬಂಡವಾಳ ಹೆಚ್ಚಿಸಿರುವು-ದರಿಂದ ನಿಗಮದ ಸಾಲದ ಬಡ್ಡಿ ಹೊರೆಯೂ ತಗ್ಗಲಿದೆ. ಆರ್ಥಿಕ ವೆಚ್ಚ ಕೂಡ ಕಡಿಮೆಯಾಗಲಿದೆ. ಅಲ್ಲದೇ ಆಧುನಿಕ ದಾಸ್ತಾನು ಸೌಲಭ್ಯ, ತಂತ್ರಜ್ಞಾನ ಅಳವಡಿಕೆ, ಸಾಗಣೆ ಜಾಲದ ಸುಧಾರಣೆ ಹಾಗೂ ಶೈತ್ಯಾಗಾರಗಳನ್ನು ಮೇಲ್ದರ್ಜೆ-ಗೇರಿಸಲು ಸಹಕಾರಿಯಾಗಲಿದೆ. ಸಮರ್ಪಕವಾಗಿ ಗ್ರಾಹಕರಿಗೆ ಆಹಾರ ಧಾನ್ಯಗಳ ವಿತರಣೆಗೆ ಅನುಕೂಲ-ವಾಗಲಿದೆ ಎಂದು ಹೇಳಿದೆ.

ವಿಯೆಟ್ನಾಂ ಸರಕು ಭಾರತಕ್ಕೆ ಲಗ್ಗೆ: ಬೆಳೆಗಾರರು ಕಂಗಾಲು

ಕಾಳುಮೆಣಸು ದರ ಕುಸಿತ

• ರಾಜೇಂದ್ರ ಹೆಗಡೆ

ಶಿರಸಿ: ಸ್ಥಳೀಯ ಮಾರುಕಟ್ಟೆಯಲ್ಲಿ ಕಾಳುಮೆಣಸಿನ ದರ ಕುಸಿದಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ಒಂದು ವಾರದ ಹಿಂದೆ ಪ್ರತಿ ಕ್ವಿಂಟಲ್‌ಗೆ ₹60 ಸಾವಿರ ಆಸುಪಾಸಿ-ನಲ್ಲಿದ್ದ ದರವು ಈಗ ₹54 ಸಾವಿರಕ್ಕೆ ಇಳಿಕೆಯಾಗಿದೆ. ಎರಡು ವರ್ಷಗಳಿಂದ ಸ್ಥಿರವಾಗಿದ್ದ ದರ ಹಂಗಾಮಿನ ಆರಂಭದಲ್ಲೇ ಇಳಿಮುಖವಾಗಿದೆ. ಇದರಿಂದ ಬೆಳೆಗಾರರಿಗೆ ದಿಕ್ಕು ತೋಚದಂತಾಗಿದೆ.

ಶಿರಸಿ ಎಪಿಎಂಸಿ ವ್ಯಾಪ್ತಿಯಲ್ಲಿ ವಾರದ ಹಿಂದೆ ಪ್ರತಿ ಕ್ವಿಂಟಲ್ ಕಾಳುಮೆಣಸಿಗೆ ₹61 ಸಾವಿರ ಗರಿಷ್ಠ ದರ ಇತ್ತು. ದಿಢೀರ್ ಕುಸಿತದಿಂದ ಈ ವರ್ಷ ಹೊಸ ಸರಕನ್ನು ಮಾರುಕಟ್ಟೆಗೆ ಪೂರೈಸಲು ಬೆಳೆಗಾರರು ಹಿಂದೇಟು ಹಾಕುತ್ತಿದ್ದಾರೆ.



ಕೊಯ್ಲು ಮಾಡಿ ಬಿಸಿಲಿಗೆ ಒಣಗಲು ಹಾಕಿರುವ ಹಸಿ ಕಾಳುಮೆಣಸು

ವಿಯೆಟ್ನಾಂನಲ್ಲಿ ಕಾಳುಮೆಣಸಿನ ದರ ಪ್ರತಿ ಕ್ವಿಂಟಲ್‌ಗೆ ₹38 ಸಾವಿರದಿಂದ ₹42 ಸಾವಿರ ಇದೆ. ಅಲ್ಲಿಂದ ಅಪಾರ ಪ್ರಮಾಣದಲ್ಲಿ ಭಾರತಕ್ಕೆ ಆಮದು ಮಾಡಿಕೊಳ್ಳಲಾಗುತ್ತಿದೆ. ಹಾಗಾಗಿ,

ಕಾಳುಮೆಣಸಿನ ದರವು ಏರಿಳಿತವಾಗುತ್ತಿದೆ. ಬೆಳೆಗಾರರು ಆತಂಕಕ್ಕೆ ಒಳಗಾಗದೇ ಕಾದು ನೋಡುವುದು ಸೂಕ್ತ

ವಿಜಯಾನಂದ ಭಟ್, ಪ್ರಭಾರ ಪ್ರಧಾನ ವ್ಯವಸ್ಥಾಪಕ, ತೋಟಗಾರ್ಸ್ ಕೋ–ಆಪರೇಟಿವ್ ಸೇಲ್ ಸೊಸೈಟಿ (ಟಿಎಸ್‌ಎಸ್)

ಉತ್ತರ ಭಾರತದ ರಾಜ್ಯಗಳ ಬಹುತೇಕ ಮಾರುಕಟ್ಟೆಗಳಲ್ಲಿ ಕಡಿಮೆ ಬೆಲೆಗೆ ಲಭಿಸುತ್ತಿದೆ ಎನ್ನುತ್ತಾರೆ ವ್ಯಾಪಾರಿಗಳು.

'ಸ್ಥಳೀಯ ಮಾರುಕಟ್ಟೆಯಲ್ಲಿ ವಿದೇಶಿ ಸರಕನ್ನು ಅಗ್ಗದ ದರಕ್ಕೆ ಮಾರುತ್ತಿರುವುದೇ ಧಾರಣೆ ಕುಸಿತಕ್ಕೆ ಕಾರಣವಾಗಿದೆ. ಪ್ರಸಕ್ತ ವರ್ಷ ಮಳೆ ಕೊರತೆಯಿಂದ ಸ್ಥಳೀಯವಾಗಿ ಬೆಳೆದಿರುವ ಕಾಳಿನ ಗಾತ್ರವೂ ಕಡಿಮೆ ಆಗಿದೆ. ಇದು ಕೂಡ ಮಾರುಕಟ್ಟೆಯಲ್ಲಿ ದರ ಕುಸಿಯಲು ಕಾರಣವಾಗಿದೆ' ಎಂದು ಮಾರುಕಟ್ಟೆ ತಜ್ಞರು ಹೇಳುತ್ತಾರೆ.

ಬೆಳೆಗಾರರ ಹಿತ ಕಾಪಾಡಲು ಮನವಿ:'ರಾಜ್ಯದ ಉತ್ತರ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಭಾಗದಲ್ಲಿ ಹೆಚ್ಚಾಗಿ ಕಾಳುಮೆಣಸು ಬೆಳೆಯಲಾಗುತ್ತದೆ. ದೇಶದಲ್ಲಿ ವಾರ್ಷಿಕ ಉತ್ಪಾದನೆ 70 ಸಾವಿರ ಟನ್ ಇದೆ. ಇದರಲ್ಲಿ ಕರ್ನಾಟಕದ ಪಾಲು 33 ಸಾವಿರ ಟನ್‌ನಷ್ಟಿದೆ' ಎಂದು ಶಿರಸಿಯ ಬೆಳೆಗಾರ ಸತೀಶ ಹೆಗಡೆ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ಥಳೀಯ ಬೆಳೆಗಾರರ ಹಿತದೃಷ್ಟಿಯಿಂದ ಕಾಳುಮೆಣಸಿಗೆ ಸ್ಥಿರ ದರ ಲಭಿಸುವಂತೆ ಸರ್ಕಾರ ಅಗತ್ಯ ಕ್ರಮವಹಿಸಬೇಕು. ಅಕ್ರಮ ಆಮದಿಗೂ ಕಡಿವಾಣ ಹಾಕಬೇಕು' ಎಂದು ಒತ್ತಾಯಿಸಿದರು.

ಮುಂಬೈ ಧಾರಣೆ

ಶೇಂಗಾ

17-2-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1450)
ಒಂದು ವಾರದ ಡೆಲಿವರಿ	1465 (1445)
ಸೋಯಾ ಕಚ್ಚಾ	850 (850)
ಪಾಮ್ ವಾರದ ಡೆಲಿವರಿ	853 (853)
ಸೂರ್ಯಕಾಂತಿ ಎಣ್ಣೆ ಕಚ್ಚಾ	840 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹61,650 (61,350)

ಬೆಳ್ಳಿ ಕೆ.ಜಿ ₹71,600 (70,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹161

ಆರ್‌ಎಸ್‌ಎಸ್-5 ₹156

(ಪ್ರತಿ ಕೆ.ಜಿಗೆ) ಗುಡ್ ಲಾಟ್ ₹139

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1460 (1450)
ಸೋಯಾ (ರಿಫೈನ್ಡ್)	₹885 (885)
ಸೂರ್ಯಕಾಂತಿ (ರಿಫೈನ್ಡ್)	₹905 (910)
ಪಾಮೋಲಿನ್	₹850 (855)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹123-456

ದ್ವಿತಳಿ (ಬಿ.ವಿ) ₹255-544

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100ಕ್ಕೆ	₹600
12 ಕ್ಕೆ	₹80

ಮೈಸೂರು

100ಕ್ಕೆ	₹600

'ಗ್ರಾಹಕರ ನಂಬಿಕೆಯೇ ಜೀವಾಳ'

ಪರಂಪರೆ ಸಾರಲು 'ಭಾರತ್ ಕಾ ಕರ್ನಾಟಕ ಬ್ಯಾಂಕ್' ಅಭಿಯಾನ ಆರಂಭ

ಪ್ರಜಾವಾಣಿ ವಾರ್ತೆ



ಶೇಖರ್ ರಾವ್

ಬೆಂಗಳೂರು: 'ಕರ್ನಾಟಕ ಬ್ಯಾಂಕ್ ಶತಮಾನೋತ್ಸವದ ಸಂಭ್ರಮದಲ್ಲಿದೆ. ಇದರ ಅಂಗವಾಗಿ ಆರಂಭಿಸಿರುವ 'ಭಾರತ್ ಕಾ ಕರ್ನಾಟಕ ಬ್ಯಾಂಕ್' ಅಭಿಯಾನವು ನೂರು ವರ್ಷಗಳ ನಂಬಿಕೆ, ಶ್ರೇಷ್ಠತೆ ಹಾಗೂ ರಾಷ್ಟ್ರ ಸೇವೆಯ ಬದ್ಧತೆಗೆ ಕನ್ನಡಿ ಹಿಡಿಯಲಿದೆ' ಎಂದು ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಶೇಖರ್ ರಾವ್ ಹೇಳಿದ್ದಾರೆ.

'ಬ್ಯಾಂಕ್‌ನ ಪರಂಪರೆಯನ್ನು ಗುರುತಿಸುವಿಕೆ ಹಾಗೂ ಅದರ ಮಹತ್ವ ಸಾರುವುದೇ ಈ ಅಭಿಯಾನದ ಉದ್ದೇಶ. ರಾಜ್ಯದಲ್ಲಷ್ಟೇ ತನ್ನ ಈ ವಿಶಿಷ್ಟ ಪರಂಪರೆಯನ್ನು ಪಸರಿಸುತ್ತಿಲ್ಲ. ರಾಷ್ಟ್ರಮಟ್ಟಕ್ಕೂ ಇದನ್ನು ವಿಸ್ತರಿಸಿದೆ. ಬ್ಯಾಂಕ್‌ನ ಬ್ರ್ಯಾಂಡ್ ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸಲು ಅಭಿಯಾನ ನೆರವಾಗಲಿದೆ' ಎಂದು ಇ-ಮೇಲ್ ಮೂಲಕ 'ಪ್ರಜಾವಾಣಿ' ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸಿದ್ದಾರೆ.

'ಗ್ರಾಹಕರು ಮತ್ತು ಬ್ಯಾಂಕ್ ನಡುವಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ಆಶಯ ಹೊಂದಲಾಗಿದೆ. ಜೊತೆಗೆ, ಅವರನ್ನು ಬ್ಯಾಂಕ್‌ನ ಭಾಗವಾಗಿ ಪರಿಗಣಿಸುವ ಗುರಿಯನ್ನೂ ಹೊಂದಲಾಗಿದೆ' ಎಂದು ವಿವರಿಸುತ್ತಾರೆ.

ಗ್ರಾಮೀಣ ಆರ್ಥಿಕತೆ ಅಭಿವೃದ್ಧಿಗೆ ಒತ್ತು

ಕರ್ನಾಟಕದ ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯು ಪ್ರಗತಿಯ ಹಾದಿಯಲ್ಲಿದೆ. ಗ್ರಾಮೀಣ ಹಾಗೂ ಅರೆ ಪಟ್ಟಣ ಪ್ರದೇಶಗಳಲ್ಲಿ ಇರುವ ಬ್ಯಾಂಕ್‌ನ ಶಾಖೆಗಳ ಮೂಲಕ ಇದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಶೇಖರ್ ರಾವ್ ಹೇಳಿದ್ದಾರೆ.

ಕೋವಿಡ್ ಕಾಲಘಟ್ಟದಲ್ಲಿ ಗ್ರಾಮೀಣ ಆರ್ಥಿಕತೆಗೆ ಪೆಟ್ಟು ಬಿದ್ದಿತ್ತು. ಈಗ ಚೇತರಿಸಿಕೊಂಡಿದೆ. ಇದು ಸಾಲದ ಬೇಡಿಕೆಯನ್ನು ಹೆಚ್ಚಿಸಿದೆ. ಇದಕ್ಕೆ ಪೂರಕವಾಗಿ ಬ್ಯಾಂಕ್ ಸ್ಪಂದಿಸುತ್ತಿದೆ ಎಂಬುದು ಅವರ ವಿವರಣೆ.

ರಾಜ್ಯದ ಕೃಷಿಕರ ಅಭ್ಯುದಯಕ್ಕೆ ಬ್ಯಾಂಕ್ ಬದ್ಧವಾಗಿದೆ. ಕೃಷಿ ಹಿನ್ನೆಲೆ ಹೊಂದಿರುವ ಅಧಿಕಾರಿಗಳನ್ನೇ ರೈತರಿಗೆ ಅನುಕೂಲ ಕಲ್ಪಿಸಲು ನಿಯೋಜಿಸಿದ್ದೇವೆ. ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕ್‌ನ ನೆಟ್‌ವರ್ಕ್ ಸದೃಢವಾಗಿದೆ. ರೈತರ ಅಗತ್ಯತೆಗೆ ಅನುಗುಣವಾಗಿ ಅಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ ಎನ್ನುತ್ತಾರೆ ಅವರು.

ಬ್ಯಾಂಕ್‌ನಲ್ಲಿ ಕಾರ್ಪೊರೇಟ್ ವಲಯದ ಉದ್ಯೋಗಿಗಳ ಉಳಿತಾಯ ಖಾತೆ ತೆರೆಯುವುದು, ಮನೆ ಬಾಗಿಲಿಗೆ ಚಿನ್ನದ ಸಾಲ ಯೋಜನೆ ಸೇರಿದಂತೆ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಲಕ್ಷಾಂತರ ಗ್ರಾಹಕರ ಪಾಲುದಾರರಾಗಿರುವುದು ಹೆಮ್ಮೆಯ ಸಂಗತಿ ಎನ್ನುತ್ತಾರೆ ಅವರು.

ಅಪಾಯ ನಿರ್ವಹಣೆಗೆ ಕ್ರಮ: ಸಾಲ, ಮಾರುಕಟ್ಟೆ, ವಹಿವಾಟು, ಭದ್ರತೆ ಮತ್ತು ಕಾರ್ಯಾಚರಣೆಯ ಅಪಾಯ ತಡೆಗಟ್ಟುವ ಸಂಬಂಧ ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ರೂಪಿಸಿರುವ ಮಾರ್ಗಸೂಚಿಗಳನ್ನು ಬ್ಯಾಂಕ್ ಪಾಲಿಸುತ್ತಿದೆ. ಪೂರ್ವಭಾವಿಯಾಗಿ ಅಪಾಯದ ಮಟ್ಟವನ್ನು ಅರಿತು ಸಮರ್ಪಕವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಇದಕ್ಕಾಗಿಯೇ ತಂತ್ರಾಂಶಗಳನ್ನು ಅಳವಡಿಸಿದ್ದೇವೆ ಎನ್ನುತ್ತಾರೆ ಅವರು.

ಗುಣಮಟ್ಟದ ನಿರ್ವಹಣೆಗಾಗಿ (ಐಎಸ್‌ಒ9001;2015) ಪ್ರಮಾಣ ಪತ್ರ ಪಡೆದಿದೆ. ಅಪಾಯ ತಡೆಗಟ್ಟುವ ಸಂಬಂಧ ಬ್ಯಾಂಕ್‌ನ ವ್ಯವಹಾರಗಳು ಮತ್ತು ಕಾರ್ಯಾಚರಣೆ ಘಟಕಗಳಲ್ಲಿ ಸ್ವಯಂ ಮೌಲ್ಯಮಾಪನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಹಾಗಾಗಿ, ಪ್ರತಿ ಹಂತದಲ್ಲಿ ಎದುರಾಗುವ ಅಪಾಯವನ್ನು ಬಹುಬೇಗ ಅರಿತು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಸಹಕಾರಿಯಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಸೈಬರ್ ವಂಚನೆ ತಡೆಗೆ ಸಂಬಂಧಿಸಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಬ್ಯಾಂಕ್ ಬಹುಹಂತದ ಸೈಬರ್ ಭದ್ರತಾ ವ್ಯವಸ್ಥೆ ಹೊಂದಿದೆ. ಇದಕ್ಕಾಗಿಯೇ ಬೆಂಗಳೂರಿನಲ್ಲಿ ಪ್ರತ್ಯೇಕ ಕೇಂದ್ರ ತೆರೆಯಲಾಗಿದೆ. ಇದರ ನಿರ್ವಹಣೆಗೆ ತಂಡ ಕೂಡ ಇದೆ. ಇಡೀ ಭದ್ರತಾ ವ್ಯವಸ್ಥೆಯ ಮೇಲೆ ಆಡಳಿತ ಮಂಡಳಿಯು ನಿಗಾ ಇಟ್ಟಿದೆ ಎಂದು ವಿವರಿಸುತ್ತಾರೆ.

ಗ್ರಾಹಕ ಸ್ನೇಹಿ

ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಗೆ ಸಂಬಂಧಿಸಿದ ಹೊಸ ಅನ್ವೇಷಣೆಗಳಲ್ಲಿ ಬ್ಯಾಂಕ್ ಮುಂಚೂಣಿಯಲ್ಲಿದೆ. ಗ್ರಾಹಕರಿಗೆ ಆಧುನಿಕ ಬ್ಯಾಂಕಿಂಗ್ ಸವಲತ್ತು ಕಲ್ಪಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಎಲ್ಲಾ ವರ್ಗದ ಗ್ರಾಹಕರಿಗೆ ಗುಣಮಟ್ಟದ ಸೇವೆ ಒದಗಿಸುತ್ತಿದೆ ಎನ್ನುತ್ತಾರೆ ಶೇಖರ್ ರಾವ್.

ಕೋವಿಡ್ ಕಾಲಘಟ್ಟದಲ್ಲಿ ಬ್ಯಾಂಕ್ ಸಂಕಷ್ಟ ಎದುರಿಸಿತ್ತು. ಆ ಬಳಿಕ ಬ್ಯಾಂಕ್‌ನ ಸಂಪತ್ತು ಸದೃಢವಾಗಿದೆ. ಗ್ರಾಹಕ ಸ್ನೇಹಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ.

ಶತಮಾನೋತ್ಸವದ ಅಂಗವಾಗಿ ಎಲ್ಲಾ ವಲಯಗಳು ಮತ್ತು ಪ್ರಮುಖ ಮಹಾನಗರಗಳಲ್ಲಿ ಗ್ರಾಹಕರ ಭೇಟಿ ಕಾರ್ಯಕ್ರಮ ಆಯೋಜಿಸಲಾಗಿದೆ. ಇದಕ್ಕೆ ಗ್ರಾಹಕರಿಂದಲೂ ಉತ್ತಮ ಸ್ಪಂದನೆ ಸಿಕ್ಕಿದೆ ಎಂದು ವಿವರಿಸುತ್ತಾರೆ.

ಎಚ್‌ಎಸ್‌ಆರ್‌ಪಿ ಸಹಾಯವಾಣಿ ಆರಂಭ

ಬೆಂಗಳೂರು: ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ ಅಳವಡಿಸಲು ಆನ್‌ಲೈನ್‌ನಲ್ಲಿ ನೋಂದಣಿ ವೇಳೆ ಸಮಸ್ಯೆ ಉಂಟಾದರೆ ನೆರವಾಗಲು ಸಾರಿಗೆ ಇಲಾಖೆಯು ಸಹಾಯವಾಣಿಯನ್ನು ಆರಂಭಿಸಿದೆ. ಸಾರ್ವಜನಿಕರು ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಸಹಾಯವಾಣಿ 9449863429/26 ಸಂಪರ್ಕಿ-ಸಬಹುದು.

http://transport.karnataka.gov.in ಅಥವಾ www.siam.inಗೆ ಭೇಟಿ ನೀಡಿ ವಾಹನಗಳಿಗೆ ನೋಂದಣಿ ಫಲಕ ಅಳವಡಿಸಿಕೊಳ್ಳಲು ಆನ್‌ಲೈನ್ ಮೂಲಕ ವಿವರಗಳನ್ನು ಒದಗಿಸಬೇಕು. ಫಲಕ ಅಳವಡಿಸುವ ದಿನಾಂಕ, ವಾಹನ ಮಾರಾಟ ಕೇಂದ್ರದ ಹೆಸರು ಮತ್ತು ವಿಳಾಸ ಖಚಿತಪಡಿಸಿಕೊಳ್ಳಬೇಕು.

ಈ ವೆಬ್‌ಸೈಟ್‌ಗಳ ಮೂಲಕ ನೋಂದಣಿ ಮಾಡಿ ಅಳವಡಿಸಿದ ಎಚ್‌ಎಸ್‌ಆರ್‌ಪಿಗಳು ಮಾತ್ರ ಮಾನ್ಯತೆ ಹೊಂದಿರುತ್ತವೆ. ಇತರ ವೆಬ್ ಪೋರ್ಟಲ್ ಬಳಸಬಾರದು ಎಂದು ಸಾರಿಗೆ ಮತ್ತು ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಸಿಇಸಿ, ಮುಖ್ಯ ನ್ಯಾಯಮೂರ್ತಿ ಭಾಗಿ: ಆರೋಪ

'ಪಾಕ್ ಚುನಾವಣೆಯಲ್ಲಿ ಅಕ್ರಮ'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಚುನಾವಣಾ ಆಯೋಗದ ಮುಖ್ಯ ಆಯುಕ್ತ, ಮುಖ್ಯ ನ್ಯಾಯಮೂರ್ತಿ ಈಚೆಗೆ ಮುಗಿದ ಸಾರ್ವತ್ರಿಕ ಚುನಾವಣೆಯಲ್ಲಿ ಅಕ್ರಮದಲ್ಲಿ ಭಾಗಿಯಾಗಿದ್ದರು ಎಂದು ಅಧಿಕಾರಿ-ಯೊಬ್ಬರು ಆರೋಪಿಸಿದ್ದಾರೆ.

ಈ ಆರೋಪದ ಹಿಂದೆಯೇ, 'ಕರ್ತವ್ಯಲೋಪದ ಹೊಣೆಗಾರಿಕೆ' ಹೊತ್ತುಕೊಂಡು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಆ ಹಿರಿಯ ಅಧಿಕಾರಿ ಹೇಳಿದ್ದಾರೆ.

ರಾವಲ್ಪಿಂಡಿಯ ಮಾಜಿ ಆಯುಕ್ತ ಲಿಯಾಖತ್ ಅಲಿ ಛತ್ತಾ ಆರೋಪ ಮಾಡಿದ್ದು, ಸೋಲಬೇಕಾಗಿದ್ದ ಅಭ್ಯರ್ಥಿಗಳನ್ನು ಅಕ್ರಮಗಳ ಮೂಲಕ 'ಗೆಲ್ಲಿಸಲಾಗಿದೆ' ಎಂದು ಸುದ್ದಿಗಾರರೊಂದಿಗೆ ಮಾತನಾಡುತ್ತ ಆರೋಪಿಸಿದರು.

ಮುಖ್ಯ ನ್ಯಾಯಮೂರ್ತಿ, ಮುಖ್ಯ ಚುನಾವಣಾ ಆಯುಕ್ತ ಇದರಲ್ಲಿ ಭಾಗಿಯಾಗಿದ್ದಾರೆ. ದೇಶದ ಬೆನ್ನಿಗೆ ಇರಿಯುವುದನ್ನು ನೋಡಲಾಗುತ್ತಿಲ್ಲ. ಅಕ್ರಮದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಬೇಕು. ರಾಜಕಾರಣಿಗಳಿಗಾಗಿ ಕರ್ತವ್ಯಲೋಪ ಎಸಗಬೇಡಿ ಎಂದು ಅಧಿಕಾರಿ ಸಮುದಾಯಕ್ಕೆ ಕೋರುತ್ತೇನೆ' ಎಂದು ಹೇಳಿದ್ದಾಗಿ 'ಡಾನ್' ದೈನಿಕವು ವರದಿ ಮಾಡಿದೆ.

ಆದರೆ, ಈ ಆರೋಪವನ್ನು ಚುನಾವಣಾ ಆಯೋಗವು ನಿರಾಕರಿಸಿದೆ. ಹೇಳಿಕೆ ನೀಡಿರುವ ಆಯೋಗ, ಫಲಿತಾಂಶ ಬದಲಿಸುವಂತೆ ಆಯೋಗದ ಯಾವುದೇ ಅಧಿಕಾರಿ ಯಾರೊಬ್ಬರಿಗೂ ನಿರ್ದೇಶನ ನೀಡಿಲ್ಲ ಎಂದು ಹೇಳಿದೆ.

ಆದರೆ, ಅಕ್ರಮ ಬಗ್ಗೆ ಅಧಿಕಾರಿಯ ಆರೋಪಗಳ ಕುರಿತು ತನಿಖೆ ನಡೆಸಲಾಗುವುದು ಎಂದು ತಿಳಿಸಿದೆ.

ದಿನದ ಬೆಳವಣಿಗೆಗಳು

- ಮೈತ್ರಿ ಸರ್ಕಾರ ರಚಿಸಲು ನವಾಜ್ ಷರೀಫ್ ನೇತೃತ್ವದ ಪಿಎಂಎಲ್-ಎನ್ ಮತ್ತು ಬಿಲಾವಲ್ ಭುಟ್ಟೊ ನೇತೃತ್ವದ ಪಿಪಿಪಿ ಪ್ರಯತ್ನ ಮುಂದುವರಿಸಿವೆ. ಈ ಪಕ್ಷಗಳು ಕ್ರಮವಾಗಿ 75 ಮತ್ತು 54 ಸ್ಥಾನ ಗೆದ್ದಿವೆ. ಅಲ್ಲದೆ, 17 ಸ್ಥಾನ ಗೆದ್ದಿರುವ ಎಂಕ್ಯೂಎಂ–ಪಿ ಕೂಡಾ ಮೈತ್ರಿಕೂಟ ಬೆಂಬಲಿಸಲು ತೀರ್ಮಾನಿಸಿದೆ.
- ಚುನಾವಣೆಯಲ್ಲಿ ಭಾರಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಇಮ್ರಾನ್ ಖಾನ್ ನೇತೃತ್ವದ ಪಿಟಿಐ ದೇಶವ್ಯಾಪಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ರಾಜಧಾನಿಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ.
- ಚುನಾವಣಾ ಅಕ್ರಮ ಖಂಡಿಸಿ ತಾನು ವಿರೋಧಪಕ್ಷಸಾಲಿನಲ್ಲೇ ಇರಲು ನಿರ್ಧರಿಸಿರುವುದಾಗಿ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಟಿಐ) ಶನಿವಾರ ಪ್ರಕಟಿಸಿದೆ. ಪಿಟಿಐ ಬೆಂಬಲಿತರು 265 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, 93ರಲ್ಲಿ ಗೆದ್ದಿದ್ದರು.

ಬಿಜೆಪಿ ಚುನಾವಣಾ ಕಹಳೆ

ಒಂದನೇ ಪುಟದಿಂದ

ಲೋಕಸಭಾ ಚುನಾವಣೆಯನ್ನು ಮೋದಿ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಎದುರಿಸಲು ಪಕ್ಷ ಸಜ್ಜಾಗಿದೆ.

'ವಿಕಸಿತ ಭಾರತ, ಮೋದಿ ಗ್ಯಾರಂಟಿ, ಮತ್ತೊಮ್ಮೆ ಮೋದಿ ಸರ್ಕಾರ' ಎಂಬ ಘೋಷಣೆ ಹೊರಡಿಸಲು ನಿರ್ಣಯವನ್ನು ಕೈಗೊಳ್ಳಲಾಗುತ್ತದೆ. ಪ್ರಧಾನಿ ಅವರ ಭಾಷಣದ ಕುರಿತು ಪಕ್ಷದ ಪ್ರಧಾನ ಕಾರ್ಯದರ್ಶಿ ವಿನೋದ್ ತಾವಡೆ ಸುದ್ದಿಗಾರರಿಗೆ ವಿವರ ನೀಡಿದರು.

ಸಮಾವೇಶದಲ್ಲಿ 11,500 ಕಾರ್ಯಕರ್ತರು ಹಾಗೂ ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ಮುಂಬರುವ ಚುನಾವಣೆಯಲ್ಲಿ 370 ಸ್ಥಾನಗಳನ್ನು ಗೆಲ್ಲುವ ಮೂಲಕ ಕಾರ್ಯಕರ್ತರು ಪಕ್ಷದ ಸಂಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು. ಜತೆಗೆ, ಸರ್ಕಾರದ ಅಭಿವೃದ್ಧಿ ಹಾಗೂ ಬಡವರ ಕಲ್ಯಾಣ ಕಾರ್ಯಕ್ರಮ-ಗಳ ಮಾಹಿತಿಯನ್ನು ಮತದಾರರಿಗೆ ತಲುಪಿಸಬೇಕು' ಎಂದು ಕರೆ ನೀಡಿದರು.

'ಫೆಬ್ರುವರಿ 25ರಿಂದ ಮಾರ್ಚ್ 5ರ ನಡುವೆ ಫಲಾನುಭವಿಗಳ ಸಂಪರ್ಕ ಅಭಿಯಾನ ನಡೆಸಲಾಗುತ್ತದೆ. ಮುಂದಿನ 100 ದಿನಗಳು ನಿರ್ಣಾಯಕ. ಕಾರ್ಯಕರ್ತರು ಹೆಚ್ಚಿನ ಶ್ರಮ ವಹಿಸಿ ಕೆಲಸ ಮಾಡಬೇಕು. ಯಾವುದೇ ಕಾರಣಕ್ಕೂ ಮಹಿಳಾ ಮತದಾರರನ್ನು ಮರೆಯಬಾರದು. 2014ಕ್ಕಿಂತ ಮೊದಲು ಭಾರತ ಹೇಗಿತ್ತು, ಈಗ ಹೇಗೆ ಅಭಿವೃದ್ಧಿಯಾಗಿದೆ ಎಂಬುದನ್ನು ಮೊದಲ ಬಾರಿಯ ಮತದಾರರಿಗೆ ಕಾರ್ಯಕರ್ತರು ಮನದಟ್ಟು ಮಾಡಬೇಕು' ಎಂದೂ ಮೋದಿ ಹೇಳಿದರು.

'ಪ್ಯಾನ್ ಇಂಡಿಯಾ ಪಕ್ಷ'

ಸಮಾವೇಶದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮಾತನಾಡಿ, 'ಪಕ್ಷವು 370 ಸ್ಥಾನಗಳಲ್ಲಿ ಗೆಲುವು ಸಾಧಿಸಬೇಕು. ಎನ್‌ಡಿಎ 400 ಕ್ಷೇತ್ರಗಳಲ್ಲಿ ಗೆಲ್ಲಬೇಕು. ಈ ಗುರಿ ತಲುಪಲು ಕಾರ್ಯಕರ್ತರು ಶ್ರಮ ಹಾಕಬೇಕು' ಎಂದು ಕರೆ ನೀಡಿದರು.

'2014ರಲ್ಲಿ ಮೋದಿ ಅಧಿಕಾರಕ್ಕೆ ಬರುವ ಮುನ್ನ ಪಕ್ಷವು 5 ರಾಜ್ಯಗಳಲ್ಲಿ ಅಧಿಕಾರದಲ್ಲಿತ್ತು. ಈಗ 12 ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಎನ್‌ಡಿಎ ಮೈತ್ರಿಕೂಟದ ಸರ್ಕಾರವು 17 ರಾಜ್ಯಗಳಲ್ಲಿದೆ. ಕಳೆದ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಉತ್ತಮ ಸಾಧನೆ ಮಾಡಿದೆ. ತೆಲಂಗಾಣದಲ್ಲಿ ಮತ ಪ್ರಮಾಣ ದ್ವಿಗುಣವಾಗಿದೆ. ಕಮಲ ಎಲ್ಲ ಕಡೆಗಳಲ್ಲಿದೆ. ನಮ್ಮದು ಪ್ಯಾನ್ ಇಂಡಿಯಾ ಪಕ್ಷ' ಎಂದು ಅವರು ಹೇಳಿದರು.

ದಕ್ಷಿಣದ ರಾಜ್ಯಗಳಲ್ಲಿ ಪಕ್ಷ ಹೆಚ್ಚಿನ ಅಸ್ತಿತ್ವ ಹೊಂದಿಲ್ಲ ಎಂಬ ವಾದವನ್ನು ತಳ್ಳಿ ಹಾಕಿದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣದ ರಾಜ್ಯಗಳಲ್ಲಿ ಕಾಂಗ್ರೆಸ್‌ಗಿಂತ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಗಳಿಸಿತ್ತು ಎಂದು ವಿವರಿಸಿದರು.

ವಂಚನೆ: ಟ್ರಂಪ್‌ಗೆ ಭಾರಿ ದಂಡ

ನ್ಯೂಯಾರ್ಕ್: ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿ ಸುಳ್ಳು ದಾಖಲೆ ಸಲ್ಲಿಸಿ ಬ್ಯಾಂಕ್‌ಗಳಿಗೆ ವಂಚಿಸಿದ್ದ ಪ್ರಕರಣದಲ್ಲಿ ಕೋರ್ಟ್, ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ 364 ಮಿಲಿಯನ್ ಡಾಲರ್ (ಅಂದಾಜು ₹ 3020 ಕೋಟಿ) ದಂಡ ವಿಧಿಸಿ ಆದೇಶಿಸಿದೆ.

ಅಲ್ಲದೆ, ಟ್ರಂಪ್ ಮೂರು ವರ್ಷ ಕಾಲ ನ್ಯೂಯಾರ್ಕ್ ಕಾರ್ಪೊರೇಷನ್‌ನ ಯಾವುದೇ ಶಾಖೆಯ ನಿರ್ದೇಶಕ ಅಥವಾ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದಂತೆಯೂ ನ್ಯೂಯಾರ್ಕ್‌ನ ಕೋರ್ಟ್ ನಿರ್ಬಂಧ ಹೇರಿದೆ. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಟ್ರಂಪ್ ವಕೀಲರು ತಿಳಿಸಿದ್ದಾರೆ.

ಭಾರತ–ಕೆನಡಾ ದ್ವಿಪಕ್ಷೀಯ ಚರ್ಚೆ

ಮ್ಯೂನಿಚ್ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಕೆನಡಾದ ವಿದೇಶಾಂಗ ಸಚಿವೆ ಮೆಲಾನಿ ಜೋಲಿ ಅವರನ್ನು ಭೇಟಿಯಾಗಿ, ಪ್ರಚಲಿತ ವಿದ್ಯಮಾನ ಮತ್ತು ದ್ವಿಪಕ್ಷೀಯ ಬಾಂಧವ್ಯ ಕುರಿತು ಚರ್ಚಿಸಿದ್ದಾರೆ.

ಕೆನಡಾದಲ್ಲಿ ಸಿಖ್ ಪ್ರತ್ಯೇಕತಾವಾದಿ ಹತ್ಯೆ ಕುರಿತು ಉಭಯ ರಾಷ್ಟ್ರಗಳ ನಡುವೆ ರಾಜತಾಂತ್ರಿಕ ಭಿನ್ನಾಭಿಪ್ರಾಯ ಮೂಡಿರುವ ಸಂದರ್ಭದಲ್ಲಿಯೇ ಈ ಬೆಳವಣಿಗೆ ನಡೆದಿದೆ. ಜರ್ಮನಿಯಲ್ಲಿ ಆಯೋಜನೆಗೊಂಡಿರುವ ಮ್ಯೂನಿಚ್ ಭದ್ರತಾ ಸಮ್ಮೇಳನದಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ ಶುಕ್ರವಾರ ಈ ಇಬ್ಬರೂ ಮುಖಂಡರು ಭೇಟಿಯಾಗಿ ಚರ್ಚಿಸಿದರು.



ಪೌರಕಾರ್ಮಿಕರ ಪಾಡು 'ಪೊರಕೆಯ ಹಾಡು' 13

ಬನಶಂಕರಿ

ನಾಟ್ಕದ ಜಾತ್ರಿ ಜೋರೈತಿ



ಬಸವರಾಜ ಹವಾಲ್ದಾರ


'ಐವತ್ತ ವರ್ಸಗಳಿಂದ ಜಾತ್ರಿಗಿ ಬರತೀವಿ. ದೇವಿ ದರ್ಶನ ಮಾಡಿಕೊಂಡ ಮ್ಯಾಲ ನಾಟಕ ನೋಡಾಕಬೇಕ. ಇಲ್ಲದಿದ್ರ ಜಾತ್ರಿಗಿ ಬಂದಿವಿ ಅಂತ ಅನಸದೇ ಇಲ್ಲ. ವರ್ಸಕ್ಕೊಮ್ಮೆ ಮನೆಯವರೆಲ್ಲ ಸೇರಾಕ ಇದೊಂದ ನೆಪ ಅಗ್ಯೆತಿ ನೋಡ್ರಿ. ನಾಟಕದ ಕತಿ ಬದಲಾಗ್ಯಾವ, ಆದ್ರ ನಾಟಕದ ಗತ್ತ ಬದಲಾಗಿಲ್ಲ'-ಹೀಗೆ ಮಾತನಾಡುತ್ತಲೇ ಇದ್ದರು ನರಗುಂದ ತಾಲ್ಲೂಕು ಹದ್ಲಿ ಗ್ರಾಮದ ಹನಮಂತಗೌಡ ಕುದರಿ.

> ಇಲ್ಲಿನ ಜನರ ನಾಟಕ ನೋಡುವ ಅಭಿರುಚಿಯೇ ಬಹು ವಿಶಿಷ್ಟ. ಕಂಪನಿ ನಾಟಕಗಳಿಗೆ ಬನಶಂಕರಿ ಜಾತ್ರೆ ಒಂದಿಷ್ಟು ಕಾಸಿನ ಮುಖ ನೋಡುವ ಸ್ಥಳ. ಹೊಸ ನಾಟಕ, ಹೊಸ ಪ್ರಯೋಗಕ್ಕೂ ಹೇಳಿ ಮಾಡಿಸಿದ ಜಾಗ.

ಬಾಗಲಕೋಟೆ ಜಿಲ್ಲೆ ಬಾದಾಮಿಯ ಬನಶಂಕರಿ ಜಾತ್ರೆಯಲ್ಲಿ ನಾಟಕಗಳದ್ದೇ ವಿಶೇಷ ಆಕರ್ಷಣೆ . ಹೀಗಾಗಿ ಹಳ್ಳಿಗರು ಇದನ್ನು 'ನಾಟಕದ ಜಾತ್ರಿ' ಅಂಥ ಪ್ರೀತಿಯಿಂದ ಕರೆಯುತ್ತಾರೆ. ಅಷ್ಟರ ಮಟ್ಟಿಗೆ ಇಲ್ಲಿನ ಜನರಿಗೆ ನಾಟಕ ನೋಡುವ ಖಯಾಲಿ.

'ಗೆಳೇರೆಲ್ಲ ಮುಂಜಾನಿ ಇಲ್ಲ ಸಂಜಿಕೆ ಸೇರಿದಾಗ ದೇವಿ ಜಾತ್ರಿಗಿ ಹೋಗಾದು ಅಂತಾ ನಿರ್ಧಾರ ಮಾಡ್ತಿವಿ. ಕೆಲವರಿಗೆ ಫೋನ್ ನ್ಯಾಗ ಜಾತ್ರಿಗಿ ಬರ್ರೆಲೇ ಅಂತ ಹೇಳ್ತಿವಿ. ಎಲ್ಲರ್ರೂ ಸೇರಿ ಗಾಡ್ಯಾಗಾ ರಾತ್ರಿ ಎಂಟಕ್ಕ ಹ್ವಾದರ ನಾಟಕ ನೋಡಿಕೊಂಡ ಬೆಳಿಗ್ಗೇನ ಬರಾದ. ಜಾತ್ರಿ ಮುಗ್ಯದರಾಗ ಮೂರ್ನಾಲ್ಕ ಸಲ ಹೋಗ್ತಿವಿ. ಹೋದಾಗೊಮ್ಮೆ ಒಂದೆರಡ ನಾಟ್ಕ ನೋಡಿಕೊಂಡ ಬರ್ತಿವಿ' ಎನ್ನುತ್ತಾರೆ ಬಾದಾಮಿ ತಾಲ್ಲೂಕಿನ ಕೆರೂರಿನ ಗುಂಡಪ್ಪ ಬೋರಣ್ಣವರ.

ಇವರು ಚಿಕ್ಕಂದಿನಿಂದಲೂ ಜಾತ್ರೆಗೆ ಹೋಗುತ್ತಿದ್ದಾರೆ. ಮೊದಲು ಎತ್ತಿನಬಂಡಿಗಳಲ್ಲಿ ಕುಟುಂಬ ಸಮೇತ ಹೋಗುತ್ತಿದ್ದರು. ಆಗ ಬಂಡಿಗಳೂ ಸಾಕಷ್ಟಿದ್ದವು. ಓಣ್ಯಾಗಿನ ಜನರೆಲ್ಲ ಸೇರಿ ನಾಲ್ಕಾರು ಬಂಡಿಗಳಲ್ಲಿ ಹೋಗುತ್ತಿದ್ದರು. ಈಗ ಬಂಡಿಗಳು ಕಡಿಮೆಯಾಗಿರುವುದರಿಂದ ವಾಹನದಲ್ಲಿಯೇ ಹೋಗಿ ಬರುತ್ತಾರೆ.



ನಾಟಕ ನೋಡಲು ಜನ ತುದಿಗಾಲಲ್ಲಿ ನಿಂತಿದ್ದರೆ, ಇತ್ತ ನಾಟಕ ವೀಕ್ಷಣೆಗೆ ಆಹ್ವಾನಿಸುವ ಕೆಲಸವನ್ನು ನಾಟಕ ಕಂಪನಿಗಳು ಹದಿನೈದು ದಿನಗಳ ಮುಂಚಿನಿಂದಲೇ ಆರಂಭಿಸುತ್ತವೆ. ಅದರ ಝಲಕ್ ಹೀಗಿದೆ:

'ಕನ್ನಡ ಕಲಾಪ್ರೇಮಿಗಳೇ, ಕಲಾರಸಿಕರೇ.. ಇದು ಫುಲ್ ಕಾಮಿಡಿ ನಾಟಕ.. ನೋಡಿ ನಕ್ಕು ನಲಿಯಿರಿ.. ಪ್ರತಿನಿತ್ಯ ನಾಲ್ಕು ಪ್ರದರ್ಶನಗಳು... ಮುಖ್ಯಪಾತ್ರದಲ್ಲಿ ಕಾಮಿಡಿ ಕಿಂಗ್ ನಟಿಸಿದ್ದಾರೆ.. ತಪ್ಪದೇ ನೋಡಿ.. ನೋಡಲು ಮರೆಯದಿರಿ... ಮರೆತು ನಿರಾಶರಾಗದಿರಿ... ಬನಶಂಕರಿ ಜಾತ್ರೆಯಲ್ಲಿ ಭರ್ಜರಿ ಪ್ರದರ್ಶನ.. ಬನ್ನಿ... ಬನ್ನಿ...ತಪ್ಪದೇ ಬನ್ನಿ... ' ಎಂದು ಆಟೊ, ಕಾರುಗಳಿಗೆ ಪೋಸ್ಟರ್ ಹಚ್ಚಿಕೊಂಡು, ಕರಪತ್ರಗಳನ್ನು ಹಳ್ಳಿ ಹಳ್ಳಿಗಳಲ್ಲಿ ಎಸೆಯುತ್ತಾ, ಮೈಕ್‌ನಲ್ಲಿ ಕೂಗಿ, ಕೂಗಿ ಕರೆಯುತ್ತಾರೆ. ಗೋಡೆ, ಅಂಗಡಿ, ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್‌ಗಳನ್ನು ಅಂಟಿಸುತ್ತಾರೆ. ನಾಟಕಗಳ ಟೆಂಟ್ ಮುಂದೆ ನಟ, ನಟಿಯರ ಕಟೌಟ್‌ಗಳ ರಂಗು.

ಈ ಜಾತ್ರೆ ವೃತ್ತಿ ನಾಟಕ ಕಂಪನಿಗಳಿಗೆ ಆಕ್ಸಿಜನ್ ಇದ್ದ ಹಾಗೆ. ನಷ್ಟದ ಅಂಚಿನಲ್ಲಿರುವ ಕಂಪನಿಗಳು ಇಲ್ಲಿ ಮರುಜೀವ ಪಡೆಯುತ್ತವೆ. ಜಾತ್ರೆಯಿಂದ ನೂರಾರು ಕಲಾವಿದರ ಬದುಕಿನ ಬಂಡಿ ಸಾಗುತ್ತದೆ.

ಇಪ್ಪತ್ತು ವರ್ಷಗಳ ಹಿಂದೆ ಜಾತ್ರೆಗೆ ಐದು ಸಿನಿಮಾ ಟೆಂಟ್‌ಗಳು ಹಾಗೂ ಎರಡು ನಾಟಕ ಕಂಪನಿಗಳು ಬರುತ್ತಿದ್ದವು. ವರ್ಷಗಳು ಕಳೆದಂತೆ ಜನರು ಸಿನಿಮಾ ಟೆಂಟ್‌ಗಳತ್ತ ಹೋಗದೆ ನಾಟಕಗಳತ್ತ ಮುಖ ಮಾಡಿದರು. ವರ್ಷದಿಂದ ವರ್ಷಕ್ಕೆ ನಾಟಕದ ಕಂಪನಿಗಳ ಸಂಖ್ಯೆ ಹೆಚ್ಚಾಯಿತು. ಈ ವರ್ಷ ಒಂದು ಸಿನಿಮಾ ಟೆಂಟ್, ಹತ್ತು ನಾಟಕ ಕಂಪನಿಗಳು ಬಂದಿವೆ. ಮಧ್ಯಾಹ್ನ 2.45 ಶುರುವಾದ ಪ್ರದರ್ಶನಗಳು ಬೆಳಗಿನ ಜಾವ 5ಕ್ಕೆ ಕೊನೆಗೊಳ್ಳುತ್ತವೆ.

ರಾಜ್ಯದ ಉಳಿದ ಜಾತ್ರೆಗಳಲ್ಲಿ ಎರಡರಿಂದ ನಾಲ್ಕು ನಾಟಕ ಕಂಪನಿಗಳಿದ್ದರೆ ಹೆಚ್ಚು. ಇಲ್ಲಿ ಅವುಗಳ ಸಂಖ್ಯೆ ಎರಡಂಕಿ ತಲುಪಿರುತ್ತದೆ. ಇದಕ್ಕೆ ಕಾರಣ ಪ್ರೇಕ್ಷಕರ ನಾಟಕ ಪ್ರೀತಿ. ಜಾತ್ರೆಗೆ ಬರುವ ಬಹುತೇಕರು ನಾಟಕ ನೋಡುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಹೀಗಾಗಿ ಕಂಪನಿಗಳು ಇಲ್ಲಿ ಟೆಂಟ್ ಹಾಕುತ್ತವೆ. ನಾಟಕಗಳ ಪ್ರದರ್ಶನದಲ್ಲಿ ಬನಶಂಕರಿ ಜಾತ್ರೆಗೇ ಅಗ್ರಸ್ಥಾನ.

ಆರು ತಿಂಗಳು ತಯಾರಿ

ಈ ಜಾತ್ರೆ ನಾಟಕಗಳ ಪ್ರದರ್ಶನ ತಯಾರಿ ಆರು ತಿಂಗಳ ಮೊದಲೇ ಆರಂಭವಾಗುತ್ತದೆ ಎನ್ನುವುದು ಬಹಳ ಜನರಿಗೆ ಗೊತ್ತಿಲ್ಲ. ಜಾತ್ರೆಗೆಂದೇ ಹೊಸ ನಾಟಕಗಳನ್ನು ಬರೆಯಲಾಗುತ್ತದೆ.

13ನೇ ಪುಟಕ್ಕೆ...

ರಾಜ್‌ಕುಮಾರ್, ವಜ್ರಮುನಿ, ನರಸಿಂಹರಾಜು...


ಮೇರು ನಟ ರಾಜ್‌ಕುಮಾರ್ ಅವರಿಂದ ಹಿಡಿದು ಬಹುತೇಕ ಪ್ರಸಿದ್ಧ ನಟ, ನಟಿಯರು ಇಲ್ಲಿ ನಾಟಕಗಳ ಪ್ರದರ್ಶನ ನೀಡಿದ್ದಾರೆ. ನಾಟಕದ ಹಿನ್ನೆಲೆಯಿಂದ ಬಂದಿದ್ದು ಒಂದು ಕಾರಣವಾದರೆ, ಚಲನಚಿತ್ರಕ್ಕಿಂತ ಹೆಚ್ಚಿನ ಸಂಭಾವನೆ ಇಲ್ಲಿ ದೊರೆಯುತ್ತಿತ್ತು, ಜತೆಗೆ ಜನಪ್ರಿಯತೆಯೂ ಹೆಚ್ಚುತ್ತಿತ್ತು ಎನ್ನುವುದು ಮತ್ತೊಂದು ಕಾರಣ.

ನರಸಿಂಹರಾಜು, ಬಾಲಕೃಷ್ಣ, ಕಲ್ಯಾಣಕುಮಾರ್ ಉದಯಕುಮಾರ್, ವಜ್ರಮುನಿ, ಸುದರ್ಶನ್, ಸುಧೀರ್, ಸುಂದರಕೃಷ್ಣ ಅರಸ್, ಪಂಡರಿಬಾಯಿ, ಬಿ.ಸರೋಜಾದೇವಿ, ಮೈನಾವತಿ, ಬಿ.ವಿ.ರಾಧಾ, ರಾಜಶ್ರೀ, ರಮಾದೇವಿ, ಕಲ್ಪನಾ, ಭವ್ಯಾ ಸೇರಿದಂತೆ ಹಲವರು ಜಾತ್ರೆ ನಾಟಕಗಳಲ್ಲಿ ನಟಿಸಿರುವುದು ಇತಿಹಾಸ ಪುಟಗಳಲ್ಲಿ ದಾಖಲಾಗಿದೆ. ಕಳೆದ ವರ್ಷ ಮಾಲಾಶ್ರೀ, ಈ ವರ್ಷ ಶ್ರುತಿ ಹೊಸ ಸೇರ್ಪಡೆ.

ಸಂಭಾವನೆ ಹೆಚ್ಚಿರುವ ಕಾರಣಕ್ಕೆ ಈಗಿನ ಜನಪ್ರಿಯ ನಟ, ನಟಿಯರನ್ನು ಕಂಪನಿಗಳು ಕರೆಯುತ್ತಿಲ್ಲ. ಆದರೆ, ಈಗಲೂ ಟಿವಿ ಷೋಗಳಲ್ಲಿ ಬರುವವರು ನಾಟಕಗಳಲ್ಲಿ ಅಭಿನಯಿಸುತ್ತಿದ್ದಾರೆ. ನಾಟಕಗಳ ಮೂಲಕ ಮನೆಮಾತಾದ ನಟ ರಾಜು ತಾಳಿಕೋಟಿ, ಕಾಮಿಡಿ ಕಿಲಾಡಿಗಳು ಷೋದಲ್ಲಿ ನಟಿಸಿರುವ 'ರಾಗಿಣಿ' ಖ್ಯಾತಿಯ ರಾಘು, ಶುಭಲಕ್ಷ್ಮಿ ಯಲ್ಲಾಪುರ, ಹರೀಶ ಹಿರಿಯೂರು, ದಯಾನಂದ ಬೀಳಗಿ, ಶ್ವೇತಾ ಬೀಳಗಿ, ಜೂನಿಯರ್ ಪ್ರಭಾಕರ್ ಸೇರಿದಂತೆ ಹಲವರು ನಟಿಸುತ್ತಿದ್ದಾರೆ.



ಜನ ತುಂಬಿರುವ ಜಾತ್ರೆಯಲ್ಲಿ ನಾಟಕದ ಬ್ಯಾನರ್‌ಗಳ ಭರಾಟೆ. ಚಿತ್ರಗಳು: ಇಂದ್ರಕುಮಾರ ದಸ್ತೇನವರ



ವೇಣೂಜಿ ಯೋಚಿಸುವುದು ತುಸು ಭಿನ್ನ

ವಾದಿರಾಜ್

ಪ್ರೊಫೆಸರ್ ಎಂ.ಎಸ್. ವೇಣುಗೋಪಾಲ್, ನಮಗೆಲ್ಲ ವೇಣೂಜಿ ಎಂದೇ ಪರಿಚಿತ. ಮೈಸೂರಿನ ಜೆ.ಎಸ್.ಎಸ್. ಕಾನೂನು ಕಾಲೇಜಿನಲ್ಲಿ ಪಾಠ ಮಾಡಿ ನಿವೃತ್ತರಾದವರು. ಫೆಬ್ರುವರಿ 16 ರಂದು ತಮ್ಮ 79 ವಯಸ್ಸಿನಲ್ಲಿ ನಿಧನರಾದರು.

ವಿದ್ಯಾರ್ಥಿ ದಿಸೆಯಿಂದಲೂ ಅವರಿಗೆ ಕಣ್ಣಿನ ತೊಂದರೆ ಬಾಧಿಸುತ್ತಿತ್ತು. ಅದನ್ನವರು ಮೀರಿ ಬದುಕಿದರು. ಸಾಲು ಸಾಲು ಸ್ನಾತಕೋತ್ತರ ಪದವಿಗಳನ್ನು ತಮ್ಮದಾಗಿಸಿಕೊಂಡರು. ಮನೆಗೆ ತರಿಸುತ್ತಿದ್ದ ದಿನಪತ್ರಿಕೆಗಳನ್ನು ಓದಿ ಹೇಳಲು ವಿದ್ಯಾರ್ಥಿಯೊಬ್ಬನನ್ನು ಗೌರವಧನ ಕೊಟ್ಟು ಗೊತ್ತು ಮಾಡಿಕೊಂಡಿದ್ದರು. ಆ ಕಾಲದಲ್ಲಿ ಚಿಕ್ಕ ರೇಡಿಯೊ ಒಂದು ಸದಾ ಅವರೊಂದಿಗೆ ಇರುತ್ತಿತ್ತು. ಅವರು ಜಗತ್ತಿನ ವಿದ್ಯಮಾನಗಳನ್ನು ತಡಕುತ್ತಿದ್ದರು. ಕಾನೂನು ಕಾಲೇಜಿನಲ್ಲಿ ಅವರೇ ಮಾಡಿದ ಪಾಠಗಳ ನೂರಾರು ಧ್ವನಿಮುದ್ರಿತ ಕ್ಯಾಸೆಟ್ಟುಗಳು. ಅದಕ್ಕೆಲ್ಲ ಅನುಕ್ರಮಣಿಕೆ. ನಾಳೆ ಯಾವ ತರಗತಿಗೆ ಯಾವ ಪಾಠ? ಆ ಧ್ವನಿ ಮುದ್ರಿಕೆಯನ್ನು ಕೇಳಿ, ಮನನ ಮಾಡಿಕೊಂಡು ಸಿದ್ಧಗೊಳ್ಳುವ ಅವರ ಪರಿಶ್ರಮ ಅನನ್ಯ.

ಮೂಲದಲ್ಲಿ ಅವರೊಬ್ಬ ಆಶುಕವಿ, ನಾಟಕಕಾರ, ಬರೆದ ಕವಿತೆಗಳನ್ನೂ, ಆಡಿಸಿದ ಬೀದಿ ನಾಟಕಗಳನ್ನೂ ಅವರು ಲೆಕ್ಕವಿಡಲಿಲ್ಲ. ಪರಿಚಯದವರ ಮಾತಿಗೆ ಕಟ್ಟುಬಿದ್ದು ನಾವೊಮ್ಮೆ ಅವರ ಕವನಗಳನ್ನು ಸಂಕಲಿಸಲು ಹೊರಟೆವು. ಅವರು ಸುತಾರಾಂ ಒಪ್ಪಲಿಲ್ಲ. ಕವಿತೆಯೊಳಗೆ ಸತ್ವವಿದ್ದರೆ ಅವು ಬಾಯಿಂದ ಬಾಯಿಗೆ ಹರಡಿ ಉಳಿಯುತ್ತವೆ. ಮುದ್ರಿಸಿ ಉಳಿಸುವ ಜರೂರತ್ತು ಕವಿತೆಗಳಿಗೆ ಬರಬಾರದು. ಮುದ್ರಣವಿಲ್ಲದೇ ನಮ್ಮ ಜನಪದರ ಕಾವ್ಯ ಉಳಿದಿಲ್ಲವೇ? - ಅವರದು ನೇರ ಪ್ರಶ್ನೆ .

ಅವರ ಯೋಚನೆಗಳು ಸದಾ ತುಸು ಭಿನ್ನ....

'ಮೂಡುತಿಹುದು ಹಿಂದುಯುಗವು
ಬೆಳಗುತಿಹುದು ಸಕಲ ಜಗವು ...' - ವೇಣೂಜಿ ಬರೆದ ಹಲವು ಜನಪ್ರಿಯ ಹಾಡುಗಳಲ್ಲಿ ಇದೂ ಒಂದು. ಈ ಹಾಡನ್ನವರು ಒಂಟಿಕೊಪ್ಪಲಿನ ಪುಟ್ಟಮನೆಯ ಕಪ್ಪುನೆಲದ ಮೇಲೆ ಚಾಕ್‌ಪೀಸ್‌ನಿಂದ ದೊಡ್ಡ ಅಕ್ಷರಗಳಲ್ಲಿ ಬರೆದು ಬಿಟ್ಟಿದ್ದು ಕಣ್ಣಿಗೆ ಕಟ್ಟಿದಂತಿದೆ.

ಎಷ್ಟೋ ವರ್ಷಗಳ ತರುವಾಯ ಬೆಂಗಳೂರಿನ ಮಾಗಡಿ ರಸ್ತೆಯಲ್ಲೊಂದು ಗೋಡೆ ಬರಹ. ಅದು ದಲಿತ ಸಂಘರ್ಷ ಸಮಿತಿಯದು.

'ಮೂಡುತಿಹುದು ಭೀಮಯುಗವು
ಬೆಳಗುತಿಹುದು ಬುದ್ಧ ಜಗವು ...'
ಅರೇ, ಇದು ನಮ್ಮ ವೇಣೂಜಿ ಅವರ ಪದ್ಯ, ಆದರೆ ಸ್ವಲ್ಪ ಟ್ವಿಸ್ಟು. ಮತ್ತೆ ಯಾವಾಗಲೊ ವೇಣೂಜಿ ಸಿಕ್ಕಾಗ ಮಾಗಡಿ ರಸ್ತೆಯಲ್ಲಿ ಕಂಡ ಗೋಡೆ ಬರಹವನ್ನು ವಿವರಿಸಿದೆ. ವೇಣೂಜಿಗೆ ಸಖತ್ ಖುಷಿ ಆಯಿತು. ನನಗವರು ಸಿಹಿ ತಿನ್ನಿಸಿ ಸಂಭ್ರಮಪಟ್ಟರು. 'ಕವಿತೆ ಉಳಿಯುವುದೇ ಹೀಗೆ. ನಮ್ಮನ್ನು ಒಪ್ಪದವರ ಮಡಿಲಲ್ಲೂ ಕವಿತೆ ಮರುಹುಟ್ಟು ಪಡೆಯುತ್ತದೆ' ಎಂದಿದ್ದರು.

ನಿಜ ಅವರ ಯೋಚನೆಗಳು ಸದಾ ತುಸು ಭಿನ್ನ.

ಆಗೊಮ್ಮೆ ರಾಷ್ಟ್ರೀಯ ಟಿವಿ ಚಾನಲ್‌ನಲ್ಲಿ ಬಾಲಿವುಡ್ ನಟ ಅನುಪಮ್ ಖೇರ್ 'ಏರಿಯಲ್ ಗೋಲ್ಡ್ ಕಾಯಿನ್' ಎಂಬ ವಿಶಿಷ್ಟ ವ್ಯಕ್ತಿಗಳನ್ನು ಪರಿಚಯಿಸುವ ಕಾರ್ಯಕ್ರಮ ಪ್ರಸ್ತುತ ಪಡಿಸುತ್ತಿದ್ದರು. ಆ ಸರಣಿಯಲ್ಲಿ ಖೇರ್, ವೇಣೂಜಿ ಅವರನ್ನು ಸಂದರ್ಶಿಸಿ ಸಾಧನೆಗಳನ್ನು ಪರಿಚಯಿಸಿದರು. ಕೊನೆಗೆ 'ಗೋಲ್ಡ್ ಕಾಯಿನ್' ಒಂದನ್ನು ವೇಣೂಜಿಗೆ ಕೊಟ್ಟು ಅಭಿಪ್ರಾಯಕ್ಕಾಗಿ ಮೈಕು ಮುಂದೆ ಮಾಡಿದರು. ವೇಣೂಜಿ 'ಈವರೆಗೂ ನನ್ನ ಮೈಮೇಲೆ ಒಂದು ಗ್ರಾಮ್ ಚಿನ್ನವನ್ನೂ ನಾನು ತೊಟ್ಟವನಲ್ಲ, ಇದು ನನಗಿರುವ ನಿರಾಸಕ್ತಿ, ಆದರೆ ಈ ಬಿಲ್ಲೆಯನ್ನು ಕೊಟ್ಟವರು ನೀವಾದ್ದರಿಂದ, ನಿಮ್ಮ ನೆನಪಿಗಾಗಿ ಉಳಿಸಿಕೊಳ್ಳುವೆ' ಎಂದಿದ್ದರು. ಎಷ್ಟೋ ದಿನ ಆ ಬಿಲ್ಲೆ ಮನೆಯ ಕಪಾಟಿನ ಮೊಳೆಯಲ್ಲಿ ತೂಗುತ್ತಿತ್ತು. ಮತ್ತ್ಯಾವಾಗಲೋ ಆ ಬಿಲ್ಲೆ ಕಾಣುತ್ತಿಲ್ಲವೆಂದು ಮನೆಯವರು ಹೇಳಿದಾಗ 'ನಮಗದರ ಉಪಯೋಗ ಆಗುತ್ತಿದ್ದದ್ದು ಅಷ್ಟರಲ್ಲೇ ಇದೆ. ಇನ್ಯಾರಿಗೋ ಅದರ ಉಪಯೋಗ ಆಗುತ್ತಿದೆಯಾದರೆ ಅವರಲ್ಲೇ ಇರಲಿ' ಎಂದಿದ್ದರು ವೇಣೂಜಿ.

ಅವರ ಯೋಚನೆ ಯಾವಾಗಲು ತುಸು ಭಿನ್ನ.

'ಮನುಷ್ಯ ಹೇಗೆಂದರೆ ಅವನು ಭವಿಷ್ಯದ ಒಂದು ದಿನವನ್ನೂ ಚಿತ್ರಿಸಿಕೊಳ್ಳಲಾರ, ಭವಿಷ್ಯದ ಭಯಕ್ಕೆ ಅವನು ಬೆಚ್ಚಿಬೀಳುತ್ತಾನೆ. ಹಾಗೆಂದೇ ಅವನು ಹಿಂದಿನ ದಿನಗಳ ನೆನಪಲ್ಲೇ ಇರುತ್ತಾನೆ. ಎಷ್ಟು ಹಿಂದಕ್ಕೆ ಹೋಗುತ್ತಾನೆಂದರೆ ಬಾಲ್ಯದಲ್ಲಿ ವಿಹರಿಸುತ್ತಾನೆ. ಮತ್ತೂ ಹಿಂದಕ್ಕೆ ಹೋಗುವವರು ಪೂರ್ವಜನ್ಮಕ್ಕೂ ಹೋಗಿಬಿಡುತ್ತಾರೆ.'- ಹೀಗೆ ಅವರ ಯೋಚನೆಗಳು ತುಸು ಭಿನ್ನ.

ಎತ್ತರದ ಆಲೋಚನೆಗಳಿದ್ದರೂ ಮಕ್ಕಳೊಂದಿಗೆ ಬೆರೆತು ಹಾಡಬಲ್ಲವ, ಹಾಡು ಕಟ್ಟುತ್ತಲೆ ಹಾಡಿಸಬಲ್ಲವ, ಹಾಡುತ್ತಲೆ ಕುಣಿಸಬಲ್ಲವ, ಕುಣಿಸುತ್ತಲೇ ಮೈಮರೆಯುವಂತೆ ಮಾಡುವ ಅವರ ಪ್ರತಿಭಾ ಶಕ್ತಿ ಅನನ್ಯ. 'ಜೀಯಾರೆ, ಜಿಯಲ್ಲಾರೆ' ಎಂದು ಶುರುವಾಗುತ್ತಿದ್ದ ಆಶುಹಾಡುಗಳು ತಾರಕಕ್ಕೆ ಏರುತ್ತಿದ್ದ ಪರಿ ಅನುಭವಿಸಿದವರಿಗೆ ಗೊತ್ತು. ಹತ್ತಿಪ್ಪತ್ತು ಮಕ್ಕಳನ್ನು ಒಟ್ಟು ಮಾಡಿ ಕೊನೆ ಕ್ಷಣದಲ್ಲಿ ಕರೆದರೂ ಕಾನೂನು ಕಾಲೇಜಿನ ಈ ಪ್ರಾಧ್ಯಾಪಕರು ನಮ್ಮ ಬಡಕಲು ಸೈಕಲ್ಲಿನಲ್ಲಿಯೇ ಹಿಂದೆ ಕುಳಿತು ಬಂದು ಕಥೆ, ಹಾಡು, ಕುಣಿತ, ನಾಟಕಗಳ ಮೂಲಕ ಮನಸ್ಸುಗಳನ್ನು ರೂಪಿಸುತ್ತಿದ್ದರು .

ಅವರ ಪ್ರೀತಿ, ಸಲುಗೆ ಆ ದಿನಗಳಲ್ಲಿ ನನಗೆ ಸಿಕ್ಕಿತೆಂಬುದೆ ಧನ್ಯತೆ.



ಪ್ರೇಮಾ

ಮೌಢ್ಯದ ಕತ್ತಲಿಗೆ ಅರಿವಿನ ಕಂದೀಲು

ಅನಿತಾ ಪೈಲೂರು

ಕಳೆದ ವಾರ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕುಂಟನಹಳ್ಳಿ ಗೊಲ್ಲರಹಟ್ಟಿಯಲ್ಲಿ ಬಾಣಂತಿ ಮತ್ತು ಹಸುಗೂಸನ್ನು ಹಟ್ಟಿಯಿಂದ ಹೊರಗಿಟ್ಟಿದ್ದು ವರದಿಯಾಗಿದೆ. ಜಾಗೃತಿಗೂ ಜಗ್ಗದ ಸಂಪ್ರದಾಯವಾದಿಗಳ ಮೌಢ್ಯಕ್ಕೆ ಕೊನೆ ಎಂದು?

ಜಿ.ಕೆ.ಪ್ರೇಮಾ ಅವರಿಗೆ ಆಗ ಹತ್ತು ವರ್ಷ. ಅವರಿಗಿಂತ ಎಂಟು ವರ್ಷ ದೊಡ್ಡವರಾಗಿದ್ದ ಚಿಕ್ಕಮ್ಮ ಹಾವು ಕಡಿತದಿಂದ ಮೃತಪಟ್ಟಿದ್ದರು. ಮುಟ್ಟಾದ ಕಾರಣ 'ಗಡೀಪಾರಾಗಿ' ಗ್ರಾಮದ ಹೊರವಲಯದಲ್ಲಿ ಇದ್ದ ಸಂದರ್ಭದಲ್ಲಿ ಅವರಿಗೆ ಹಾವು ಕಚ್ಚಿತ್ತು. ಕರ್ನಾಟಕದಲ್ಲಿರುವ ಕಾಡುಗೊಲ್ಲ ಸಮುದಾಯದ ಹಟ್ಟಿಗಳಲ್ಲಿ ಮುಟ್ಟಾದಾಗ ಮತ್ತು ಹೆರಿಗೆ ಸಂದರ್ಭದಲ್ಲಿ ಹೆಣ್ಣುಮಕ್ಕಳು ಊರ ಹೊರಗೆ ಇರಬೇಕೆಂಬ ದಮನಕಾರಿ ಸಂಪ್ರದಾಯ ಈಗಲೂ ಅಲ್ಲಲ್ಲಿ ಆಚರಣೆಯಲ್ಲಿದೆ.

ಕಾಡುಗೊಲ್ಲ ಮಹಿಳೆಯರು ಮುಟ್ಟಾದ ಮೊದಲ ಮೂರು ದಿನ ಗ್ರಾಮದ ಹೊರವಲಯದಲ್ಲಿ ಮರದ ಕೆಳಗೆ ಅಥವಾ ರಸ್ತೆಬದಿಯಲ್ಲಿ ನೆಲೆಸಬೇಕೆಂಬ ಅಲಿಖಿತ ಅಂಧಾಚರಣೆ ಚಾಲ್ತಿಯಲ್ಲಿದೆ. ನವಜಾತ ಶಿಶುವಿಗೆ ಜನ್ಮ ನೀಡಿದಾಗಲೂ ಇಂಥದ್ದೇ ನಿಯಮ ಅನ್ವಯಿಸುತ್ತದೆ. ಹೆರಿಗೆ ಆದ ನಂತರ ಮಗು ಮತ್ತು ತಾಯಿ ಗ್ರಾಮದ ಹೊರಗೆ, ಕನಿಷ್ಠ ಸೌಲಭ್ಯಗಳೂ ಇರದ ಗುಡಿಸಲಿನಲ್ಲಿ ಸುಮಾರು ಒಂದು ತಿಂಗಳು ಇರಬೇಕಿದೆ. ದೇವರು ಮತ್ತು ಪಿತೃಪ್ರಭುತ್ವ ಕುರಿತಾದ ಆಳವಾದ ಭಯ ಇದಕ್ಕೆ ಮೂಲ.

'ಚಿಕ್ಕಮ್ಮ ಮೃತಪಟ್ಟಾಗ ಈ ಸಂಪ್ರದಾಯದ ವಿರುದ್ಧ ಧ್ವನಿ ಎತ್ತಲು ನಾನು ತುಂಬಾ ಚಿಕ್ಕವಳು. ಆದರೆ ಈ ಅನಿಷ್ಟ ಆಚರಣೆಯನ್ನು ಪಾಲನೆ ಮಾಡಬಾರದೆಂದು ಅಂದೇ ನಿರ್ಧರಿಸಿದೆ' ಎನ್ನುತ್ತಾರೆ ಚಿತ್ರದುರ್ಗ ಜಿಲ್ಲೆಯ ಚಿತ್ತಯ್ಯನಹಟ್ಟಿಯ ಕಾಡುಗೊಲ್ಲ ಕುಟುಂಬದ ಹೆಣ್ಣುಮಗಳು ಪ್ರೇಮಾ.

ಮೂರು ದಶಕಗಳ ನಂತರ ಇಂಥ ಮೂಢನಂಬಿಕೆ ಮತ್ತು ಅಂಧಾಚರಣೆಗಳ ಕಪಿಮುಷ್ಠಿಯಿಂದ ಮಹಿಳೆಯರನ್ನು ಮತ್ತು ಸಮುದಾಯವನ್ನು ಮುಕ್ತಗೊಳಿಸಲು ಪ್ರೇಮಾ ಅವರು ಪ್ರೇರಕ ಶಕ್ತಿಯಾಗಿದ್ದಾರೆ. ಮೌಢ್ಯದ ಕರಿನೆರಳಿನಿಂದ ನೊಂದ, ನರಕಯಾತನೆ ಅನುಭವಿಸಿದ ಅದೆಷ್ಟೋ ಹೆಣ್ಣುಮಕ್ಕಳ ಪಾಲಿಗೆ ಬೆಳಕಾಗಿದ್ದಾರೆ. ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಇರುವ ಸಮುದಾಯದ ಹಲವು ಹಟ್ಟಿಗಳಲ್ಲಿ ಪ್ರೇಮಾ ಅವರ 'ಜಾಗೃತಿ'ಯ ಪ್ರಭಾವವನ್ನು ಕಾಣಬಹುದು.

ಪ್ರೇಮಾ ಅವರ ನೇರ ಮಧ್ಯಪ್ರವೇಶದ ನಂತರ ಕನಿಷ್ಠ ಹತ್ತು ಹಟ್ಟಿಗಳಲ್ಲಿ ಈ ಅಂಧಾಚರಣೆಗೆ ಪೂರ್ಣವಿರಾಮ ಬಿದ್ದಿದೆ. ಹಲವು ಕಡೆಗಳಲ್ಲಿ ಈ ಅನಿಷ್ಟ ಪದ್ಧತಿಯನ್ನು ಹಂತಹಂತವಾಗಿ ಕೈಬಿಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಪ್ರೇಮಾ ಅವರಿಗೆ ಈ ಯಶಸ್ಸು ಸುಲಭವಾಗಿ ದಕ್ಕಿಲ್ಲ. ಅವರ ಸಂಕಲ್ಪಕ್ಕೆ ಹಲವು ಪರೀಕ್ಷೆಗಳು ಎದುರಾಗಿದ್ದವು. ಕುಟುಂಬಸ್ಥರು ಮತ್ತು ಗ್ರಾಮಸ್ಥರ ನಿಲುವನ್ನು ನೇರವಾಗಿ ವಿರೋಧಿಸಲಾಗದೆ ಮೊದಲು ಮುಟ್ಟಾದ ವಿಷಯವನ್ನು ಸ್ವತಃ ತಾಯಿಗೂ ತಿಳಿಸುತ್ತಿರಲಿಲ್ಲ. 'ಮೂರು ವರ್ಷ ಮುಟ್ಟಾದ ವಿಷಯವನ್ನು ಗುಟ್ಟಾಗಿ ಇಟ್ಟಿದ್ದೆ. ನಾನು ಏನು ಮಾಡುತ್ತಿದ್ದೇನೆ ಎಂದು ನನ್ನ ತಾಯಿಗೂ ಬಹುಶಃ ತಿಳಿದಿತ್ತು. ಆದರೆ ಅವರು ಎಂದೂ ಈ ಬಗ್ಗೆ ಪ್ರಶ್ನಿಸಲಿಲ್ಲ ಮತ್ತು 'ವನವಾಸ' ಅನುಭವಿಸುವಂತೆ ಒತ್ತಾಯಿಸಲಿಲ್ಲ' ಎನ್ನುತ್ತಾರೆ ಪ್ರೇಮಾ.

'ತಂಗಿ ಮೃತಪಟ್ಟ ನಂತರ ಈ ಪದ್ಧತಿ ಬದಲಾಗಬೇಕೆಂದು ಬಯಸಿದ್ದೆ. ಆದರೆ ಅದರ ವಿರುದ್ಧ ಸೆಟೆದು ಹೋರಾಡುವ ಧೈರ್ಯ ಇರಲಿಲ್ಲ' ಎನ್ನುತ್ತಾರೆ ಪ್ರೇಮಾ ಅವರ ತಾಯಿ ಯಶೋದಾ. ಇವರು ಏಳು ಮಕ್ಕಳಿಗೆ ಜನ್ಮ ನೀಡಿದ್ದು, ಪ್ರತಿ ಬಾರಿ ಮಗು ಜನಿಸಿದಾಗಲೂ ಊರ ಹೊರಗೆ ತಿಂಗಳು ಕಾಲ ಕಳೆದಿದ್ದರು. ಜೊತೆಗೆ ಪ್ರತಿ ಬಾರಿ ಮುಟ್ಟಿನ ಸಮಯದಲ್ಲೂ ಇಂಥದ್ದೇ ಯಾತನೆ ಅನುಭವಿಸಿದ್ದರು. ಇದೇ ಕಾರಣಕ್ಕೆ ಪ್ರೇಮಾ ಅವರ 'ರಹಸ್ಯ' ತಿಳಿದೂ ತಿಳಿಯದಂತೆ ನಟಿಸಿ ಅವರಿಗೆ ಬೆಂಬಲವಾಗಿ ನಿಂತರು.

ಪ್ರೇಮಾ ಅವರು ಮುಚ್ಚಿಟ್ಟಿದ್ದ 'ಸತ್ಯ'ವನ್ನು ಬಯಲು ಮಾಡಿದಾಗ ನಿರೀಕ್ಷೆಯಂತೆಯೇ ಗ್ರಾಮದಲ್ಲಿ ವಿರೋಧ ಎದುರಾಯಿತು. ಸ್ವಾವಲಂಬಿಯಾಗಲು ಮತ್ತು ಮೌಢ್ಯಾಚರಣೆಗಳ ಕಬಂಧಬಾಹುಗಳಿಂದ ಪಾರಾಗಲು ವಿದ್ಯೆಯೊಂದೇ ಅಸ್ತ್ರ ಎಂದು ಅವರಿಗೆ ತಿಳಿದಿತ್ತು. ಒಂದು ಹೆಜ್ಜೆ ಮುಂದಿಟ್ಟು ಕಡುಬಡತನದ ನಡುವೆಯೂ ಉನ್ನತ ಶಿಕ್ಷಣ ಪಡೆದರು. ಕಾಡುಗೊಲ್ಲ ಸಮುದಾಯದ ಮಹಿಳೆಯರ ಕುರಿತು ಸಂಶೋಧನೆ ಮಾಡಿ ಪಿಎಚ್‌.ಡಿ ಪಡೆದರು.

14ನೇ ಪುಟಕ್ಕೆ...

ವೇಣೂರಿನ ವೈರಾಗಿಗೆ ಮಹಾಮಜ್ಜನ



ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ವೇಣೂರಿನಲ್ಲಿರುವ ಭಗವಾನ ಬಾಹುಬಲಿ ಮೂರ್ತಿಗೆ ಫೆ.22ರಿಂದ ಮಾರ್ಚ್ 1ರವರೆಗೆ ಮಹಾಮಸ್ತಕಾಭಿಷೇಕ ನಡೆಯಲಿದೆ. 'ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ' ಎಂಬುದು ಬಾಹುಬಲಿ ಸಾಧಿಸಿ ತೋರಿಸಿದ ಜೀವನ ಸಿದ್ಧಾಂತ. ಇದರ ಪ್ರಸಾರ, ಜಗತ್ತಿನ ಕಲ್ಯಾಣ ಮಸ್ತಕಾಭಿಷೇಕದ ಉದ್ದೇಶ.

ದಕ್ಷಿಣ ಕನ್ನಡ ಜಿಲ್ಲೆಯ ವೇಣೂರಿನ ಬಾಹುಬಲಿ ಮೂರ್ತಿಯ ಮಹಾಮಸ್ತಕಾಭಿಷೇಕಕ್ಕೆ ತಯಾರಿ – ಚಿತ್ರ / ಫಕ್ರುದ್ದೀನ್ ಎಚ್

ಗಣೇಶ ಚಂದನಶಿವ

ಫಲ್ಗುಣಿ ನದಿ ತೀರದ ಸುಂದರ ಪರಿಸರದಲ್ಲಿರುವ ವೇಣೂರಿನ ವಿರಾಗಿಗೆ ಈಗ ಮಹಾಮಜ್ಜನದ ಸಡಗರ. 35 ಅಡಿ ಎತ್ತರ, ಏಕಶಿಲೆಯಲ್ಲಿ ರೂಪುಗೊಂಡಿರುವ ವೇಣೂರಿನ ನಗುಮೊಗದ ಬಾಹುಬಲಿ ಮೂರ್ತಿ ಕಲಾ ಶ್ರೀಮಂತಿಕೆಗೆ ಹೆಸರುವಾಸಿ.

ಸುಂದರ ಆವರಣ, ಧ್ವಜಸ್ತಂಭ, ಪದ್ಮಪೀಠದ ಮೇಲೆ ನೆಲೆ ನಿಂತಿರುವ ಗೊಮ್ಮಟೇಶ್ವರ. ಸಪ್ತ ಜೈನ ಬಸದಿ. ಸುತ್ತಲೂ ಹಸಿರುಹೊನಲು. ಸನಿಹದಲ್ಲೇ ಶ್ರೀಮಹಾಲಿಂಗೇಶ್ವರ ದೇವಸ್ಥಾನ... ಇವೆಲ್ಲವೂ ಇಲ್ಲಿಯ ಸೌಂದರ್ಯಕ್ಕೆ ಮೆರುಗು ತಂದಿವೆ.

ಈ ಕೈವಲ್ಯಮೂರ್ತಿಗೆ 1928, 1956ರಲ್ಲಿ ತಿಮ್ಮಣ್ಣರಸರಾದ ಹರಿಶ್ಚಂದ್ರ ಅಜಿಲ ಅವರ ನೇತೃತ್ವದಲ್ಲಿ ಎರಡು ಮಹಾಮಸ್ತಕಾಭಿಷೇಕ ನಡೆದಿದ್ದವು. ಅಳದಂಗಡಿ ಅರಮನೆಯ ತಿಮ್ಮಣ್ಣರಸ ಡಾ.ಪದ್ಮಪ್ರಸಾದ್ ಅಜಿಲ ಅವರು ಈ ಅರಸು ಮನೆತನದ ಚುಕ್ಕಾಣಿ ಹಿಡಿದ ನಂತರ ಹಾಗೂ ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ 2000, 2012ರಲ್ಲಿ ಮಹಾಮಸ್ತಕಾಭಿಷೇಕ ನಡೆದವು. ಪ್ರತಿ 12 ವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕ ಮಾಡಲಾಗುತ್ತಿದ್ದು, ಈ ಶತಮಾನದಲ್ಲಿ ಮೂರನೇ ಮಹಾಮಸ್ತಕಾಭಿಷೇಕಕ್ಕೆ ಜೈನ ಧರ್ಮದ ಶ್ರಾವಕ-ಶ್ರಾವಕಿಯರು ಅಣಿಯಾಗುತ್ತಿದ್ದಾರೆ.

ಸಂಭ್ರಮ

ತುಳುನಾಡು ಆಳಿದ ಜೈನ ರಾಜರ ವಂಶಗಳಲ್ಲಿ 'ತಿಮ್ಮಣ್ಣರಸ ಅಜಿಲ'ರ ವಂಶವು ವೇಣೂರಿನಲ್ಲಿ ಆಡಳಿತ ನಡೆಸಿತ್ತು. ಈ ಮನೆತನದವರಿಗೆ 'ಅಜಿಲ' ಎಂದು ಕರೆಯಲಾಗುತ್ತಿದೆ. ತಿಮ್ಮಣ್ಣ ಅಜಿಲ (IV) ಕ್ರಿ.ಶ. 1550ರಿಂದ 1610ರವರೆಗೆ ಇಲ್ಲಿ ರಾಜ್ಯಭಾರ ಮಾಡಿದರು. ಶ್ರವಣಬೆಳಗೊಳದಲ್ಲಿ ಚಾವುಂಡರಾಯ ಗೊಮ್ಮಟೇಶ್ವರ ಮೂರ್ತಿ ಪ್ರತಿಷ್ಠಾಪಿಸಿದಂತೆ, ತಮ್ಮ ರಾಜ್ಯದಲ್ಲಿಯೂ ಒಂದು ಬಾಹುಬಲಿಯ ಮೂರ್ತಿ ಪ್ರತಿಷ್ಠಾಪಿಸಬೇಕು ಎಂದು ಅವರು ಬಯಸುತ್ತಾರೆ. ವೇಣೂರು ಸಮೀಪದ 'ಕಲ್ಯಾಣಿ' ಸ್ಥಳದಲ್ಲಿರುವ ಕರಿಕಲ್ಲಿನಿಂದ ಬಾಹುಬಲಿ ಮೂರ್ತಿಯನ್ನು ಕೆತ್ತಿಸುತ್ತಾರೆ. ನಂತರ ಅದನ್ನು ಪ್ರತಿಷ್ಠಾಪಿಸುತ್ತಾರೆ.

ಪ್ರಾಕಾರದ ಹೊರಗಡೆ ಅಂಗಣದಲ್ಲಿ ಬ್ರಹ್ಮದೇವ ಸ್ತಂಭವಿದ್ದು, ಇದರ ತುದಿಯಲ್ಲಿ ದಕ್ಷಿಣಾಭಿಮುಖವಾಗಿ ಕುಳಿತಿರುವ ಬ್ರಹ್ಮದೇವನ ಮೂರ್ತಿ ಇದೆ. ಅದರ ಎಡ ಮತ್ತು ಬಲ ದಿಕ್ಕಿನಲ್ಲಿರುವ ಶಿಲೆಯಲ್ಲಿ, 'ಚಾವುಂಡ ವಂಶದ ತಿಮ್ಮರಾಜನು ಶ್ರವಣಬೆಳಗೊಳದ ತನ್ನ ಗುರುಗಳಾದ ಶ್ರೀ ಚಾರುಕೀರ್ತಿ ಸ್ವಾಮಿ ಅವರ ಅಪ್ಪಣೆ ಪ್ರಕಾರ ಶ್ರೀ ಬಾಹುಬಲಿ ಸ್ವಾಮಿಯ ಪ್ರತಿಮೆಯನ್ನು ಕ್ರಿ.ಶ 01.03.1604ರ ಗುರುವಾರ ದಿನ ಪ್ರತಷ್ಠಾಪಿಸಿದ' ಎಂದು ಅದರಲ್ಲಿ ಬರೆಯಲಾಗಿದೆ.

ಮರಳಿನಲ್ಲಿ ಹೂತಿದ್ದರು: ವೀರ ಪಾಂಡ್ಯನ ರಾಜಧಾನಿ ಕಾರ್ಕಳದಲ್ಲಿ ಪ್ರತಿಷ್ಠಾಪಿಸಿದ್ದ ಗೊಮ್ಮಟೇಶನ ಮೂರ್ತಿ ಕೆತ್ತಿದ ಶಿಲ್ಪಿಯನ್ನು ಕರೆಯಿಸಿ ಈ ಬಾಹುಬಲಿಯ ಮೂರ್ತಿಯನ್ನು ಕೆತ್ತಿಸುತ್ತಾರೆ.

ಕಾರ್ಕಳ ಪಾಂಡ್ಯ ನಗರವನ್ನು ಆಳುತ್ತಿದ್ದ ದಾವಣಿ ಇಮ್ಮಡಿ ಭೈರವರಾಯನಿಗೆ ತಿಮ್ಮಣ್ಣರಸ ಬಾಹುಬಲಿ ಮೂರ್ತಿ ಪ್ರತಿಷ್ಠಾಪಿಸುತ್ತಿರುವ ವಿಷಯ ಗೊತ್ತಾಗುತ್ತದೆ. ಇನ್ನೊಂದು ಮೂರ್ತಿ ಪ್ರತಿಷ್ಠಾಪನೆಯಾದರೆ ತನ್ನ ಹಿರಿಯನಾದ ವೀರ ಪಾಂಡ್ಯನ ಕೀರ್ತಿಗೆ ಕುಂದುಬರುವುದೆಂದು ಭಾವಿಸಿದ ಆತ, ಈ ಬಾಹುಬಲಿಯ ಮೂರ್ತಿಯನ್ನು ವೇಣೂರಿನಲ್ಲಿ ಪ್ರತಿಷ್ಠಾಪಿಸದೆ ಅದನ್ನು ಕಾರ್ಕಳಕ್ಕೆ ಕಳಿಸಬೇಕು ಎಂಬ ಸಂದೇಶ ರವಾನಿಸುತ್ತಾನೆ. ಇದಕ್ಕೆ ಅಂಜದ ತಿಮ್ಮಣ್ಣರಸ, ತಾವು ಕೆತ್ತಿಸಿರುವ ಮೂರ್ತಿಯನ್ನು ವೇಣೂರಿನಲ್ಲಿ ಪ್ರತಿಷ್ಠಾಪಿಸಿಯೇ ಸಿದ್ಧ ಎನ್ನುತ್ತಾರೆ. ಕುಪಿತನಾದ ಭೈರವರಾಯ, ಅಜಿಲರ ಗಡಿ ಪ್ರದೇಶವಾದ ನಾರಾವಿ ಮೇಲೆ ದಾಳಿ ಮಾಡುತ್ತಾನೆ. ತಿಮ್ಮಣ್ಣರಸ ಸಹ ಯುದ್ಧಕ್ಕೆ ಸಿದ್ಧರಾಗುತ್ತಾರೆ. ಭೈರವರಾಯನು ವೇಣೂರಿಗೆ ಬಂದರೂ ಆತನಿಗೆ ಈ ಮೂರ್ತಿ ಸಿಗಬಾರದು ಎಂದು ಅದನ್ನು ಅಲ್ಲಿಯ ನದಿಯ ಮರಳಿನಲ್ಲಿ (ಹೊಯ್ಗೆ) ಅಡಗಿಸಿ ಇಡುತ್ತಾರೆ. ತನ್ನ ಸೇನಾಧಿಪತಿಯನ್ನು ಕಳುಹಿಸಿ ಯುದ್ಧ ನಡೆಸಿ ಭೈರವರಾಯನನ್ನು ಸೋಲಿಸುತ್ತಾರೆ. ಮರಳಿನಲ್ಲಿ ಹೂತಿಟ್ಟ ಬಾಹುಬಲಿ ಮೂರ್ತಿ ತೆಗೆಸಿ ಫಲ್ಗುಣಿ ನದಿಯ ದಂಡೆಯಲ್ಲಿ ಪ್ರತಿಷ್ಠಾಪಿಸುತ್ತಾರೆ ಎಂಬುದು ಈ ಭಾಗದಲ್ಲಿ ಪ್ರಚಲಿತದಲ್ಲಿರುವ ಮಾತು.

ಆದರೆ, ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳುವುದು ಹೀಗೆ: 'ಮೂರ್ತಿಯನ್ನು ಅಡಗಿಸಿಟ್ಟಿದ್ದರು ಎಂಬುದು ನಿಜ. ಆದರೆ, ಮೂರ್ತಿ ಪ್ರತಿಷ್ಠಾಪನೆಯಾದ ನಂತರ ಇದು ನಡೆದಿದ್ದು ಎಂದು ಇತಿಹಾಸಕಾರರೊಬ್ಬರು ದಾಖಲಿಸಿದ್ದಾರೆ. ಈ ಕಾರಣ ಏನೇ ಇರಲಿ. ತ್ಯಾಗ, ಮೈತ್ರಿ ಮತ್ತು ಶಾಂತಿಯ ಸಂದೇಶಕ್ಕೆ ಸಾಕ್ಷಿಯಾಗಿದೆ ಈ ಮೂರ್ತಿ'.

50 ಅಡಿ ಅಟ್ಟಳಿಗೆ: ಮಹಾಮಸ್ತಕಾಭಿಷೇಕಕ್ಕಾಗಿ ಸುಮಾರು ₹80 ಲಕ್ಷ ವೆಚ್ಚದಲ್ಲಿ ಮೂರು ಕಡೆ 50 ಅಡಿ ಎತ್ತರದ ಕಬ್ಬಿಣದ ಅಟ್ಟಳಿಗೆ ಗೋಪುರ ನಿರ್ಮಿಸಲಾಗಿದೆ. ಈ ಕಾರ್ಯಕ್ರಮದ ಯಶಸ್ಸಿಗೆ ರಾಜ್ಯ ಸರ್ಕಾರ ಕೈಜೋಡಿಸಿದ್ದು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ₹1 ಕೋಟಿ ಬಿಡುಗಡೆ ಮಾಡಿದೆ. ಬಾಹುಬಲಿ ಬೆಟ್ಟದಲ್ಲಿರುವ ಬಸದಿಗಳ ನವೀಕರಣ, ಮೂರ್ತಿ ಪರಿಸರದಲ್ಲಿ ಗ್ರಾನೈಟ್ ಹಾಸು ಸೇರಿದಂತೆ ಅಗತ್ಯ ಕಾಮಗಾರಿ ಕೈಗೊಳ್ಳಲಾಗಿದೆ.

ಅಮೋಘಕೀರ್ತಿ ಮುನಿಮಹಾಜರು ಮತ್ತು ಅಮರಕೀರ್ತಿ ಮುನಿ ಮಹಾರಾಜರ ಉಪಸ್ಥಿತಿಯಲ್ಲಿ, ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ಮಸ್ತಕಾಭಿಷೇಕ ನಡೆಯಲಿದೆ. ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಅಳದಂಗಡಿಯ ಪದ್ಮಪ್ರಸಾದ ಅಜಿಲ ಅವರ ನೇತೃತ್ವದಲ್ಲಿ ವಿವಿಧ ಸಮಿತಿ ರಚಿಸಲಾಗಿದೆ. ಹೊಂಬುಜ, ಕಾರ್ಕಳ, ಶ್ರವಣಬೆಳಗೊಳ, ನರಸಿಂಹರಾಜಪುರ, ಜೈನಮಠದ ಭಟ್ಟಾರಕರು ಮಸ್ತಕಾಭಿಷೇಕದ ಅವಧಿಯಲ್ಲಿ ಪ್ರವಚನ ನೀಡಲಿದ್ದಾರೆ.

> **ಜಗತ್ತಿನಲ್ಲಿ ನಿಶಸ್ತ್ರೀಕರಣದ ಮೂಲಕ ಮೋಹ ಮತ್ತು ಲೋಭವನ್ನು ತೊರೆಯಬೇಕು. ತ್ಯಾಗದಿಂದ ಪ್ರೀತಿ ಮತ್ತು ಸಮೃದ್ಧಿ ಹೆಚ್ಚುತ್ತದೆ ಎಂಬ ಸಂದೇಶದೊಂದಿಗೆ ಬಾಹುಬಲಿ ಸ್ವಾಮಿಗೆ ಮಹಾಮಸ್ತಕಾಭಿಷೇಕ ನಡೆಯಲಿದೆ. ಇದು ಕೇವಲ ಧಾರ್ಮಿಕ ವಿಧಿ ಅಲ್ಲ; ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧ ವೃದ್ಧಿಯ ದಿಬ್ಬಣ. ಜಗತ್ತಿಗೆ ಈಗ ಅಗತ್ಯವಿರುವ ದಯೆ–ದಾನ–ಧರ್ಮಗಳಂತಹ ವಿಚಾರ ಪ್ರಚೋದಕ ಉಪನ್ಯಾಸಗಳ ಸಮ್ಮೇಳನ.**
>
> **ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ**
> ಮೂಡುಬಿದಿರೆ ಜೈನಮಠ



ಒಂಬತ್ತು ದಿನ ನಡೆಯುವ ಮಹಾಮಜ್ಜನ ಬೇರೆ ಬೇರೆ ಭಕ್ತರ ವತಿಯಿಂದ ನೆರವೇರಿಸಲಿದ್ದು, ಕೊನೆಯ ದಿನದ ಮಜ್ಜನವನ್ನು ಮಹಾಮಜ್ಜನ ಸಮಿತಿ ವತಿಯಿಂದ ನಡೆಸಲಾಗುತ್ತದೆ. ಮೊದಲ ದಿನ 108, ಎರಡನೇ ದಿನ 216, ಬಳಿಕ 504 ಕಲಶಗಳೊಂದಿಗೆ ನಡೆಯುವ ಮಹಾಮಜ್ಜನ ಕೊನೆಯ ದಿನ 1008 ಕಲಶಗಳೊಂದಿಗೆ ಪೂರ್ಣಗೊಳ್ಳಲಿದೆ. ಪ್ರತಿ ದಿನ ಸುಮಾರು 50 ಸಾವಿರ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಧಾರ್ಮಿಕ ಸಭೆ, ಸಾಂಸ್ಕೃತಿಕ ಕಾರ್ಯಕ್ರಮ, ವಸ್ತುಪ್ರದರ್ಶನ, ಪುಸ್ತಕ ಮಳಿಗೆ, ಯಕ್ಷಗಾನ ಕಾರ್ಯಕ್ರಮಗಳ ಮೂಲಕ ಜ್ಞಾನ ದಾಸೋಹದೊಂದಿಗೆ ಧರ್ಮ ಪ್ರಭಾವನಾ ಕಾರ್ಯವೂ ನಡೆಯಲಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಮಸ್ತಕಾಭಿಷೇಕ ಸಮಿತಿ ಕಾರ್ಯಾಲಯವನ್ನು ತೆರೆಯಲಾಗಿದೆ. ವಿಳಾಸ: ಮಸ್ತಕಾಭಿಷೇಕ ಸಮಿತಿ, ಬಾಹುಬಲಿ ಬೆಟ್ಟದ ಬಳಿ, ವೇಣೂರು-574242. ಮೊ: 9606356288. www.venur.in, info@venur.in

---

ನಾಟಕದ ಜಾತ್ರೆ...



12ನೇ ಪುಟದಿಂದ...

ಪಾತ್ರಗಳಿಗೆ ತಕ್ಕ ಕಲಾವಿದರ ಆಯ್ಕೆ ನಡೆಯುತ್ತದೆ. ತಿಂಗಳುಗಳ ಮೊದಲೇ ಸಿನಿಮಾ, ಸೀರಿಯಲ್‌ಗಳ ನಟ, ನಟಿಯರು, ಕಾಮಿಡಿ ಷೋಗಳ ಕಲಾವಿದರನ್ನು ಪಾತ್ರಕ್ಕಾಗಿ ಬುಕ್ ಮಾಡಲಾಗುತ್ತದೆ. ತಿಂಗಳುಗಟ್ಟಲೇ ಅದರ ತಾಲೀಮು ನಡೆಯುತ್ತದೆ. ಸಣ್ಣ ಜಾತ್ರೆ ಅಥವಾ ಯಾವುದಾದರೊಂದು ಊರಲ್ಲಿ ಮೊದಲು ಪ್ರದರ್ಶಿಸಲಾಗುತ್ತದೆ. ಅಲ್ಲಿ ಪ್ರೇಕ್ಷಕರ ಪ್ರತಿಕ್ರಿಯೆ ನೋಡಿ ಅಗತ್ಯ ಬದಲಾವಣೆ ಮಾಡಿಕೊಂಡು ಪೂರ್ಣ ಸಿದ್ಧತೆಯೊಂದಿಗೆ ರಂಗಕ್ಕಿಳಿಯುತ್ತವೆ ನಾಟಕ ಕಂಪನಿಗಳು.

ದಶಕದ ಹಿಂದೆ ಪೌರಾಣಿಕ, ಐತಿಹಾಸಿಕ, ಭಕ್ತಿ ಹಾಗೂ ಸಾಮಾಜಿಕ ನಾಟಕಗಳ ಪ್ರದರ್ಶನ ಹೆಚ್ಚಿತ್ತು. ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಅದರಲ್ಲೂ ಹಾಸ್ಯ ಪ್ರಧಾನ ನಾಟಕಗಳದೇ ದರ್ಬಾರು. ಹಾಸ್ಯ ನಾಟಕದಲ್ಲಿ ಪಂಚ್ ಡೈಲಾಗ್‌ಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ನಾಯಕ, ಖಳನಾಯಕ, ನಾಯಕಿ, ಹಾಸ್ಯ ಪಾತ್ರಧಾರಿಗಳ ವೇದಿಕೆ ಪ್ರವೇಶಕ್ಕೆ ತಕ್ಕಂತೆ ಸಂಗೀತ ನೀಡಲಾಗುತ್ತದೆ. ಇದಕ್ಕೆ ಪ್ರೇಕ್ಷಕರ ಪ್ರತಿಕ್ರಿಯೆಯೂ ಭರ್ಜರಿಯಾಗಿರುತ್ತದೆ.

'ಚಿಂದೋಡಿ ವೀರಪ್ಪನವರಿಂದ ಹಿಡಿದು ಚಿಂದೋಡಿ ವೀರೇಶ, ವರುಣ, ಮಯೂರರವರೆಗೆ ಐದು ತಲೆಮಾರುಗಳು ನಾಟಕದಲ್ಲೇ ಕಳೆದಿವೆ. ಪೊಲೀಸನ ಮಗಳು ನಾಟಕ 4,500 ಪ್ರದರ್ಶನಗಳನ್ನು ಕಂಡು ದಾಖಲೆ ಬರೆದಿದೆ. ಎಷ್ಟು ನಗತಿ ನಗು, ಗೋವಾದಲ್ಲಿ ಗೌಡ್ರು, ಹೆಂಡತಿ ಕೇಳಿ ಮದುವೆಯಾಗು, ನಿದ್ದಿಗೆಡಿಸ್ಯಾಳ ಬಸಲಿಂಗಿ... ಹೀಗೆ ಹತ್ತಾರು ಜನಪ್ರಿಯ ನಾಟಕಗಳನ್ನು ಪ್ರದರ್ಶಿಸಿದ್ದೇವೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ ಕೆ.ಬಿ. ಆರ್. ಡ್ರಾಮಾ ಕಂಪನಿಯ ಚಿಂದೋಡಿ ಶ್ರೀಕಂಠೇಶ.

'ಏಳುಬೀಳುಗಳ ನಡುವೆ ನಾಟಕ ಕಂಪನಿಗಳು ನಡೆದಿವೆ. ಕಷ್ಟಗಳು ಬಹಳ ಇವೆ. ಪ್ರತಿ ದಿನ ₹20 ಸಾವಿರ ಖರ್ಚಿದೆ. ನೂರಾರು ಸಂಖ್ಯೆಯಲ್ಲಿದ್ದ ನಾಟಕ ಕಂಪನಿಗಳ ಸಂಖ್ಯೆ ಈಗ ಇಪ್ಪತ್ತರ ಆಸುಪಾಸಿನಲ್ಲಿದೆ. ಟಿವಿ, ಮೊಬೈಲ್‌ಗಳಿಂದಾಗಿ ಜನರು ನಾಟಕಗಳಿಂದ ದೂರ ಸರಿದಿದ್ದಾರೆ. ಜತೆಗೆ ಸಿನಿಮಾ ನಟ, ನಟಿಯರನ್ನು ಕರೆಯಿಸುವುದು, ಐಟಂ ಸಾಂಗ್, ಅಶ್ಲೀಲ ಸಂಭಾಷಣೆಯಿಂದ ನಾಟಕ ಒಂದು ವರ್ಗಕ್ಕೆ ಸೀಮಿತವಾಗಿತ್ತು. ಈಗ ಅಶ್ಲೀಲ ಸಂಭಾಷಣೆ, ಐಟಂ ಸಾಂಗ್‌ಗಳಿಲ್ಲದ ಹಾಸ್ಯ ನಾಟಕಗಳ ಪ್ರದರ್ಶನ ಶುರುವಾದ ಮೇಲೆ ಮತ್ತೆ ಕುಟುಂಬ ಸಮೇತರಾಗಿ ಜನರು ಬರಲಾರಂಭಿಸಿದ್ದಾರೆ. ಇದು ನಾಟಕ ಕಂಪನಿಗಳಿಗೆ ಶುಭ ಸೂಚಕ' ಎಂದು ನಾಟಕಕಾರ ರಾಜಣ್ಣ ಜೇವರ್ಗಿ ಹೇಳುತ್ತಾರೆ.

ಬನಶಂಕರಿ ಜಾತ್ರೆಕೈ ಹಿಡಿದರೆ, ವರ್ಷಪೂರ್ತಿ ಅದೇ ನಾಟಕ ಪ್ರದರ್ಶನ ಮಾಡುತ್ತಾರೆ. ಇಲ್ಲಿನ ಪ್ರೇಕ್ಷಕರು ಮೆಚ್ಚಿದರೆ ಸಾಕು, ಬಾಯಿಮಾತಿನಲ್ಲಿಯೇ ರಾಜ್ಯದಾದ್ಯಂತ ನಾಟಕದ ಪ್ರಚಾರ ತನ್ನಿಂದ ತಾನೇ ಆಗುತ್ತದೆ. ಮುಂದೆ ಕೊಟ್ಟೂರು, ಗುಡಗುಂಟಿ ಅಮರೇಶ್ವರ, ಶಿರಸಿ ಮಾರಿಕಾಂಬಾ ಸೇರಿದಂತೆ ಹಲವು ಜಾತ್ರೆಗಳಲ್ಲಿ ಭರ್ಜರಿ ಪ್ರದರ್ಶನ ಕಾಣುತ್ತವೆ ಎಂಬುದು ನಾಟಕ ಕಂಪನಿಗಳ ಮಾಲೀಕರ ಅನುಭವದ ಮಾತು. ವಿಶಿಷ್ಟ ಸಂಸ್ಕೃತಿಯೊಂದನ್ನು ಹಲವು ದಶಕಗಳಿಂದ ಪೋಷಿಸಿಕೊಂಡು ಬರುತ್ತಿರುವ ಬನಶಂಕರಿ ಜಾತ್ರೆ, ಕಂಪನಿ ನಾಟಕಗಳ ಪಾಲಿಗೆ ಸಂಭ್ರಮ, ಸಡಗರ ಮತ್ತು ಭರವಸೆ...

ಪೌರಕಾರ್ಮಿಕರ ಪಾಡು 'ಪೊರಕೆಯ ಹಾಡು'

ಮಂಜುಶ್ರೀ ಎಂ. ಕಡಕೋಳ

ಮನುಷ್ಯ ಮಾಡಬಹುದಾದ ಅತ್ಯಂತ ನಿಕೃಷ್ಟವಾದ ವೃತ್ತಿಯೆಂದರೆ ಮತ್ತೊಬ್ಬ ಮನುಷ್ಯನ ಮಲವನ್ನು ಬಾಚುವುದು. ಈ ಕೆಲಸವನ್ನೂ ಕೆಲವೇ ಜಾತಿಗಳಿಗೆ ಸೀಮಿತಗೊಳಿಸಿರುವ ದೇಶ ನಮ್ಮದು. ಜಾತಿ ತಾರತಮ್ಯ, ಅನಕ್ಷರತೆ, ಹಿಂದಿನವರು ಇದೇ ಕೆಲಸ ಮಾಡಿದ್ದರು, ಬೇರೆ ಕೆಲಸ ಸಿಗಲ್ಲ ಇತ್ಯಾದಿ ಕಾರಣಗಳಿಗಾಗಿ ಇಂದಿಗೂ ಕೆಲಜಾತಿಗಳ ಜನರಿಗಷ್ಟೇ ಈ ಕಾಯಕ. ಸಮಾಜದ ಕೊಳೆಯನ್ನು ತೊಳೆಯುತ್ತಿರುವ ಪೌರಕಾರ್ಮಿಕರ ಬದುಕಿನ ಕುರಿತು ಬೆಳಕು ಚೆಲ್ಲುವ ನಾಟಕ 'ಪೊರಕೆಯ ಹಾಡು'.

ಬೆಂಗಳೂರಿನ ಕಲಾಗ್ರಾಮದಲ್ಲಿ ಈಚೆಗೆ ನೀರದಾರಿ ಕಲೆಕ್ಟಿವ್ ತಂಡ ಪ್ರದರ್ಶಿಸಿದ 'ಪೊರಕೆಯ ಹಾಡು' ಹೆಸರೇ ಹೇಳುವಂತೆ ಪೊರಕೆ ಹಿಡಿದು ಸಮಾಜದ ಮಲಿನವನ್ನು ತೊಳೆಯುವವರ ಬದುಕಿನ ಚಿತ್ರಣದ ಕಥೆ. ಪೌರಕಾರ್ಮಿಕ ಮಹಿಳೆ ಪದ್ಮಾ ಪೊರಕೆ ಹಿಡಿದು ಅಂದಿನ ಕಾಯಕಕ್ಕೆ ಸಜ್ಜಾಗುವ ದೃಶ್ಯದಿಂದ ಆರಂಭವಾಗುವ ನಾಟಕ, ನಿಧಾನಕ್ಕೆ ಪ್ರೇಕ್ಷಕರನ್ನು ಆವರಿಸುತ್ತಾ ಹೋಗುತ್ತದೆ. ಸಮಾಜದ ಮಲಿನವನ್ನು ಸ್ವಚ್ಛಗೊಳಿಸುವವರ ಬದುಕಿನ ಒಳನೋಟ, ಅವರ ನೋವು–ನಲಿವು ಎಲ್ಲವನ್ನೂ ನಾಟಕ ಪ್ರೇಕ್ಷಕರಿಗೆ ದಾಟಿಸುತ್ತದೆ. ನಾಟಕದಲ್ಲಿ ತಮಟೆ, ಡಾ.ಬಿ.ಆರ್.ಅಂಬೇಡ್ಕರ್ ಹಚ್ಚಿದ ಅರಿವಿನ ದೀಪಕ್ಕೆ ದನಿಯಾಗಿದೆ. ತಮಟೆಯ ಬಡಿತದಷ್ಟೇ ತೀವ್ರವಾಗಿ ಪೌರಕಾರ್ಮಿಕರ, ಮ್ಯಾನ್ಯುವೆಲ್ ಸ್ಕ್ಯಾವೆಂಜರುಗಳ ಮರಣಮಯ ಕಾಯಕ ಇಲ್ಲಿ ಅನಾವರಣಗೊಂಡಿದೆ.



'ಪೊರಕೆಯ ಹಾಡು' ನಾಟಕದ ದೃಶ್ಯ ಚಿತ್ರ: ಐವನ್ ಡಿ'ಸಿಲ್ವ

ಅಕ್ಷರ ಮತ್ತು ಸ್ಪರ್ಶದಿಂದ ದೂರವಾದರೂ ಈ ಕಾಯಕಯೋಗಿಗಳು ಜೀವನ ಪ್ರೀತಿ, ಕನಸು ಮತ್ತು ನಾದದಿಂದ ದೂರವಾದವರೇ ಅಲ್ಲ. ನಿರ್ಜೀವ ತೊಗಲಿನಲ್ಲಿ ಅಡಗಿರುವ ಜೀವ ನಾದವನ್ನು ಎಬ್ಬಿಸುವ, ಬಾಡೂಟದಲ್ಲಿನ ವೈವಿಧ್ಯತೆಯನ್ನು ವರ್ಣಿಸುವ ದೃಶ್ಯ ನೋಡುಗರ ಕುತೂಹಲ ಹೆಚ್ಚಿಸುತ್ತದೆ. ನಿಧಾನಕ್ಕೆ ಜಾತಿ ವ್ಯವಸ್ಥೆ, ಪ್ರಭುತ್ವ, ಇತಿಹಾಸ ಮತ್ತು ವರ್ತಮಾನವನ್ನು ಪ್ರಶ್ನಿಸುತ್ತಾ ಹೋಗುತ್ತದೆ.

ರಂಗಭೂಮಿ

ಬೀದಿ ಕಸ, ಮನೆ ಕಸ, ಆಸ್ಪತ್ರೆ ಕಸ ಕೊನೆಗೆ ಸರ್ಕಾರದ ಕಸ–ಹೀಗೆ ಎಲ್ಲ ಕಸವನ್ನೂ ಬಳಿಯುವ ಪೌರಕಾರ್ಮಿಕರ ಬದುಕು ಮೇಲ್ನೋಟಕ್ಕೆ ಕಂಡಷ್ಟು ಸರಳವಲ್ಲ. ಕಸ ಹಾಕುವವರು ನಾವು, ಸ್ವಚ್ಛಗೊಳಿಸುವವರು ಪೌರಕಾರ್ಮಿಕರು ಎನ್ನುವ ಕನಿಷ್ಠ ಪ್ರಜ್ಞೆಯನ್ನೂ ಹೊಂದದ ನಾಗರಿಕರ, ಅನಾಗರಿಕ ನಡೆಯನ್ನು ನಾಟಕ ಸೂಕ್ಷ್ಮವಾಗಿ ಬಿಂಬಿಸುತ್ತದೆ.

ಗಂಡ ಅಥವಾ ಹೆಂಡತಿ ಇಬ್ಬರಲ್ಲಿ ಒಬ್ಬರು ಪೌರಕಾರ್ಮಿಕರಾಗಿದ್ದರೆ, ಸಂಗಾತಿಯನ್ನು ಮುಟ್ಟುವಾಗಲೂ ಕೈಗಳು ಹಿಂಜರಿಯುತ್ತವೆ. ಅಷ್ಟೇ ಅಲ್ಲ, ಹೆತ್ತಮಗುವನ್ನು ಸ್ಪರ್ಶಿಸಲೂ ಕೈಗಳು ನಡುಗುತ್ತವೆ. ಹೇಲು–ಉಚ್ಚೆ, ಕೊಳಚೆ, ಕಸ ಬಳಿದ ಕೈಗಳಿಗೆ ಅಂಟಿದ ಸೋಂಕು ಎಲ್ಲಿ ತಮ್ಮ ಕರುಳಕುಡಿಗೆ, ಸಂಗಾತಿಗೆ ಅಂಟುತ್ತದೆಯೋ ಎಂಬ ಭೀತಿ ಈ ಸ್ವಚ್ಛತಾ ಸೇನಾನಿಗಳದ್ದು. ಅಂತೆಯೇ, ತುಂಬಿದ ಬಸುರಿ ಲಕ್ಷ್ಮಿ ತನ್ನ ಹೆತ್ತವ್ವನಿಗಾಗಿ ಮಾಡಿಟ್ಟ ಘಮಘಮಿಸುವ ಮಟನ್‌ಗೂ ಸತ್ತನಾಯಿ/ಬೆಕ್ಕಿನ ದುರ್ನಾತ ತಡೆಯುವ ಶಕ್ತಿಯಿಲ್ಲ. ಮಗಳು ಪ್ರೀತಿಯಿಂದ ಬಡಿಸಿದ ಬಾಡೂಟವನ್ನು ತಿನ್ನಲಾಗದೇ ಪದ್ಮಾ, ವಾಂತಿ ಮಾಡಿಕೊಳ್ಳುತ್ತಾಳೆ. ಅವಳಂಥ ಪೌರಕಾರ್ಮಿಕರು ವಾರದಲ್ಲಿ ಊಟ ಬಿಟ್ಟ ದಿನಗಳೆಷ್ಟೋ, ಲೆಕ್ಕವಿಟ್ಟವರಾರು? ಊಟವಿರಲಿ, ಕೆಲಸದ ಸ್ಥಳದಲ್ಲಿ ಕನಿಷ್ಠ ಘನತೆ, ಗೌರವವನ್ನೂ ನೀಡದ ಕಾಯಕ ಈ ವೃತ್ತಿಯದ್ದು. 'ಕಸದ ಪೊರಕೆ ಹಾಳಾಗಿದ್ದರೆ, ಸೀರೆಯಲ್ಲೇ ಕಸಗುಡಿಸು, ಮಾಡೋದು ಕಸದ ಕೆಲಸ ಆಫೀಸರ್ ಸಂಬಳ ಬೇಕಂತೆ...' ಎನ್ನುವ ಮೇಸ್ತ್ರಿಗಳ ದೌಲತ್ತು ಒಂದೆಡೆಯಾದರೆ, ನೇಸರ ಮೂಡುವ ಮುನ್ನವೇ ಜಗದ ಕಸ ಸ್ವಚ್ಛಗೊಳಿಸಲು ತೆರಳುವ ಪೌರಕಾರ್ಮಿಕ ಮಹಿಳೆಯರನ್ನೂ ಬಿಡದ ಕಾಮುಕ ಕೈಗಳ ದೌರ್ಜನ್ಯ ಮತ್ತೊಂದೆಡೆ. ಪೌರಕಾರ್ಮಿಕರನ್ನು ಹೀನಾಯವಾಗಿ ಕಾಣುವಂಥದ್ದನ್ನು ನಾಟಕ ತಮಾಷೆಯಾಗಿ ಹೇಳುತ್ತಲೇ, ವ್ಯವಸ್ಥೆಯ ಅಮಾನವೀಯತೆಯನ್ನು ತೆರೆದಿಡುತ್ತದೆ.

ಮಲದ ಗುಂಡಿಯಲ್ಲಿ ಹೆಣವಾದ ಕುಟ್ಟಿ ಪ್ರಸಾದ್ ಅವರಂಥ ನೂರಾರು ಜನರ ಒಡಲನೋವಿಗೆ ನಾಟಕ ಕನ್ನಡಿ ಹಿಡಿಯುತ್ತದೆ. ಹೀಗೆ ಸತ್ತವರ ಕುಟುಂಬಗಳಿಗೆ ₹ 10 ಲಕ್ಷ ನೀಡಬೇಕೆಂಬ ಕಾನೂನು ಇದ್ದರೂ, ಸ್ಥಳೀಯ ಆಡಳಿತಗಾರರು, ಪುಡಾರಿಗಳು ಆ ಹಣಕ್ಕೂ ಕನ್ನ ಹಾಕಿ ಪುಡಿಗಾಸಿನ ಪರಿಹಾರ ನೀಡುವ ದೃಶ್ಯಗಳು ಮನುಷ್ಯರೊಳಗಿನ ವಿಕೃತಿಯನ್ನು ತೋರಿಸುತ್ತದೆ.

ಮೂರ್ಛೆ ಹೋಗುವಷ್ಟು ದುರ್ನಾತ ಬೀರುವ ಮಲದ ಗುಂಡಿಯೊಳಗೆ ಇಳಿದ ಎರಡೇ ನಿಮಿಷಕ್ಕೆ ಲಕ್ವಾ ಹೊಡೆಯುತ್ತದೆ. ಅದರೊಳಗಿನ ಗಾಳಿ ಎಷ್ಟು ವಿಷವೆಂದರೆ ಏಳೇ ನಿಮಿಷಕ್ಕೆ ಮನುಷ್ಯ ಪ್ರಾಣ ಇನ್ನಿಲ್ಲವಾಗುತ್ತದೆ. ಸೀದಾ ಯಮಲೋಕಕ್ಕೆ ಕಳಿಸುವ ಮಲದ ಗುಂಡಿಗಳಿಗೆ ಬಿದ್ದು ಸತ್ತವರೆಷ್ಟು? ಇನ್ನೆಷ್ಟು ಹೆಣಗಳು ಬೀಳಬೇಕೋ? ಎಂದು ಪ್ರಶ್ನಿಸುವ ನಾಟಕ ಗಾಢ ವಿಷಾದಕ್ಕೊಯ್ಯುತ್ತದೆ. ಕೋಲಾರದ ಚಿನ್ನದ ಗಣಿಯ ಗಣಿಗಾರಿಕೆ ನಿಂತರೂ, ಈ ಕಾರ್ಮಿಕರಿಗೆ ಮಲ ಬಾಚುವುದು ತಪ್ಪಲಿಲ್ಲ ಎಂಬ ಇತಿಹಾಸದ ಸತ್ಯ, ವರ್ತಮಾನದಲ್ಲೂ ಅನುರಣಿಸುತ್ತಿರುವುದನ್ನು ನಾಟಕ ಮಾರ್ಮಿಕವಾಗಿ ಹೇಳುತ್ತದೆ.

ಸೂತ್ರಧಾರ, ಕುಡುಕ ತಂದೆ ಹಾಗೂ ಸಾವಿ ಪಾತ್ರದಲ್ಲಿ ದು. ಸರಸ್ವತಿ, ಲಕ್ಷ್ಮಿಯಾಗಿ ಅಶ್ವಿನಿ ಬೋಧ್, ಇತರ ಪಾತ್ರಗಳಿಗೆ ತಕ್ಕ ಜೀವ ತುಂಬಿ ಭರತ್ ಡಿಂಗ್ರಿ, ನಂದಾ, ಭರತ್ ನಟಿಸಿದ್ದಾರೆ. ಪೌರಕಾರ್ಮಿಕ ವೃತ್ತಿಯಲ್ಲಿರುವ ಮಣಿಯಮ್ಮ ಹಾಗೂ ಸುರೇಶ್ ನಾಟಕದಲ್ಲಿ ಪಾತ್ರಧಾರಿಗಳಾಗಿರುವುದು ವಿಶೇಷ.

ಕನ್ನಡ ರಂಗಭೂಮಿಯಲ್ಲಿ ಶೋಷಿತರ ಬದುಕಿನ ನೋವು ಮತ್ತು ಸಂಭ್ರಮಗಳೆರಡನ್ನೂ ರಂಗದ ಮೇಲೆ ತರುತ್ತಿರುವ ನಿರ್ದೇಶಕ ಲಕ್ಷ್ಮಣ ಕೆ.ಪಿ. ಅವರ ಮುಡಿಗೆ 'ಪೊರಕೆಯ ಹಾಡು' ಮತ್ತೊಂದು ಗರಿ ಮೂಡಿಸಿದೆ.

ಪೌರಕಾರ್ಮಿಕರ ಬದುಕನ್ನು ಪೂರ್ಣಪ್ರಮಾಣದಲ್ಲಿ ನಾಟಕದ ಕಥಾವಸ್ತುವನ್ನಾಗಿಸಿದ ದು. ಸರಸ್ವತಿ ಅವರ ಶ್ರಮ ಶ್ಲಾಘನೀಯ. ದೇಸಿ ಭಾಷೆಯ ಸೊಗಡು, ಆಪ್ತವೆನಿಸುವ ದೃಶ್ಯಗಳು, ಹೋರಾಟದ ಹಾಡುಗಳು ನಾಟಕಕ್ಕೆ ಪೂರಕವಾಗಿವೆ.

ನಾಟಕ ಮುಗಿದ ಮೇಲೂ ಪೌರಕಾರ್ಮಿಕರ ಹಾಡು–ಪಾಡು ಕಾಡುತ್ತದೆ.

ಮುನ್ನೋಟ 18-02-2024 ರಿಂದ 25-02-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ದೈವವಿದ್ಯೆಯ ಕಡೆಗೆ ಹೆಚ್ಚು ಒಲವು ತೋರುವಿರಿ. ಸಂಗೀತ ಸಾಧನಗಳನ್ನು ತಯಾರು ಮಾಡುವವರಿಗೆ ಹೆಚ್ಚುಬೇಡಿಕೆ ಬರುತ್ತದೆ. ಧನ ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ನಿಮ್ಮ ಮಾತುಕತೆಗಳಲ್ಲಿ ವ್ಯವಹಾರಿಕತೆ ಎದ್ದು ಕಾಣುತ್ತದೆ. ಆಸ್ತಿ ಖರೀದಿ ವಿಷಯದಲ್ಲಿ ಸ್ವಲ್ಪ ಹಿನ್ನಡೆ ಆಗಬಹುದು. ಉದ್ಯೋಗದಲ್ಲಿ ತಮ್ಮ ಇಲಾಖೆ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲವಿರುತ್ತದೆ.

ವೃಷಭರಾಶಿ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2
ಆದಾಯವು ಚೇತರಿಕೆ ಹಂತವನ್ನುಕಾಣುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಕಡಿಮೆ. ಹಣ ನಿರ್ವಹಣೆಯಲ್ಲಿ ಯಶಸ್ವಿಯಾಗಿ ಸಾಲಗಾರ ಆಗುವುದನ್ನು ತಪ್ಪಿಸಿಕೊಳ್ಳುವಿರಿ. ಕೃಷಿ ಆಧಾರಿತ ಉತ್ಪನ್ನಗಳನ್ನು ಮಾರುವವರಿಗೆ ಅಭಿವೃದ್ಧಿಯಿರುತ್ತದೆ. ಸಂಗಾತಿಗೆ ಅನಿರೀಕ್ಷಿತ ಧನಸಹಾಯ ಸಿಗಲಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ದೇಹಾಲಂಕಾರಕ್ಕೆ ಹೆಚ್ಚು ಪ್ರಾಮುಖ್ಯ ಕೊಡುವಿರಿ. ಧನ ಆದಾಯವು ಮಂದಗತಿಯಲ್ಲಿರುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಹಿರಿಯರು ಅಡ್ಡಿ ಮಾಡುವ ಸಂದರ್ಭವಿದೆ. ಸಂಸಾರದಲ್ಲಿ ಸಣ್ಣಪುಟ್ಟ ಕಿರಿಕಿರಿಗಳಿರುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಮಾನ್ಯ ಫಲಿತಾಂಶವಿರುತ್ತದೆ. ಹರಿತವಾದ ಆಯುಧಗಳೊಂದಿಗೆ ಕೆಲಸ ಮಾಡುವವರು ಎಚ್ಚರದಿಂದಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮೈಯಲ್ಲಿ ಆಲಸೀತನ ತುಂಬಿದ್ದರೂ, ಒಲ್ಲದ ಮನಸ್ಸಿನಿಂದ ಕಾರ್ಯೋನ್ಮುಖರಾಗುವಿರಿ. ಬಂಧುಗಳು ನಿಮ್ಮ ಧರ್ಮತತ್ಪರತೆಗೆ ಬೆರಗಾಗುವರು. ಕೃಷಿ ಮಾಡುವವರಿಗೆ ಆದಾಯ ವೃದ್ಧಿಸುವ ಅವಕಾಶವಿದೆ. ಹಣ್ಣು,ತರಕಾರಿ ಬೆಳೆಗಾರರಿಗೆ ಆದಾಯ ಹೆಚ್ಚುತ್ತದೆ. ಸ್ಥಿರಾಸ್ತಿಯನ್ನು ಕೊಳ್ಳಲು ಸಂಗಾತಿ ಹೆಚ್ಚು ಒತ್ತಡ ಹಾಕಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮಲ್ಲಿ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಕೆಲಸ ಕಾರ್ಯಗಳನ್ನು ಮಾಡಲು ಹೆಚ್ಚು ಉತ್ಸಾಹ ತೋರುವಿರಿ. ಧರ್ಮವಿದ್ಯೆಗಳಿಂದ ಸಂಪಾದನೆ ಮಾಡುವವರಿಗೆ ಆದಾಯ ಹೆಚ್ಚಲಿದೆ. ಸಹೋದರಿಯರಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಯಶಸ್ಸು ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ಕೆಲಸಗಳು ಸರಿಯಾಗಿ ಆಗದೆ ಮನಸ್ಸು ಗೊಂದಲದ ಗೂಡಾಗಬಹುದು. ಧನ ಆದಾಯವು ನಿಮ್ಮ ಅಗತ್ಯಕ್ಕೆ ತಕ್ಕಂತೆ ಇರುತ್ತದೆ. ಕೆಲಸ ಕಾರ್ಯಗಳಲ್ಲಿ ಹೆಚ್ಚು ಶ್ರಮ ಹಾಕುವಿರಿ. ಹಿರಿಯರ ಬಗ್ಗೆ ಟೀಕೆ ಮಾಡಿ ಮುಜುಗರಕ್ಕೆ ಒಳಗಾಗುವಿರಿ. ಕೆಲವರಿಗೆ ಮಕ್ಕಳಿಂದ ಧನಸಹಾಯ ಸಿಗುತ್ತದೆ. ಹಿರಿಯರಿಂದ ಸಿಗುತ್ತಿದ್ದ ಸಹಾಯಗಳು ನಿಲ್ಲುವ ಸಾಧ್ಯತೆಗಳಿವೆ. ಸಂಗಾತಿಯ ನಡವಳಿಕೆಯು ನಿಮಗೆ ಕೋಪವನ್ನು ತರಿಸಬಹುದು .

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಕೆಲಸ ಕಾರ್ಯಗಳಿಗೆ ಪರಿಚಯದವರಿಂದ ಅಡ್ಡಿಯಾಗುತ್ತದೆ. ಕೃಷಿ ಜಮೀನಿನ ವಿಸ್ತರಣೆಯಲ್ಲಿ ಯಶಸ್ವಿಯಾಗುವಿರಿ. ಮೆಕ್ಯಾನಿಕಲ್ ವಿಭಾಗದಲ್ಲಿ ಕಲಿಯುತ್ತಿರುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಮೂಳೆ ತೊಂದರೆಗಳು ಹೆಚ್ಚು ಕಾಡಬಹುದು. ಚರ್ಮ ರೋಗಗಳು ಕಾಡುವ ಸಾಧ್ಯತೆ ಇದೆ. ಸಂಗಾತಿಯಿಂದ ಸ್ವಲ್ಪ ಸಹಕಾರ ದೊರೆಯುತ್ತದೆ. ಆಭರಣ ವ್ಯಾಪಾರಿಗಳಿಗೆ ನಿರೀಕ್ಷಿತ ವ್ಯಾಪಾರ ಇರುವುದಿಲ್ಲ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ದೇಹ ಶಕ್ತಿಗಾಗಿ ವ್ಯಾಯಾಮ ಮಾಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ಹಿಡಿತ ಸಾಧಿಸಲು ಸಾಕಷ್ಟು ಪ್ರಯತ್ನ ಪಡುವಿರಿ. ಆಸ್ತಿ ವಿಚಾರದ ದಾವೆಗಳಲ್ಲಿ ನಿಮಗೆ ಶುಭ ಸೂಚನೆ ದೊರೆಯುತ್ತದೆ. ಮಕ್ಕಳನ್ನು ವಿದೇಶಕ್ಕೆ ವಿದ್ಯಾಭ್ಯಾಸಕ್ಕಾಗಿ ಕಳಿಸಲು ಏರ್ಪಾಡು ಮಾಡುವಿರಿ. ಆಹಾರ ವ್ಯತ್ಯಾಸದಿಂದ ಅನಾರೋಗ್ಯ ಉಂಟಾಗಿ ಖರ್ಚು ಹೆಚ್ಚುತ್ತದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮನಸ್ಸಿನಲ್ಲಿ ಸಂತೋಷವಿರುತ್ತದೆ. ಧನ ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಬಂಧುಗಳು ನಿಮ್ಮ ಬೆಳವಣಿಗೆಯನ್ನು ಕಂಡು ಹೊಟ್ಟೆಕಿಚ್ಚು ಪಡುವರು. ಆಸ್ತಿಯಲ್ಲಿನ ಕಲಹಗಳಿಗೆ ರಾಜಿ ಸೂತ್ರವೇ ಪರಿಹಾರ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ. ಭಾಷಾ ಪಂಡಿತರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಬಾಯಿ ಹುಣ್ಣು ಕಾಣಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಮುಖದಲ್ಲಿ ಗಾಂಭೀರ್ಯ ತುಂಬಿರುತ್ತದೆ. ಧನ ಆದಾಯವು ಚೇತರಿಕೆಯತ್ತ ಹೊರಳುತ್ತದೆ. ಬಂಧುಗಳು ಮಾಡುವ ಷಡ್ಯಂತ್ರವನ್ನು ಸಮರ್ಪಕವಾಗಿ ನಿವಾರಿಸುವಿರಿ. ಸ್ಥಿರಾಸ್ತಿ ಕೊಳ್ಳಲು ಬೇಕಾದ ಹಣದ ಮೂಲಗಳು ಗೋಚರಿಸುತ್ತವೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಯಶಸ್ಸು ಇರುತ್ತದೆ. ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಆರೋಗ್ಯದ ಸುಧಾರಣೆಯಾಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸಮಾಜದಲ್ಲಿ ಹಿರಿಯರಿಗೆ ಪ್ರಾತಿನಿಧ್ಯ ಸಿಗುತ್ತದೆ. ಸ್ಥಿರಾಸ್ತಿ ಕೊಳ್ಳುವ ವಿಚಾರದಲ್ಲಿ ಮುಂದುವರೆಯಬಹುದು. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ತೆರಿಗೆ ತಜ್ಞರಿಗೆ ಸ್ವಲ್ಪ ಹಿನ್ನಡೆಯಾಗಬಹುದು. ಸಂಗಾತಿಯು ನಿಮ್ಮ ಮೇಲೆ ಮುನಿಸಿಕೊಂಡರೂ ಕೂಡ ನಿಮ್ಮ ಸಹಾಯಕ್ಕೆ ನಿಲ್ಲುವರು. ತಂದೆಯಿಂದ ಸ್ವಲ್ಪ ಧನ ಸಹಾಯ ಪಡೆಯುವಿರಿ. ವೃತ್ತಿಯಲ್ಲಿ ಸಾಕಷ್ಟು ಗೊಂದಲಗಳು ಮೂಡುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಬಹಳ ಚುರುಕಾಗಿ ಓಡಾಡಿ ಕೆಲಸ ಮಾಡಿದಂತೆ ತೋರಿಸಿಕೊಳ್ಳುವಿರಿ. ತಾಯಿಯು ನಿಮ್ಮ ಮಾತುಗಳನ್ನು ಸಾಕಷ್ಟು ನಂಬುವರು. ಸ್ತ್ರೀಯರಿಂದ ಹೆಚ್ಚು ಸಹಕಾರ ನಿಮಗೆ ದೊರೆಯುತ್ತವೆ. ಅದಿರು ವ್ಯಾಪಾರ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಸಂಗಾತಿಯ ಆರೋಗ್ಯ ಸುಧಾರಣೆಗಾಗಿ ಧಾರ್ಮಿಕ ಕಾರ್ಯಗಳನ್ನು ಮಾಡಬೇಕಾಗುತ್ತದೆ.

ಪದಬಂಧ 2829



ಮೇಲಿನಿಂದ ಕೆಳಕ್ಕೆ

1. ಮುಕುತಿಗೆ ಬೇಕಾಗಬಹುದಾದ ಭಕ್ತಿ ವಿರಳವಾಗಿ ಹೀಗೆ 3
2. ಖಾಂಡವದಹನದಲ್ಲಿ ತಕ್ಷಣ ತಲೆಮರೆಸಿಕೊಂಡ ಸರ್ಪ 5
3. ಎಲ್ಲರಿಗೂ ಸೇರಿದ್ದು 5
4. ದೇಹದಿಂದ ಜನ್ಮತಳೆದ ಚಲುವೆಯನ್ನು ಕರೆಯಿರಿ 3
5. ಹೂವಿನಂತೆ ನವಿರಾದ ಬಾಲೆ 3
7. ಕಿರಿದಾದ ನರವುಳ್ಳ ಕಿಂಪುರುಷ 3
10. ವರನು ಹಾಡುವ ರಾಗವೇ ಇದು? 3
12. ನೈವೇದ್ಯಕ್ಕೆ ಬರುವ ಸಂಸ್ಕೃತ ಬಾಳೆ 3
13. ಪಶುಪಕ್ಷಿಗಳು ಅಡಗಿಕೊಳ್ಳುವ ಕಾಡು 3
14. ಚಿನ್ನವನ್ನು ಮಾಡುವ ದ್ರವ ಶಾಸ್ತ್ರ ಈಗ ಎಲ್ಲಕ್ಕೂ ಅನ್ವಯ 5
15. ಚಂದ್ರಗುಪ್ತನ ವಿರುದ್ಧ ಅಚ್ಚೊತ್ತಿದ ದಾನವ 5
16. ಎಲ್ಲರನ್ನೂ ಸರಿಗಟ್ಟುವ ಮಾಪಕ ತಲೆಕೆಳಗಾಗಿ ತಿಂಗಳಿಗೆ ಕೊನೆಯಾಗಿದೆ 3
19. ಪೊಗರು, ಪವರು ಹೆಚ್ಚಿರುವ ಕೊಂಬಿನ ಪ್ರಾಣಿ 3
21. ಒಂದರಿಂದ ಮೂವತ್ತನೆ ತಾರೀಖಿನವರೆಗಿನ ದುಡಿತಕ್ಕೆ ಸಿಗುವ ಬೆಲೆ 3

ಎಡದಿಂದ ಬಲಕ್ಕೆ

1. ಕಡಲುಕ್ಕಿದಾಗ ರಾಮಲಕ್ಷ್ಮಣಾನುಜ ಬರುತ್ತಾನೆ 3
3. ರಾಜರ ಕಾಲದಲ್ಲಿ ಸಣ್ಣ ಪ್ರದೇಶದ ಮುಖಂಡ 3
5. ವಂಶವನ್ನು ಬೆಳಗುವ ಎಳ್ಳಿನ ನಾಮ 5
6. ಉಫೇ!, ಜನಕಪುತ್ರಿಗೆ, ರಾಮನ ಪ್ರಿಯಸತಿಗೆ 5
8. ಮುದ್ದಾದ ಮಡದಿಯ ಮುದ್ದಾದ ತಂಗಿ 3
9. ವಿವಾಹ ಮಂಟಪದಲ್ಲಿ ನಾಯಕ ಪಟ್ಟ ಇವನದೆ 5
11. ಬೆಂಗಳೂರು ಬಳಿಯಿರುವ ಬಂಗಾರದ ಪಟ್ಟಣ 5
13. ಕನ್ನಡದ ಅಶ್ವತ್ಥವೃಕ್ಷ 5
15. ಕೃಷ್ಣನ ಕೊಳಲ ನಾದದಿಂದ ಮೂಡಿದ ಹಾಡು 5
17. ದೀರ್ಘ ಕಡಲು 3
18. ಹೇಗೆ ನೋಡಿದರೂ ಈತ ತೆನಾಲಿರಾಮನಂತೆ ವಿದೂಷಕ ವಿದ್ವಾಂಸ 5
20. ವೈರಾಗ್ಯದಿಂದ ಅರಸ ಪಡೆಯಬಹುದಾದ ನಾಲ್ಕನೇ ಆಶ್ರಮ 5
22. ರೋಗದ ಜೊತೆ ಬೆಳೆಯುವ ಕಾಯಿಲೆ 3
23. ಸರ ಜಾರಿ ಸುಲಭ ಸುಲಲಿತವಾಗಿದೆ 3

ಪದಬಂಧ ಉತ್ತರ -2828

ಮೇಲಿಂದ ಕೆಳಕ್ಕೆ


1.ತೆರಿಗೆದಾರ 2.ಕೆಲಸ 3.ಕಾನನ 4.ಸಕಲಬಲ 6.ಕಾವೇರಿಜಲಾಶಯ 8.ಬೆಸ 9.ಹೇಮ 11.ರವಿಜ 12.ತನಯ 14.ವಸಂತಮಾಸ 15.ಮತಿ 17.ಕ್ಷಮೆ 18.ಶಂಕುಸ್ಥಾಪನೆ 21.ಸನಿಕೆ 22.ನವಮ

ಎಡದಿಂದ ಬಲಕ್ಕೆ

1.ತೆಗಳಿಕೆ 3.ಕಾಳಿದಾಸ 5.ಸಮಕಾಲೀನ 7.ದಾಳಿಂಬೆ 9.ಹೇರಂಬ 10.ಸರ 12.ತಮ 13.ವಿರಾಜಮಾನ 15.ಮಜ 16.ಯಕ್ಷ 19.ಸಂಗಾತಿ 20.ಮೆಲಕು 21.ಸಹಾಯಧನ 23.ಸಜ್ಜನಿಕೆ 24.ಮರಿಯಾನೆ

‘ಜಾಜಿಮಲ್ಲಿಗೆ’ಯಲ್ಲಿ ನೆನಪುಗಳ ಘಮಲು...

ಹೆಸರಾಂತ ಕವಿ ಸತ್ಯಾನಂದ ಪಾತ್ರೋಟ ಅವರ ಆತ್ಮಕಥನ ಜಾಲಿಮರದಲ್ಲೊಂದು ಜಾಜಿಮಲ್ಲಿಗೆ ಫೆಬ್ರುವರಿ 18 ರ ಭಾನುವಾರ ಬಾಗಲಕೋಟೆಯಲ್ಲಿ ಬಿಡುಗಡೆ ಆಗಲಿದೆ. ಈ ಆತ್ಮಚರಿತ್ರೆಯಲ್ಲಿನ ರೂಪಕಗಳು ಬಹುಕಾಲ ಕಾಡುವಂತಿವೆ. ಅವುಗಳಲ್ಲಿ ಒಂದು ಅಧ್ಯಾಯ ನಿಮ್ಮ ಓದಿಗಾಗಿ.



ನಾನು ಶಾಲೆಗೆ ಹೋಗಿ ಬರುವ ರಸ್ತೆಯ ಪಕ್ಕದಲ್ಲಿ ಆಕಾಶ ಮಲ್ಲಿಗೆಯ ಗಿಡಗಳ ಸಾಲು. ಅವು ಆಕಾಶಕ್ಕೆ ಮುಖ ಮಾಡಿ ನಗೆ ಚೆಲ್ಲಿರುತ್ತಿದ್ದವು. ಮಳೆಗೆ ಇಲ್ಲ ಗಾಳಿಗೆ ಆ ಹೂಗಳು ರಸ್ತೆ ತುಂಬ ಉದುರಿ ಹೂ ಹಾಸಿಗೆಯಂತೆ ಕಣ್ಣಿಗೆ ಕುಕ್ಕುತ್ತಿತ್ತು. ಹೂವಿನ ಕೆಳಗಿನ ಭಾಗದಿಂದ ಫೀಫೀ ಮಾಡಿ ಊದುವುದೇ ಮಜಾವಾಗಿರುತ್ತಿತ್ತು. ಹೂವಿನ ಗಿಡಗಳ ಪಕ್ಕದಲ್ಲಿಯೇ ಬಟಾಬಯಲು, ಆ ಬಯಲಿನಲಿ ಆಕಾಶದಷ್ಟು ಎತ್ತರ, ಭೂಮಿಯಷ್ಟು ಅಗಲ ಹುಣಸೆಮರವೊಂದು ಬೆಳೆದು ನಿಂತಿತ್ತು. ಭೀಕರ ಮಳೆ, ಗಾಳಿ ಬಂದರೂ; ಅದು ಕೂದಲೆಳೆಯಷ್ಟು ಅಲಗಾಡುತ್ತಿರಲಿಲ್ಲ. ಬೇರು ಸಡಿಲಗೊಂಡದ್ದನ್ನು ನಾನು ಒಮ್ಮೆಯೂ ನೋಡಿರಲಿಲ್ಲ. ಮೈತುಂಬಿಕೊಂಡ ಆ ಮರದ ತುಂಬ ಎಲೆ, ಹೂ, ಕಾಯಿ ಸಮೃದ್ಧಿಯಿಂದ ಬೀಗುತ್ತಿದ್ದವು.

ಡ್ವಾರಿಗೆ ಬಂದ ಹುಣಸೆಕಾಯಿಗಳನ್ನು ಕಲ್ಲಿಂದ ಹೊಡೆದು ಆಡ್ಕೊಂಡು ಚೀಪಿದ್ದುಂಟು. ಎಳೆ ಕಾಯಿಗಳೊಂದಿಗೆ ಉಪ್ಪು ಸೇರಿಸಿ ಕಚಪಚನೇ ತಿಂದು ಬಾಯಲ್ಲಿ ನೀರು ತರಿಸಿಕೊಂಡು ಚಪ್ಪರಿಸುತ್ತಿದ್ದರೆ, ಪಕ್ಕದವರ ಬಾಯಿಯೂ ನೀರಾಗಿ ಜೊಲ್ಲು ಸುರಿಸಿದ್ದುಂಟು. ಕಾಯಿ ಹಣ್ಣಾದಾಗ ಗಾಳಿಗೆ ಉದುರುತ್ತಿದ್ದವು. ಅದನ್ನು ನೋಡಿದ ನಾನು ನಸುಕಿನಲ್ಲಿ ತಮ್ಮಂದಿರನ್ನು ಕರೆದುಕೊಂಡು ಬೆಳದಿಂಗಳಿನಲ್ಲಿ ಆರಿಸಿ ಗುಂಪಿ ಮಾಡಿ ಬುಟ್ಟಿ ತುಂಬಿಕೊಂಡು ಬರುತ್ತಿದ್ದೆ. ಸಿಪ್ಪಿ ಸುಲಿದ ಹಣ್ಣೆಂದು ಕಡೆ, ಬೀಜ ಒಂದು ಕಡೆ ಮಾಡುತ್ತಿದ್ದೆ. ಅವ್ವ ಆ ಹುಣಸೆ ಬೀಜಗಳನ್ನು ಕುದಿಸಿಕೊಡುತ್ತಿದ್ದಳು. ಕಿಸೆ ತುಂಬಾ ಕುದಿಸಿದ ಆ ಬೀಜಗಳನ್ನು ತುಂಬಿಕೊಂಡು ತಿಂಡಿಯಂತೆ ಚಪ್ಪರಿಸುತ್ತಿದ್ದೆ. ಬೀಜ ತೆಗೆದ ಹಣ್ಣನ್ನು ಕಿರಾಣಿ ಅಂಗಡಿಗೆ ಮಾರಿ ಅವ್ವ ಉಪ್ಪು, ಮೆಣಸಿನಕಾಯಿ ಕೊಂಡು ತರುತ್ತಿದ್ದಳು.

ಈ ಮರದ ತಂಪಿನ ನೆರಳಿಗೆ ಊರಿನ ಜನ ಬಂದು ಕೂಡುತ್ತಿದ್ದರು. ದಣಿದವರು ಟವೆಲ್ಲು ಹರವಿ ಒಂದು ಜಂಪು ನಿದ್ದೆ ಮಾಡುತ್ತಿದ್ದರು. ರಣ ರಣ ಹೊಡೆಯುತ್ತಿದ್ದ ಬಿಸಿಲಿಗೆ ಅಂಜಿದ ಎಮ್ಮೆ, ಆಕಳು, ಊರ ಗೂಳಿ ಬಂದು ನೆರಳಿನಾಶ್ರಯಕ್ಕೆ ಒಗ್ಗೂಡುತ್ತಿದ್ದವು. ಗಿಡದ ಪೊದರಲಿ, ಇಲ್ಲ ಗಿಡದ ಟೊಂಗೆಗಳ ಮೇಲೆ ಇಣಚಿ, ಕಾಗೆ, ಗುಬ್ಬಿ, ಗೂಗಿ, ಗಿಳಿ, ತೊದಲಬಾವಲಿ ಆಟ ಆಡುತ್ತಲೇ ಆಶ್ರಯ ಪಡೆಯುತ್ತಿದ್ದವು. ಆ ಗಿಡದ ಎದುರಿನಲಿ ಖುಲ್ಲಾ ಜಾಗ ಇದ್ದುದರಿಂದ ಬೇರೆ ಕಡೆಯಿಂದ ಹೊಟ್ಟೆಗಾಗಿ ಬರುತ್ತಿದ್ದ ಡೊಂಬರಾಟದವರು, ಸರ್ಕಸ್ಸಿನವರು ಅಲ್ಲಿಯೇ ತಮ್ಮ ಠಿಕಾಣಿ ಹೂಡುತ್ತಿದ್ದರು. ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಸರ್ಕಸ್ಸಿನವರಂತೂ ತಿಂಗಳುಗಟ್ಟಲೇ ತಮ್ಮ ಸಂಸಾರವನ್ನು ಅಲ್ಲಿಯೇ ಕಳೆಯುತ್ತಿದ್ದರು. ರಾತ್ರಿ ಹೊತ್ತಿನಲ್ಲಿ ಸರ್ಕಸ್ ನೋಡುವುದೆಂದರೆ ಹಬ್ಬವೇ ಸರಿ. ತಂತಿ ಮೇಲಿನ ನಡುಗೆ, ಬೆಂಕಿ ನುಂಗಿ ಹೊರಗೆ ಉಗಳುವುದು, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಎದುರಿಗಿದ್ದ ಬಾಲಕನ ಮೇಲೆ ಮೊಣಚು ಆಯುಧಗಳನ್ನು ಬಾಣಗಳನ್ನು ಎಸೆಯುತ್ತಿದ್ದರೆ, ಬಾಲಕ ಬಾಣಗಳಿಂದ ಬಚಾವಾಗುವುದನ್ನು ನೋಡುತ್ತಿದ್ದರೆ ಎದೆ ಝಲ್ಲೆನ್ನುತ್ತಿತ್ತು. ಆನೆಗಳ ಗೀಳಿಡುವಿಕೆ, ಸಿಂಹಗಳ ಘರ್ಜನೆ ಈಗಲೂ ಕಣ್ಮುಂದೆ ಕಟ್ಟಿದಂತಿವೆ. ಆಟದ ಮಧ್ಯ ಮಧ್ಯ, ಜೋಕರನ ಪ್ರವೇಶವಾಗುತ್ತಿತ್ತು. ಆತನ ಮಾತು ಕೇಳಿ ನೆರೆದವರೆಲ್ಲ ನಗೆಗಡಲಲ್ಲಿ ತೇಲುತ್ತಿದ್ದರು. ಹಾಸ್ಯದ ಜೊತೆ ಕೈಯಲ್ಲಿ ಖಾಲಿ ಶರೆಯ ಬಾಟಲಿ ಹಿಡಿದು ಕುಡಿದ ಅಮಲಿನಲ್ಲಿದ್ದಂತೆ ನಟಿಸುತ್ತಾ

ಹಾಲು ಕುಡಿದವರು ಹಾದರಗಿತ್ತಿ ಮಕ್ಕಳು
ಶರೆ ಕುಡಿದವರು ಶಿವನ ಮಕ್ಕಳು
ಸಿಂದಿ ಕುಡಿದವರು ದೇವರ ಮಕ್ಕಳು

ಎನ್ನುತ್ತಿದ್ದರೆ ಇಂತಹ ಚಟದ ಭಕ್ತರು ತಾವು ದೇವರ ಮಕ್ಕಳು ಎಂದು ತಮ್ಮನ್ನು ತಾವೇ ಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತಿದ್ದರು. ಹಾಲು ಕುಡಿಯುವವರ ಮುಖ ಇಂಗು ತಿಂದ ಮಂಗನಂತಾಗುತ್ತಿತ್ತು. ಹಾಲು ಶ್ರೀಮಂತರ ಕುಡಿತವಾದರೆ, ಶೆರೆ ಸಿಂದಿ ಬಡವರ, ಶ್ರಮಿಕರ ಕುಡಿತಗಳಾಗಿದ್ದವು. ಇದನ್ನು ಅರಿತೋ ಅರಿಯದೋ ಇಲ್ಲ ಹಾಸ್ಯಕ್ಕಾಗಿ ಅವನು ಅನ್ನುತ್ತಿದ್ದನೋ ನನಗೂ ಆಗ ತಿಳಿದಿರಲಿಲ್ಲ. ಈಗ ಅಂದಿನ ಘಟನೆ ನೆನೆದು ಆಗಾಗ ನಗುತ್ತೇನೆ. ಬಹುಶಃ ಈ ರೀತಿಯ ನಂಬಿಕೆಗಳಿಂದಲೋ ಏನೋ ತಳವರ್ಗದ ದುಡಿಯುವ ಜನ ಕುಡಿತದ ಚಟಕ್ಕೆ ಒಳಗಾಗಿರಬೇಕು. ಈಗಲೂ ಅದರ ದಾಸಾನು ದಾಸರಾಗಿ ಮೂರು ಹೊತ್ತುಂಟೆ ಬಲಿಯಾಗುತ್ತಿರುವಂತೆ ಕಾಣಿಸುತ್ತದೆ.

ಅವನ ಈ ಮಾತು ಎಷ್ಟು ನಿಜವೋ, ಎಷ್ಟು ಸುಳ್ಳೋ ಯಾರೊಬ್ಬರು ಆ ಕುರಿತು ಏನನ್ನು ಮಾತಾಡಿದ್ದನ್ನೂ ನಾನಂತೂ ಕೇಳಿಸಿಕೊಂಡಿರಲಿಲ್ಲ. ಆದರೆ ಅಂದಿನ ಇಂತಹ ಮಾತುಗಳಿಗೆ ಸಾಕ್ಷಿಯಾಗಿ ಆ ಹುಣಸೆಮರವೂ ಇಲ್ಲ. ಅದರ ಪಕ್ಕದಲ್ಲಿ ಹರಿಯುತ್ತಿದ್ದ ಹಳ್ಳವೂ ಇಲ್ಲ. ಆಕಾಶ ಮಲ್ಲಿಗೆಯ ಗಿಡಗಳೂ ಇಲ್ಲ. ಮರದ ಪಕ್ಕದ ರಸ್ತೆಯ ಇನ್ನೊಂದು ಬದಿಗೆ ಅಪ್ಪ ಕಟ್ಟಿದ ದೋಬಿ ಘಾಟ್ ಮಾತ್ರ ಇನ್ನೂ ಜೀವಂತ ಇದೆ. ವರ್ಷದಲಿ ಒಂದೆರಡು ಸಲ ಊರಿಗೆ ಹೋದಾಗ ಅದು ನನ್ನನ್ನು ಎದುರುಗೊಳ್ಳುತ್ತದೆ. ನೋಡಿ ಖುಷಿಯಾಗುತ್ತದೆ. ದೋಬಿ ಘಾಟದಲ್ಲಿ ಬಟ್ಟೆ ಒಗೆಯುವ ಊರಿನ ಹೆಂಗಸರ ಕೈ ಬಳೆಗಳೊಂದಿಗೆ ಅಲ್ಲಿರುವ ಕಲ್ಲುಗಳು ಮಾತನಾಡುತ್ತ ಅಪ್ಪನ ಕತೆ ಹೇಳುತ್ತಿರುವಂತೆ ಭಾಸವಾಗುತ್ತದೆ.

ಮನುಷ್ಯನ ದುರಾಸೆಗೆ ಇದ್ದುದೆಲ್ಲವೂ ಮಾಯ
ಹಾಳು ಮಾಡುವುದೇ ಮನುಷ್ಯನ ಜಾಯಮಾನ

ರಸ್ತೆಯ ಇನ್ನೊಂದು ಅಂಚಿಗೆ ಇದ್ದ, ಅದೇ ಆಕಾಶ ಮಲ್ಲಿಗೆಯ ಗಿಡದ ಬುಡದಲಿ ಕುಳಿತ ಅಪ್ಪ ಕಲ್ಲು ಕಟೆಯುತ್ತಿದ್ದ. ಆ ದಾರಿಯಲಿ ಹಾದು ಹೋಗುವ ಎಲ್ಲರಿಗೂ ಕೈ ಎತ್ತಿ 'ರಂಬರಂಬ್ರಿ ಎಪ್ಪಾ' ಎನುತ್ತಿದ್ದ. ಹೆಚ್ಚಿಗೆ ಕಲಿತ ಯುವಕರನ್ನು ನೋಡಿ, ನಿಲ್ಲಿಸಿ ನನ್ನ ಮಗ ನಿಮ್ಮಂಗ ಎಂದ ಅಕ್ಕಾನೀ, ಎಂದು ಹಲಬುತ್ತಿದ್ದ. ಹೂವಿನ ವಾಸನೆಯಲ್ಲಿ ಅಪ್ಪನ ಮಾತು ಬೇರೊಂದು ರೀತಿಯ ವಾಸನೇ ಗ್ರಹಿಸುತ್ತಿತ್ತೇನೋ. ಬಾಲ್ಯವೆಂದರೆ ಹಾಗೆ ಅಲ್ಲವೇ. ಅದರ ಫಲ ಅಪ್ಪ ಇದ್ದಾಗಲೇ ಅವನ ಕನಸು ನನಸು ಮಾಡಿದ ತೃಪ್ತಿ ನನ್ನದು.

ಚಿನಪನಿ, ಗೋಲಿಗುಂಡು, ಗಜಗು, ಬುಗರೆ ಆಡಿಸುವುದು, ತರತರದ ಬಣ್ಣಗಳ ಗುಂಡಿಗಳ ಆಟಗಳನ್ನು ಆಡುತ್ತ ರಾತ್ರಿ ಬಣ್ಣದ ಗುಂಡಿಗಳ ಕನಸು ಕಾಣುತ್ತಿದ್ದೆ. ರಾತ್ರಿ ನಿದ್ದೆ ಬರುವುತನ ಓದುತ್ತಿದ್ದೆ ಬರೆಯುತ್ತಿದ್ದೆ. ಚಿಮಣಿ, ಲಾಟೀನುಗಳು ಬೆಳಕಾಗುತ್ತಿದ್ದವು. ಕೋಳಿ ಕೂಗಿಗೆ ಸರಿಯಾಗಿ ಏಳುತ್ತಿದ್ದೆ. ದೀಪ ಹೊತ್ತಿಸುತ್ತಿದ್ದೆ. ಮನೆಯಲ್ಲಿ ಎಣ್ಣೆ ಇರದಿದ್ದರೆ ಮನೆಯ ಎದುರು ಪಂಚಾಯತಿಯವರು ಹಚ್ಚುತ್ತಿದ್ದ ರಸ್ತೆ ದೀಪದಲಿ ಪುಸ್ತಕ ತೆರೆಯುತ್ತಿದ್ದೆ. ಪಾನು ಹೊರಳಿಸುತ್ತಿದ್ದೆ. ನೀರು ತರಲೋ, ಹೊಲಕ್ಕೊ ಇಲ್ಲ ಇನ್ನಾವುದಕ್ಕೋ ಹೋಗುವವರು ನನ್ನ ಓದಿನ ಕಾಳಜಿ ನೋಡಿ 'ಒಡ್ಡರ ತಿಮ್ಮಣ್ಣನ ಮಗ ಅದೇಷ್ಟ ಓದತಾನಿ, ಹಗಲರಾತ್ರಿ ಕಣ್ಣಾಗ ಎಣ್ಣೆ ಹಾಕೊಂಡು', ಮಾತಾಡುವದನ್ನು ಅವ್ವ, ಅಪ್ಪನಿಂದ ಕೇಳಿ ಮನಸ್ಸು ಗಾಳಿಯಲಿ ತೇಲುತ್ತಿತ್ತು. ಅವರಿಗೇನು ಗೊತ್ತು ನನ್ನ ಮನೆಯಲಿ ಎಣ್ಣೆ ಇರದ್ದು.

ದೇವರ ಸ್ವಂತ ನಾಡಲ್ಲಿ ಇರುವೆಗೂ ದೇವಾಲಯ!


ಉರುಂಬಚ್ಚನ್ ಗುರುಸ್ಥಾನಂ ದೇಗುಲ ಚಿತ್ರ–ಕೇರಳ ಪ್ರವಾಸೋದ್ಯಮ ಇಲಾಖೆ

ನವೀನ್ ಕುಮಾರ್ ಜಿ.

ಇರುವೆಗಳು ನಿರುಪದ್ರವಿ ಜೀವಿಗಳಾದರೂ ಮನೆಗಳಲ್ಲಿ ಅವುಗಳ ಕಾಟ ವಿಪರೀತವಾದರೆ ಸಾಮಾನ್ಯವಾಗಿ ನಾವೆಲ್ಲ ರಾಸಾಯನಿಕಗಳನ್ನೋ, ಕೀಟನಾಶಕಗಳನ್ನೋ ಸಿಂಪಡಿಸುತ್ತೇವೆ. ಆದರೆ ಕೇರಳದ ಕಣ್ಣೂರಿನ ಪ್ರದೇಶವೊಂದರ ಜನರು ಮಾತ್ರ ದೇವರ ಮೊರೆ ಹೋಗುತ್ತಾರೆ. ಅದು ಅಂತಿಂಥ ದೇವರದ್ದಲ್ಲ ಸಾಕ್ಷಾತ್ ಇರುವೆ ದೇವರ.

ಹೌದು, ಕಣ್ಣೂರಿನ ತೋಟ್ಟಡ ಎಂಬಲ್ಲಿ ಇರುವೆಗಳಿಗಾಗಿಯೇ ನಿರ್ಮಿಸಿರುವ ದೇವಾಲಯವಿದೆ. ಈ ದೇವಾಲಯವನ್ನು ‘ಉರುಂಬಚ್ಚನ್ ಗುರುಸ್ಥಾನಂ’ ಅಥವಾ ‘ಉರುಂಬಚ್ಚನ್ ಕೋಟ್ಟಂ’ ಎಂದು ಕರೆಯಲಾಗುತ್ತದೆ. ಮಲಯಾಳ ಭಾಷೆಯಲ್ಲಿ ‘ಉರುಂಬು' ಎಂದರೆ ಇರುವೆ, 'ಅಚ್ಚನ್' ಎಂದರೆ ತಂದೆ ಎಂದರ್ಥ. ಇಲ್ಲಿ ಯಾವುದೇ ವಿಗ್ರಹದ ಪ್ರತಿಷ್ಠಾಪನೆ ಇಲ್ಲ. ವೃತ್ತಾಕಾರದ ಅಡಿಪಾಯ ಮತ್ತು ಅದರ ಮೇಲೊಂದು ದೀಪ ಸ್ಥಾಪಿಸಲಾಗಿದೆ. ಇದುವೇ ಇರುವೆ ದೇವರ ದೇಗುಲ. ಪಕ್ಕದಲ್ಲೇ ಇರುವ ಮರದಲ್ಲಿ ಕೆಂಪಿರುವೆಗಳು ಗೂಡುಕಟ್ಟಿ ನೆಲೆಸಿವೆ.

ಕ್ಷುಲ್ಲಕ ಜೀವಿ ಎಂದು ಮನುಷ್ಯರು ಉಪೇಕ್ಷೆ ತೋರುವ ಇರುವೆಗಳ ಮುಂದೆಯೇ ಶಿರಬಾಗಿ ನಮಿಸುವ ಮೂಲಕ ನಮ್ಮೊಳಗಿನ ಅಹಂ ಅನ್ನು ಕಳೆಯುವ ಸಂಕೇತವಾಗಿಯೂ ಈ ದೇವಾಲಯವು ನೆಲೆ ನಿಂತಿದೆ.

ಆರಾಧನೆಯ ಮೂಲಕ ಇರುವೆಗಳ ಸಂರಕ್ಷಣೆಯ ಸಂಕಲ್ಪದಿಂದಲೂ ಹಿರಿಯರು ಈ ದೇವಾಲಯವನ್ನು ನಿರ್ಮಿಸುವ ಮೂಲಕ ಪರಿಸರ ರಕ್ಷಣೆಯ ಮಹತ್ವದ ಸಂದೇಶವನ್ನೂ ಸಾರಿದ್ದಾರೆ.

ಮನೆಗಳಲ್ಲಿ ಇರುವೆಗಳ ಕಾಟದಿಂದ ಬಸವಳಿಯುವವರು ಇಲ್ಲಿಗೆ ಬಂದು ತೆಂಗಿನಕಾಯಿ ಸಮರ್ಪಿಸುತ್ತಾರೆ. ಅರ್ಚಕರು ಆ ತೆಂಗಿನಕಾಯಿಯನ್ನು ಒಡೆದು ಅದರ ನೀರನ್ನು ಅಡಿಪಾಯದ ಮೇಲೆ ಸುರಿಯುತ್ತಾರೆ. ಹೀಗೆ ಮಾಡಿದರೆ ಇರುವೆಗಳ ಕಾಟ ತಪ್ಪುತ್ತದೆ ಎಂಬುದು ಇಲ್ಲಿನ ಜನರ ನಂಬಿಕೆ. ಸಂಜೆ ವೇಳೆ ಮಾತ್ರ ಇಲ್ಲಿ ತೆಂಗಿನಕಾಯಿ ಒಡೆಯಲಾಗುತ್ತದೆ.

‘ತಿಂಗಳಿಗೊಮ್ಮೆ ಇಲ್ಲಿ ಪೂಜೆ ಮಾಡಿ ಇರುವೆಗಳಿಗೆ ನೈವೇದ್ಯ ಸಮರ್ಪಿಸಲಾಗುತ್ತದೆ. ಬಳಿಕ ಪಕ್ಕದಲ್ಲೆ ಇರುವ ಉದಯ ಮಂಗಳ ಗಣಪತಿ ದೇವಾಲಯದಲ್ಲಿ ಪೂಜೆ ನಡೆಯುತ್ತದೆ. ಇರುವೆ ದೇವಾಲಯದಲ್ಲಿ ಪ್ರತಿದಿನ ದೀಪ ಬೆಳಗಿಸಲಾಗುತ್ತದೆ’ ಎನ್ನುತ್ತಾರೆ ಗಣಪತಿ ಕ್ಷೇತ್ರ ಸಮಿತಿಯ ಪದಾಧಿಕಾರಿ ವಿ. ಸದಾನಂದನ್.

‘ಮಂಡಲ ಋತುವಿನಲ್ಲಿ ಈ ದೇವಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುತ್ತಾರೆ. ಈಗ ಪ್ರವಾಸಿಗರೂ ಬರುತ್ತಿದ್ದಾರೆ’ ಎಂದು ದೇವಾಲಯದ ಸ್ಥಾನಿಕರಾದ ಬಾಲನ್ ಹೇಳುತ್ತಾರೆ.

ಕಣ್ಣೂರಿನಿಂದ ತಲಶ್ಶೇರಿಗೆ ಹೋಗುವ ದಾರಿಯಲ್ಲಿ ಎಂಟು ಕಿಲೊಮೀಟರ್ ಸಾಗಿದರೆ ಈ ದೇವಾಲಯವನ್ನು ತಲುಪಬಹುದಾಗಿದೆ.

ಈ ದೇವಾಲಯಕ್ಕೆ ಶತಮಾನಗಳ ಇತಿಹಾಸವಿದೆ ಎಂದು ನಂಬಲಾಗಿದೆ. ಈಗಿನ ಇರುವೆ ದೇವಾಲಯದ ಜಾಗದಲ್ಲಿ ಗಣಪತಿ ದೇವಸ್ಥಾನ ನಿರ್ಮಾಣಕ್ಕಾಗಿ ಅಡಿಗಲ್ಲು ಹಾಕಲಾಗಿತ್ತು. ಮರುದಿನ ಬಂದು ನೋಡಿದಾಗ ಅಡಿಗಲ್ಲು ಹಾಕಿದ ಜಾಗದಲ್ಲಿ ಇರುವೆಗಳ ಗೂಡು ಪ್ರತ್ಯಕ್ಷವಾಗಿತ್ತು ಮತ್ತು ಅಡಿಗಲ್ಲು ಅಲ್ಪ ದೂರಕ್ಕೆ ಜರುಗಿತ್ತು. ಈ ಕಾರಣಕ್ಕೆ ಇಲ್ಲಿ ಇರುವೆಗಳ ದೇವಾಲಯ ಮತ್ತು ಪಕ್ಕದಲ್ಲಿ ಗಣಪತಿ ದೇವಾಲಯ ನಿರ್ಮಿಸಲಾಗಿದೆ ಎಂಬುದು ಐತಿಹ್ಯ.

ಐತಿಹ್ಯಗಳು ಏನೇ ಇದ್ದರೂ ಇದೊಂದು ಪ್ರಕೃತಿ ಆರಾಧನೆಯ ಕ್ಷೇತ್ರವಾಗಿ ಗಮನ ಸೆಳೆಯುತ್ತಿದೆ ಮತ್ತು ಭಕ್ತರನ್ನು ಆಕರ್ಷಿಸುತ್ತಿದೆ.

ಕಥೆ

ಮೂಲ: ಸುಭಾಷ್‌ಚಂದ್ರನ್, ಕನ್ನಡಕ್ಕೆ: ಸುನೈಫ್ ಅವರ **ಜ್ಞಾನಸ್ನಾನ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಪ್ರತಿಭಾ ನಂದಕುಮಾರ್ ಅವರ **ಪಕ್ಕದ ಮನೆಯವರು**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಇಬ್ಬಾರಜ್ಜು

ಕುವೆಂಪು ಅವರು ಶ್ರೀರಾಮಕೃಷ್ಣಾಶ್ರಮದಲ್ಲಿರುವಾಗ ರವಿ ಗೋಚರಿಸುವ ಪ್ರಭಾತ ಸಮಯದಲ್ಲಿ ತಿಳಿ ಆಗಸದಲ್ಲಿ ತೇಲಿ ಹೋಗುವ ನೀರು ಕೊಕ್ಕರೆಗಳನ್ನು ನೋಡಿ ‘ಕ್ರೌಂಚಪಂಕ್ತಿ’ ಕವನ ರಚಿಸಿದ್ದಾರೆ. ಅವು ಕರಿಮಣಿಗಳನ್ನು ದಾರದಲ್ಲಿ ವಿರಳವಾಗಿ ಪೋಣಿಸಿದಂತೆ ಒಂದಿಡಿ ಫಲ್ರಾ_ಂಗು ಹಬ್ಬಿಬರುತ್ತವೆ. ಅವುಗಳು ಒಂದರ ಹಿಂದೊಂದು ಎಡೆಬಿಡದೆ ಬರುವ ಬಾಣಗಳಂತೆ (ಪುಂಖಾನುಪುಂಖತ್ವಮಂ ನಟಿಸಿ ತೋರ್ಪಂತೆ) ನಟಿಸಿ ತೋರುತ್ತಿರುತ್ತವೆ. ಅವುಗಳು ಹಾಗೆ ಒಂದರ ಮೇಲೊಂದು, ಒಂದರ ಹಿಂದೊಂದು ಸಾಗುವುದನ್ನು ಕಂಡು ಕುವೆಂಪು ಅವರು ‘ಒಂದೆ ಇಬ್ಬಾರಜ್ಜು ಬಂಧಿಸಿಹುದೆಂಬಂತೆ’ ಎಂದು ಚಿತ್ರಿಸಿದ್ದಾರೆ. ಅವರು ‘ಇಬ್ಬಾರಜ್ಜು’ ಅರ್ಥಾತ್ ‘ಅಪೇಕ್ಷೆಯ ಹಗ್ಗ’ ಎಂಬ ಪದ ಸೃಷ್ಟಿಸಿ, ಅವು ಅಂಕೆಗೊಳಪಟ್ಟಂತೆ, ಪ್ರೀತಿಯಿಂದ ಬಂಧಿಸಲ್ಪಟ್ಟಿರುವಂತಿರುವುದನ್ನು ವರ್ಣಿಸಿರುವುದು ವಿಶಿಷ್ಟವಾಗಿದೆ.

ಒಂದೆ ಇಬ್ಬಾರಜ್ಜು ಬಂಧಿಸಿಹುದೆಂಬಂತೆ,
ನೀಲದಲಿ ನಿಸ್ತಂಭತೋರಣಂ ತೇಲ್ವುದೆನೆ
ಚಲಿಸಿತು ವಿಹಂಗಸಂಘಂ ವಿಯದ್ರಂಗದಲಿ
(ಕ್ರೌಂಚ ಪಂಕ್ತಿ - ಪಕ್ಷಿಕಾಶಿ)

ಮೌಢ್ಯದ ಕತ್ತಲಿಗೆ....

12ನೇ ಪುಟದಿಂದ...

ಕ್ಷೇತ್ರ ಅಧ್ಯಯನದ ಮೂಲಕ ಸಮುದಾಯದ ಮಹಿಳೆಯರೊಂದಿಗೆ ಸಂವಾದ ನಡೆಸಿದರು. ಸಮುದಾಯದ ಸಂಸ್ಕೃತಿ–ಆಚರಣೆಗಳ ಬಗ್ಗೆ ಪ್ರೇಮಾ ಅವರಿಗಿದ್ದ ತಿಳಿವಳಿಕೆಯನ್ನು ಕಂಡು ಹಿರಿಯರು, ಅದರಲ್ಲೂ ನಿರ್ಧಾರ ಕೈಗೊಳ್ಳುವ ಪ್ರಮುಖರು ಪ್ರಭಾವಿತರಾದರು. ಪಿಎಚ್‌.ಡಿ ಪೂರ್ಣಗೊಳಿಸುವ ಮೂಲಕ ಡಾಕ್ಟರೇಟ್ ಪಡೆದ ಸಮುದಾಯದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು, ಜನರ ಪ್ರೀತಿಗೂ ಕಾರಣರಾದರು.

ಸಮುದಾಯ ಮತ್ತು ಮಹಿಳೆಯರ ವಿಶ್ವಾಸ ಗಳಿಸಲು ಪ್ರೇಮಾ ಅವರಿಗೆ ಎರಡು ವಿಷಯಗಳು ನೆರವಾದವು. ಅನುಭವ ಆಧಾರಿತ ಪ್ರಯತ್ನ ಒಂದೆಡೆಯಾದರೆ, ಇನ್ನೊಂದೆಡೆ ಅವರು ಸಮುದಾಯವನ್ನಾಗಲಿ, ಅದರ ಸಂಸ್ಕೃತಿಯನ್ನಾಗಲಿ ದೂಷಿಸದೆ, ಕಾಲಕ್ಕೆ ಅನುಗುಣವಾಗಿ ಹೇಗೆ ಬದಲಾವಣೆಗಳನ್ನು ಕಂಡುಕೊಳ್ಳಬೇಕೆಂದು ವಿವರಿಸಿದರು ಎಂದು ಸಮುದಾಯದ ಸಾಮಾಜಿಕ ಕಾರ್ಯಕರ್ತ ಉಜ್ಜಜ್ಜಿ ರಾಜಣ್ಣ ಹೇಳುತ್ತಾರೆ.

ಕಾನೂನಿನಲ್ಲಿ ಈ ಪದ್ಧತಿಗೆ ನಿಷೇಧವಿದ್ದರೂ, ಅರಿವು ಮತ್ತು ಸಮಾಲೋಚನೆಯಿಂದ ಮಾತ್ರ ಪರಿಸ್ಥಿತಿಯಲ್ಲಿ ಬದಲಾವಣೆ ತರಲು ಸಾಧ್ಯ. ಶತಮಾನಗಳಿಂದ ಸ್ವಾಭಾವಿಕವಾಗಿ ಇಂಥ ನಂಬಿಕೆಗಳನ್ನು ಬೆಳೆಸಿಕೊಂಡಿರುವ ಸಮುದಾಯದ ಮೇಲೆ ಏಕಾಏಕಿ ಬದಲಾವಣೆ ಹೇರಲು ಸಾಧ್ಯವಿಲ್ಲ ಎಂಬುದು ಪ್ರೇಮಾ ಅವರ ಅಭಿಪ್ರಾಯ. ಮುಟ್ಟಿನ ಸಮಯದಲ್ಲಿ ಮಹಿಳೆಯರು ವಾಸಿಸಲು ಸರ್ಕಾರದ ಯೋಜನೆಗಳಡಿ ‘ಮುಟ್ಟಿನ ಮನೆ’ ನಿರ್ಮಾಣ ಮಾಡುವುದನ್ನೂ ಅವರು ಒಪ್ಪುವುದಿಲ್ಲ. ಹೀಗೆ ಕಟ್ಟಡ ನಿರ್ಮಾಣ ಮಾಡುವುದರಿಂದ ಇಂಥ ಅನಿಷ್ಟ ಆಚರಣೆಗಳಿಗೆ ಬೆಂಬಲ, ಪ್ರೋತ್ಸಾಹ ನೀಡಿದಂತಾಗುತ್ತದೆ ಎನ್ನುವುದು ಅವರ ಅಭಿಮತ.

ಹಲವು ವರ್ಷಗಳ ಅವಿರತ ಶ್ರಮದ ನಂತರ 2014ರಲ್ಲಿ ಕೊನೆಗೂ ಅವರಿಗೆ ಮೊದಲ ಯಶ ಲಭಿಸಿತು. ಮುಟ್ಟಿನ ಅವಧಿಯಲ್ಲಿ ಮಹಿಳೆಯರನ್ನು ಹೊರಗಿಡುವ ಸಂಪ್ರದಾಯಕ್ಕೆ ಕೊನೆ ಹಾಡಲು ಚಿತ್ತಯ್ಯನಹಟ್ಟಿ ಗ್ರಾಮವು ನಿರ್ಧರಿಸಿತು. ಆದರೆ ಈಗಲೂ ಕೆಲವು ಮನೆಗಳಲ್ಲಿ ಸಾಂಕೇತಿಕವಾಗಿ ಈ ಪದ್ಧತಿ ಆಚರಣೆಯಲ್ಲಿದೆ. ಮುಟ್ಟಾದ ಮಹಿಳೆಯರು ಮನೆಯ ವರಾಂಡದಲ್ಲಿ ಇರುತ್ತಾರೆ.

ಈ ಯಶಸ್ಸಿನಿಂದ ಪ್ರೇರಿತರಾದ ಪ್ರೇಮಾ ಅವರು ಇತರ ಹಟ್ಟಿಗಳಲ್ಲೂ ಇಂಥದ್ದೇ ಬದಲಾವಣೆ ತರಲು ಯತ್ನಿಸಿದರು. 2014ರಲ್ಲಿ ರಾಜ್ಯ ಸರ್ಕಾರವು ಈ ವಿಚಾರ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಪ್ರೇಮಾ ಅವರನ್ನು ಆಹ್ವಾನಿಸಿತು. ಇದರಿಂದಾಗಿ ಅವರು ತಂಡದೊಂದಿಗೆ ಪ್ರತಿ ಕಾಡುಗೊಲ್ಲ ಗ್ರಾಮಕ್ಕೆ ಭೇಟಿ ನೀಡಿದರು.

ತುಮಕೂರು ಜಿಲ್ಲೆಯ ರಾಮಪ್ಪನಹಟ್ಟಿ ನಿವಾಸಿಗಳು ಪ್ರೇಮಾ ಅವರ ಕಾಯಕವನ್ನು ಕಣ್ಣಾರೆ ಕಂಡಿದ್ದಾರೆ. ಇಲ್ಲಿನ ನಿವಾಸಿ ರಾಜಮ್ಮ ತಮಗಾದ ಅನುಭವವನ್ನು ಹೀಗೆ ಹೇಳುತ್ತಾರೆ, ‘ವಿದ್ಯಾರ್ಥಿನಿ ಮತ್ತು ಬಾಣಂತಿ ಜೊತೆಗೆ ನಾನೂ ‘ವನವಾಸ’ದಲ್ಲಿದ್ದೆ. ಜೋರಾಗಿ ಮಳೆ ಸುರಿಯುತ್ತಿತ್ತು. ನಮ್ಮನ್ನು ಒಳಗೆ ಬಿಟ್ಟುಕೊಳ್ಳುವಂತೆ ಹಿರಿಯರನ್ನು ಕೇಳಿಕೊಂಡೆವು. ಆದರೆ ಅವರು ನಮ್ಮ ಕೂಗನ್ನು ಕೇಳಿಸಿಕೊಳ್ಳಲೇ ಇಲ್ಲ. ‘ಹೋರಾಟಗಾರ್ತಿ’ಯಾಗಲು ಪ್ರಯತ್ನಿಸಿದ್ದಕ್ಕಾಗಿ ಕುಟುಂಬಸ್ಥರು ನನಗೆ ಛೀಮಾರಿ ಹಾಕಿದರು. ಘಟನೆಯ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡಿದ ಪ್ರೇಮಾ ಅವರು ಕೂಡಲೇ ಸ್ಥಳಕ್ಕೆ ಧಾವಿಸಿ ಮಧ್ಯಪ್ರವೇಶಿಸಿದರು. ಗ್ರಾಮದ ಪೂಜಾರಿ ಮತ್ತು ನಿವಾಸಿಗಳೊಂದಿಗೆ ಮಾತುಕತೆ ನಡೆಸಿದರು. ಹಳೆಯ ಪದ್ಧತಿಗೆ ಮರಳುವುದಿಲ್ಲ ಎಂದು ಗ್ರಾಮಸ್ಥರು ಪ್ರತಿಜ್ಞೆ ಮಾಡಿದರು.

ಆದರೆ ಹೋರಾಟ ಇಲ್ಲಿಗೆ ಮುಗಿದಿಲ್ಲ. ಮಹಿಳೆಯರು ಮುಟ್ಟು ಮತ್ತು ಪ್ರಸವಾನಂತರದ ಅವಧಿಯಲ್ಲಿ ಮನೆಯಲ್ಲಿಯೇ ಇರಲು ಆರಂಭಿಸಿದ ಬಳಿಕ ಸಮುದಾಯಕ್ಕೆ ಕೆಡುಕು ಉಂಟಾಗಿದೆ ಎಂದು ಚಿತ್ತಯ್ಯನಹಟ್ಟಿಯ ಕೆಲ ಪುರುಷರು ಭಾವಿಸಿದ್ದಾರೆ. ‘ಹಳೆ ಪದ್ಧತಿಯನ್ನು ಮರು ಜಾರಿಗೆ ತರಲು ಚಿಂತಿಸುತ್ತಿದ್ದೇವೆ’ ಎನ್ನುತ್ತಾರೆ 45 ವರ್ಷದ ಕರಿಯಪ್ಪ.

ಆದರೆ ಅದೇ ಗ್ರಾಮದ 17 ವರ್ಷದ ಜ್ಯೋತಿ ಅನಿಷ್ಟ ಆಚರಣೆಗೆ ಪೂರ್ಣವಿರಾಮ ಹಾಕುವ ನಿರ್ಧಾರಕ್ಕೆ ಬದ್ಧಳಾಗಿದ್ದಾಳೆ. ‘ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಮಹಿಳೆಯರು ಭಾಗವಹಿಸಬೇಕು. ನಾನು ಸಹ ಪ್ರೇಮಾ ಅಕ್ಕನೊಂದಿಗೆ ಕೆಲಸ ಮಾಡುತ್ತೇನೆ. ಅವರ ಹಾದಿಯಲ್ಲೇ ಮುನ್ನಡೆಯುತ್ತೇನೆ. ಯಾರ ಒತ್ತಡಕ್ಕೂ ಮಣಿಯುವುದಿಲ್ಲ’ ಎನ್ನುತ್ತಾಳೆ ಆಕೆ.

